# ಹಾಜಿ ಅಬ್ದುಲ್ಲಾ ಸಾಹೇಬ್

## ಪ್ರಕಾಶಕರ ಮಾತು

ಕಾರ್ಪೊರೇಶನ್ ಬ್ಯಾಂಕಿನ ಸ್ಥಾಪಕ ಅಧ್ಯಕ್ಷರಾದ ಖಾನ್ ಬಹದ್ದೂರ್ ಹಾಜಿ ಅಬ್ದುಲ್ಲಾ ಹಾಜಿ ಖಾಸಿಂ ಸಾಹೇಬ್ ಬಹದ್ದುರ್ ಅವರ ಹೆಸರು ಮಾತ್ರವಲ್ಲ ವ್ಯಕ್ತಿತ್ವವೂ ದೊಡ್ಡದು. ಅವರು ಗತಿಸಿದ ೭೦ ವರ್ಷಗಳ ನಂತರವೂ ಕರಾವಳಿಯ ಹಳೆಯ ತಲೆಮಾರಿನ ಸ್ಮೃತಿಪಟಲದಲ್ಲಿ ಅಬ್ದುಲ್ಲಾ ಸಾಹೇಬರ ವ್ಯಕ್ತಿತ್ವ, ಉದಾರ ಮನೋಭಾವ ಹಾಗೂ ಸಮಾಜಕ್ಕೆ ಅವರು ನೀಡಿದ ಕೊಡುಗೆಗಳು ಉಳಿದುಕೊಂಡಿವೆ. ಆದರೆ ಲಿಖಿತರೂಪದಲ್ಲಿ ಅವರ ಬದುಕು ಹಾಗೂ ಸಾಧನೆಗಳ ವಿವರಗಳು ದಾಖಲಾಗಿರುವುದು ಇಲ್ಲವೇ ಇಲ್ಲ ಅನ್ನುವಷ್ಟು ಕಡಿಮೆ.

ಅಬ್ದುಲ್ಲಾ ಸಾಹೇಬರ ಜೀವನ ಹಾಗೂ ಸಾಧನೆಗಳ ಬಗ್ಗೆ ವಿವರಗಳನ್ನು ಸಂಗ್ರಹಿಸಿ ಅವುಗಳನ್ನು ಒಂದು ಗ್ರಂಥರೂಪದಲ್ಲಿ ಪ್ರಕಟಿಸುವ ಅಗತ್ಯವನ್ನು ನಮ್ಮ ಬ್ಯಾಂಕು ಬಹಳ ಹಿಂದೆಯೇ ಗುರುತಿಸಿತ್ತು. ಸಾಹಿತಿ ದಿ. ಕು. ಶಿ. ಹರಿದಾಸ ಭಟ್, ಸಂತೋಷ ಕುಮಾರ್ ಗುಲ್ವಾಡಿ ಹಾಗೂ ಇನ್ನೂ ಅನೇಕರು ಆದಷ್ಟು ಶೀಘ್ರದಲ್ಲಿ ಈ ಕೆಲಸ ಆಗಲಿ ಎಂದು ಆಶಿಸಿದ್ದರು. ಬ್ಯಾಂಕು ಶತಮಾನೋತ್ಸವವನ್ನು ಆಚರಿಸುತ್ತಿರುವ ಈ ಸಂದರ್ಭದಲ್ಲಿ ಬಹುಜನರ ಬಹುದಿನಗಳ ಮಹದಾಸೆಯೊಂದು ಈಡೇರುತ್ತಿರುವುದು ತುಂಬಾ ಸಂತೋಷದ ಸಂಗತಿ.

ಈ ಗ್ರಂಥವನ್ನು ರಚಿಸುವ ರಚಿಸುವ ಜವಾಬ್ದಾರಿಯನ್ನು ಯಾರಿಗೆ ವಹಿಸಬಹುದು ಅಂತ ನಾವು ಯೋಚಿಸಿದಾಗ ನಮಗೆ ಮೊದಲು ನೆನಪಾದವರು ಪ್ರಸಿದ್ಧ ವಿಮರ್ಶಕರೂ, ಉಡುಪಿಯ ಪೂರ್ಣಪ್ರಜ್ಞ ಕಾಲೇಜಿನ ಪ್ರಾಧ್ಯಾಪಕರೂ ಆದ ಪ್ರೊ. ಮುರಳೀಧರ ಉಪಾಧ್ಯ ಹಿರಿಯಡಕ ಅವರು. ೧೦೦೧ರಲ್ಲಿ ಅವರು ಹಾಜಿ ಅಬ್ದುಲ್ಲಾ ಸಾಹೇಬರ ಬಗ್ಗೆ ವಿವಿಧ ಲೇಖಕರು ಬರೆದ ಲೇಖನಗಳನ್ನು ಒಳಗೊಂಡ ಒಂದು ಕಿರು ಹೊತ್ತಗೆಯನ್ನು ಸಂಪಾದಿಸಿ ಪ್ರಕಟಿಸಿದ್ದರು. ಅಬ್ದುಲ್ಲಾ ಸಾಹೇಬರ ಬಗ್ಗೆ ಅಪಾರ ಶ್ರಮ ವಹಿಸಿ ಸಾಕಷ್ಟು ಮಾಹಿತಿ ಸಂಗ್ರಹಿಸಿರುವ ಪ್ರೊ. ಉಪಾಧ್ಯರು ಅವರ ಜೀವನ ಚರಿತ್ರೆಯನ್ನು ದಾಖಲಿಸಲು ಅತ್ಯಂತ ಸಮರ್ಥ ವ್ಯಕ್ತಿ ಎಂಬ ಕಾರಣಕ್ಕಾಗಿ ಈ ಪುಸ್ತಕವನ್ನು ರಚಿಸುವಂತೆ ನಾವು ಅವರನ್ನು ಕೋರಿಕೊಂಡೆವು. ಶ್ರೀಯುತರು ತಮ್ಮ ಇತರ ಕೆಲಸಗಳ ಒತ್ತಡದ ನಡುವೆಯೂ ಕ್ಲಪ್ತ ಸಮಯದಲ್ಲಿ ತಮಗೆ ವಹಿಸಿದ ಕೆಲಸವನ್ನು ಅಚ್ಚುಕಟ್ಟಾಗಿ ನಿರ್ವಹಿಸಿದ್ದಾರೆ.

ನಮ್ಮ ಸ್ಥಾಪಕಾಧ್ಯಕ್ಷರ ಬಗೆಗಿನ ಈ ಪುಸ್ತಕದಲ್ಲಿ ಆ ಕಾಲದ ಕರಾವಳಿ ಜಿಲ್ಲೆಯ ಆರ್ಥಿಕ, ಸಾಮಾಜಿಕ ಪರಿಸ್ಥಿತಿಯ ಚಿತ್ರಣವಿದೆ. ಅಬ್ದುಲ್ಲಾ ಸಾಹೇಬರ ವರ್ಣರಂಜಿತ ವ್ಯಕ್ತಿತ್ವದ ಜೊತೆಗೆ ಅವರೊಂದಿಗೆ ದುಡಿದ ಇತರ ಮಹನೀಯರ ಕೊಡುಗೆಯೂ ದಾಖಲಾಗಿದೆ.

ಐತಿಹಾಸಿಕವಾಗಿ ತುಂಬ ಮಹತ್ವದ ಈ ಕಿರುಹೊತ್ತಗೆ ನಮ್ಮ ಬ್ಯಾಂಕಿನ ಉದ್ಯೋಗಿಗಳಿಗೆ, ಗ್ರಾಹಕರಿಗೆ ಮಾತ್ರವಲ್ಲದೆ ಚರಿತ್ರೆಯಲ್ಲಿ ಆಸಕ್ತಿ ಹೊಂದಿದ ಎಲ್ಲರಿಗೂ ಪ್ರಿಯವಾಗುವುದರಲ್ಲಿ ಸಂಶಯವಿಲ್ಲ.

ದಾಖಲೆಗಳ ಕೊರತೆಯಿಂದಾಗಿ ಹಾಜಿ ಅಬ್ದುಲ್ಲಾ ಅವರಂಥ ಮೇರು ವ್ಯಕ್ತಿತ್ವದ ಮಹಾಪುರುಷರ ಜೀವನ – ಸಾಧನೆಗಳ ಬಗ್ಗೆ ಇಲ್ಲಿ ಹೇಳದೆ ಉಳಿದಿರುವ ಸಂಗತಿಗಳು ಅನೇಕ ಇರಬಹುದು. ನಮ್ಮ ಸ್ಥಾಪಕಾಧ್ಯಕ್ಷರು ಬಾಳಿ ಬದುಕಿದ ರೀತಿಯನ್ನು ಬರಹದಲ್ಲಿ ದಾಖಲಿಸುವಲ್ಲಿ ಇದೊಂದು ಚಿಕ್ಕ ಪ್ರಯತ್ನ. ಇದು ಅವರ ಬಗ್ಗೆ ಇನ್ನಷ್ಟು ಸಮಗ್ರವಾದ ಪುಸ್ತಕವನ್ನು ಹೊರತರಲು ಪ್ರೇರಣೆ ನೀಡುವಂತಾಗಲಿ ಎಂಬುದೆ ನಮ್ಮ ಆಶಯ.

ಸಮಯಕ್ಕೆ ಸರಿಯಾಗಿ ಪುಸ್ತಕವನ್ನು ಸಿದ್ಧಪಡಿಸಿದ ಲೇಖಕರಾದ ಪ್ರೊ. ಮುರಳೀಧರ ಉಪಾಧ್ಯರಿಗೆ ಕಾರ್ಪೊರೇಶನ್ ಬ್ಯಾಂಕಿನ ಪರವಾಗಿ ಹಾರ್ದಿಕ ಅಭಿವಂದನೆ ಹಾಗೂ ಕೃತಜ್ಞತೆಗಳನ್ನು ಸಲ್ಲಿಸುತ್ತೇವೆ.

**ವಿ.ಕೆ. ಚೋಪ್ರಾ**
ಅಧ್ಯಕ್ಷ ಹಾಗೂ ವ್ಯವಸ್ಥಾಪಕ ನಿರ್ದೇಶಕರು
ಮಂಗಳೂರು
೨೮.೦೨.೨೦೦೬

# ಗ್ರಂಥಋಣ


**ಇಂಗ್ಲಿಷ್**

1. A short History of the Canara Banking Corpotation, Udupi (Silver Jubilee -1931)

2. Bank Serves the Nation – The fifty year story of the canara Banking Corporation Ltd. (1906-1956)

3. Bipin Chandra Amoles Tripathi Borun De- ‘Freedom Struggle’ 1972 Nation Book Trust, New Delhi.

4. John Sturrockk (1894) South Canara – Vol. 1, Madars. Reprint – 2003 (Karnataka Gazetter Departments Bangalore)

5. Kamath M.V. (1997) – Corporation Bank – A Corporate Journey – Publ Corporation Bank, Mangalore.

6. Wahab Doddamane A. 1993 – Muslims in Dakshina Kannada

**ಕನ್ನಡ**

೧. ಅಡ್ಡನಡ್ಕ ಕೃಷ್ಣಭಟ್ (ಸಂ.), ೧೯೭೭-`ಸುದರ್ಶನ’ (ಡಾ. ತೋನ್ಸೆ ಮಾಧವ ಪೈ ಅಭಿನಂದನ ಗ್ರಂಥ), ವಿಜಯ ಕಾಲೇಜು ಮುಲ್ಕಿ.

೨. ಗೋಪಾಲಕೃಷ್ಣ ಅಡಿಗ ಎಂ. – ಅಡಿಗರ ಇಪ್ಪತ್ತೈದು ಕವಿತೆಗಳು, ಅಕ್ಷರ ಪ್ರಕಾಶನ, ಹೆಗ್ಗೋಡು.

೩. ಡಾ| ನವೀನಚಂದ್ರ ಕೃ. ತಿಂಗಳಾಯ ೧೯೮೬ – ‘ಕರ್ನಾಟಕದಲ್ಲಿ ಬ್ಯಾಂಕುಗಳ ಹುಟ್ಟು ಮತ್ತು ಬೆಳವಣಿಗೆ’, ಬೆಂಗಳೂರು.

೪. ಪಂಜೆ ಮಂಗೇಶ ರಾವ್, ೧೯೭೮ – ಪಂಜೆಯವರ ಕೃತಿಗಳು ನಂ.೧ – ಓರಿಯಂಟ್ ಲಾಂಗ್‌ಮನ್

೫. ಮುಕುಂದ ಪ್ರಭು ಎಂ. ೨೦೦೦ – ‘ಪೊಲಿ’ (ಕೆನರಾ – ೨೦೦ ಸಂದರ್ಭ ನೆನಪಿನ ಸಂಪುಟ) (ಪ್ರ) ಜಿಲ್ಲಾಧಿಕಾರಿ, ಮಂಗಳೂರು

೬. ಮುರಳೀಧರ ಉಪಾಧ್ಯ ಹಿರಿಯಡಕ, ಎಚ್. ಡುಂಡಿರಾಜ್(ಸಂ). ೨೦೦೧, – ಹಾಜಿ ಅಬ್ದುಲ್ಲಾ ಸಾಹೇಬರು' (ಪ್ರ.)- 'ಸಖೀಗೀತ' ದೊಡ್ಡನಗುಡ್ಡೆ, ಉಡುಪಿ.

೭. ಮುರಳೀಧರ ಉಪಾಧ್ಯ ಹಿರಿಯಡಕ (ಸಂ.) ೨೦೦೩ – 'ಸಂಭ್ರಮ' – ೧ (ಉಡುಪಿ ಉತ್ಸವದ ಸವಿನೆನಪಿನ ಸಂಚಿಕೆ), ಪ್ರ. – ಜಿಲ್ಲಾಧಿಕಾರಿ ಉಡುಪಿ.

೮. ಮುರಳೀಧರ ಉಪಾಧ್ಯ ಹಿರಿಯಡಕ (ಸಂ.) ೨೦೦೪, 'ಸಂಭ್ರಮ' – ೨ (ಉಡುಪಿ ಉತ್ಸವದ ಸವಿನೆನಪಿನ ಸಂಚಿಕೆ), ಪ್ರ. – ಜಿಲ್ಲಾಧಿಕಾರಿ ಉಡುಪಿ.

೯. ಮುರಳೀಧರ ಉಪಾಧ್ಯ ಹಿರಿಯಡಕ, ೧೯೯೬ – ಎಸ್ ಯು. ಪಣಿಯಾಡಿ (ತುಳು)
ಪ್ರ – ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ, ಮಂಗಳೂರು.

೧೦. ಮುರಳೀಧರ ಉಪಾಧ್ಯ – ಹಿರಿಯಡಕ, ೧೯೯೭ ಎಸ್. ಯು. ಪಣಿಯಾಡಿ (ಕನ್ನಡ)
ಪ್ರ. – ಪ್ರಸಾರಾಂಗ, ಮಂಗಳೂರು ವಿಶ್ವವಿದ್ಯಾನಿಲಯ.

೧೧. ಮುರಳೀಧರ ಉಪಾಧ್ಯ, ಹಿರಿಯಡಕ ೧೯೮೯ – ಕಯ್ಯಾರ ಕಿಞ್ಞಣ್ಣ ರೈ ಪ್ರ – ಕಯ್ಯಾರ ಅಭಿವಂದನ ಸಮಿತಿ, ಉಡುಪಿ.

೧೨. ಮುರಳೀಧರ ಉಪಾಧ್ಯ ಹಿರಿಯಡಕ, ಡಾ. ಪಿ. ಎನ್. ನರಸಿಂಹ ಮೂರ್ತಿ (ಸಂ.) ದಕ್ಷಿಣ ಕನ್ನಡದ ದೇವಾಲಯಗಳು
ಪ್ರ. – ಶ್ರೀ ಜನಾರ್ಧನ ಮಹಾಕಾಳಿ ದೇವಸ್ಥಾನ, ಅಂಬಲಪಾಡಿ.

೧೩. ವಿಜು ಪುಣಚ – ೧೮ ಜನವರಿ ೨೦೦೬ – ಅಜೇಯ ಶತಕ (ಕಾರ್ಪೊರೇಶನ್ ಬ್ಯಾಂಕ್)
'ಪ್ರಜಾವಾಣಿ' (ಮಂಗಳೂರು, ವಾಣಿಜ್ಯ ಪುರವಣಿ).

೧೪. ವೈದೇಹಿ – ೨೦೦೫ 'ಮುಂತಾದ ಕೆಲ ಪುಟಗಳು' ಶ್ರೀಮತಿ ಸರಸ್ವತಿ ಬಾಯಿ ರಾಜವಾಡೆ (ಗಿರಿಬಾಲೆ)ಯವರ ಕೆಲವು ನೆನಪುಗಳು) (ದೇಶ -ಕಾಲ') ಸಂ. ವಿವೇಕ ಶಾನುಭಾಗ್, ಸಂಪುಟ -೧, ಸಂಚಿಕೆ ೧, ಬೆಂಗಳೂರು.

೧೯. ಶಿವರಾಮ ಕಾರಂತ -೧೯೪೭ 'ಔದಾರ್ಯದ ಉರುಳಲ್ಲಿ' (ಕಾದಂಬರಿ) ಮೂರನೇ ಮುದ್ರಣ – ೧೯೮೨

೨೦. ಶಂಕರ ಐ. ಹೆಗಡೆ (ಸಂ.) ೧೯೮೮ – ಅಮೃತ (ಸಂಸ್ಮರಣ ಸಂಚಿಕೆ) – ಉಡುಪಿ ಕೋ ಆಪರೇಟಿವ್ ಬ್ಯಾಂಕ್ ಲಿ. ಉಡುಪಿ.

೨೧. 'ಸುದರ್ಶನ' (ಕನ್ನಡ ಪತ್ರಿಕೆ) ಏಪ್ರಿಲ್ ೧೮೯೫, ಉಡುಪಿ.

೨೨. 'ಸ್ವದೇಶಾಭಿಮಾನಿ' ಮಂಗಳೂರು, ೩೦ ಜುಲೈ ೧೯೦೯, ಸಂ – ಎ. ಎಸ್. ಕಾಮತ್

೨೩. 'ಸ್ವದೇಶಾಭಿಮಾನಿ', ಮಂಗಳೂರು – ೮ ಅಕ್ಟೋಬರ್ ೧೯೦೯

೨೪. 'ಸ್ವದೇಶಾಭಿಮಾನಿ', ಮಂಗಳೂರು ೧೬ ಆಗಸ್ಟ್ ೧೯೩೫.

೨೫. ಹರಿದಾಸ ಭಟ್ ಕು.ಶಿ, ೧೯೯೩, 'ಲೋಕಭಿರಾಮ', (ನಾಲ್ಕನೆಯ ಸಂಪುಟ ೧೯೭೭ – ೧೯೮೬), ಮಣಿಪಾಲ.

<u>**ಮಾಹಿತಿನೀಡಿದವರು**</u>

೧. ಅನುಪ್‌ರಾಮ್ ನಾನಾಲಾಲ್ ಪಂಡ್ಯಾ, ಉಡುಪಿ (೧೯೨೨-೧೯೫೫)

೨. ನಸೀಬ್ ಸಾಹೇಬ್, ಕುಂಜಿಬೆಟ್ಟು, ಉಡುಪಿ

೩. ಎಸ್.ಪಿ. ನಾಯಕ್, ಕಾರ್ಪೊರೇಶನ್ ಬ್ಯಾಂಕಿನ ನಿವೃತ್ತ ಅಧಿಕಾರಿ, ಉಡುಪಿ.

೪. ಯು.ಆರ್. ಜಯವಂತ, ಉಡುಪಿ.

೫. ಶ್ರೀ ವಿಶ್ವೇಶತೀರ್ಥ ಸ್ವಾಮೀಜಿ, ಪೇಜಾವರ ಮಠ, ಉಡುಪಿ.

೬. ಶ್ರೀ ನಿ. ಅಣ್ಣಾಜಿ ಬಲ್ಲಾಳ, ಧರ್ಮದರ್ಶಿ.

ಶ್ರೀ ಜನಾರ್ದನ ಮಹಾಕಾಳಿ ದೇವಸ್ಥಾನ, ಉಡುಪಿ.

೭. ಸಂತೋಷ ಕುಮಾರ ಗುಲ್ವಾಡಿ, ಬೆಂಗಳೂರು.

೮. ಶ್ರೀ ಸದಾನಂದ ಶೇಟ್, ಕಾರ್ಪೊರೇಶನ್ ಬ್ಯಾಂಕಿನ ನಿವೃತ್ತ ಅಧಿಕಾರಿ, ಉಡುಪಿ.

೯. ಡಾ. ವಿ.ಎಸ್. ಆಚಾರ್ಯ, ವೈದ್ಯಕೀಯ ಶಿಕ್ಷಣ ಸಚಿವರು, ಕರ್ನಾಟಕ ಸರಕಾರ.

೧೦. ಶ್ರೀ ಗಣಪತಿ ಕಾಮತ್, ಕಾಮತ್ ಮೆಡಿಕಲ್ಸ್, ಬಡಗುಪೇಟೆ, ಉಡುಪಿ.

* * *

## ಲೇಖಕರ ಮಾತು

ನನ್ನ ಗುರುಗಳಾಗಿದ್ದ ಕು.ಶಿ. ಹರಿದಾಸ ಭಟ್ಟರು ೧೯೮೫ರ ಆಗಸ್ಟ್ ೧೨ರಂದು 'ಉದಯವಾಣಿ'ಯ ತನ್ನ 'ಲೋಕಾಭಿರಾಮ' ಅಂಕಣದಲ್ಲಿ 'ಉಡುಪಿಯ ಅಕಬರ ಹಾಜಿ ಅಬ್ದುಲ್ಲಾ ಸಾಹೇಬರು' ಎಂಬ ಲೇಖನ ಬರೆದರು. "ಇಂದು ರಚನಾತ್ಮಕ ಸಾಮಾಜಿಕ ಕರ್ತವ್ಯಗಳೆಂದು ನಾವು ಪಟ್ಟಿ ಮಾಡುವ ಹಲವಾರು ಕೆಲಸಗಳನ್ನು ವೈಯಕ್ತಿಕ ನೆಲೆಯಲ್ಲಿ ಮಾಡಿ, ಜನರ ನಾಲಗೆಯಲ್ಲಿ ತಮ್ಮ ಚಿರಂತನ ಸ್ಮಾರಕವನ್ನು ಕಟ್ಟಿ ಅಳಿದು ಹೋದ ಹಾಜಿ ಅಬ್ದುಲ್ಲಾ ಸಾಹೇಬರ ನೆನಪು ಉಡುಪಿಯ ಮಟ್ಟಿಗೆ ಮರೆಯಬಾರದ ಒಂದು ನೆನಪು ಆಗಿದೆ... ಅವರನ್ನು ಬಲ್ಲ ಮಂದಿ ಬದುಕಿರುವಾಗಲೇ ಅವರ ಜೀವನಚರಿತ್ರೆ ಒಂದು ರಚಿತವಾಗಬೇಕಾದ್ದು ಅಗತ್ಯ. ಅವರ ಜೀವನದ ಪುಟಗಳಲ್ಲಿ ಅಡಕಗೊಂಡಿರುವ ಧರ್ಮತತ್ವ, ಶಾಂತಿತತ್ವ, ಐಕ್ಯ ತತ್ವ, ದಾನ ಬುದ್ಧಿ ಒಂದಿಷ್ಟಾದರೂ ಇಂದಿನ ಧುರೀಣರನ್ನು ಸ್ಪರ್ಶಿಸಬೇಕು..." ಎಂಬ ಕು.ಶಿ. ಹರಿದಾಸ ಭಟ್ಟರ ಮಾತು ಹಾಜಿ ಅಬ್ದುಲ್ಲಾ ಅವರ ವ್ಯಕ್ತಿತ್ವದ ಕುರಿತು ನನ್ನಲ್ಲಿ ಕುತೂಹಲ ಮೂಡಿಸಿತು.

ನಾನು ಮತ್ತು, ನನ್ನ ಕವಿ ಮಿತ್ರ, ಕಾರ್ಪೊರೇಶನ್ ಬ್ಯಾಂಕ್ ಮುಖ್ಯ ಪ್ರಬಂಧಕ ಶ್ರೀ ಎಚ್. ಡುಂಡಿರಾಜರು ೧೯೯೫ರಲ್ಲಿ ಹಾಜಿ ಅಬ್ದುಲ್ಲಾ ಅವರ ಕುರಿತು ಮಾಹಿತಿ ಸಂಗ್ರಹಿಸಲು ಆರಂಭಿಸಿದೆವು. ಆಗ ಕಾರ್ಪೊರೇಶನ್ ಬ್ಯಾಂಕಿನ ಅಧ್ಯಕ್ಷರಾಗಿದ್ದ ಶ್ರೀ ಕೆ. ರಾಮಮೂರ್ತಿ ಅವರು ನಾವು ಸಿದ್ಧಪಡಿಸುತ್ತಿದ್ದ ಗ್ರಂಥದ ಕುರಿತು ವಿಶೇಷ ಆಸಕ್ತಿ ವಹಿಸಿದರು. ಪೇಜಾವರ ಮಠದ ಶ್ರೀ ವಿಶ್ವೇಶತೀರ್ಥ ಸ್ವಾಮೀಜಿ ಉಡುಪಿ ಅಂಬಲಪಾಡಿಯ ಶ್ರೀ ಜನಾರ್ದನ ಮಹಾಕಾಳಿ ದೇವಸ್ಥಾನದ ಧರ್ಮದರ್ಶಿ ಶ್ರೀ ನಿ. ಅಣ್ಣಾಜಿ ಬಲ್ಲಾಳ್, ಶ್ರೀ ಸಂತೋಷ ಕುಮಾರ್ ಗುಲ್ವಾಡಿ, ಶ್ರೀ ಯು.ಆರ್. ಜಯವಂತ ಉಡುಪಿ, ಶ್ರೀ ನಸೀಬ್ ಸಾಹೇಬ್ ಕುಂಜಿಬೆಟ್ಟು, ಶ್ರೀ ಎಸ್.ಪಿ. ನಾಯಕ್, ಉಡುಪಿ, ಶ್ರೀ ಅನುಪ್‌ರಾಮ್ ನಾನಾಲಾಲ್ ಪಾಂಡ್ಯಾ ಉಡುಪಿ (೧೯೨೨-೧೯೯೫) – ಇವರೆಲ್ಲ ಉಪಯುಕ್ತ ಮಾಹಿತಿಗಳನ್ನು ನೀಡಿದರು. ಪ್ರೊ. ಕು.ಶಿ. ಹರಿದಾಸ ಭಟ್ (೧೯೨೪-೨೦೦೦), ಮುಸ್ಲಿಮ್ಸ್ ಇನ್ ದಕ್ಷಿಣ ಕನ್ನಡ' ಗ್ರಂಥದ ಲೇಖಕ ವಹಾಬ್ ದೊಡ್ಡಮನೆ, ಡಾ. ನವೀನಚಂದ್ರ ಕೃ. ತಿಂಗಳಾಯ – ಇವರೆಲ್ಲ ನಮಗೆ ಲೇಖನಗಳನ್ನು ನೀಡಿದರು. ಕು.ಶಿ. ಹರಿದಾಸ ಭಟ್ಟರು ನಮ್ಮನ್ನು ಅಗಲಿದ ಮೇಲೆ ೨೦೦೧ರಲ್ಲಿ ನಮ್ಮ ಹೊತ್ತಿಗೆ 'ಹಾಜಿ ಅಬ್ದುಲ್ಲಾ ಸಾಹೇಬರು' ಪ್ರಕಟವಾಯಿತು.

ಈಗ ಕಾರ್ಪೊರೇಶನ್ ಬ್ಯಾಂಕಿನ ಶತಮಾನೋತ್ಸವ ಸಂದರ್ಭದಲ್ಲಿ ಹಾಜಿ ಅಬ್ದುಲ್ಲಾ ಸಾಹೇಬರ ಜೀವನ ಚರಿತ್ರೆಯನ್ನು ಪರಿಷ್ಕರಿಸಿದ್ದೇನೆ. ಕರ್ನಾಟಕ ಸರಕಾರದ ವೈದ್ಯಕೀಯ ಶಿಕ್ಷಣ ಸಚಿವರಾಗಿರುವ ಡಾ|| ವಿ.ಎಸ್. ಆಚಾರ್ಯ, ಕಾರ್ಪೊರೇಶನ್ ಬ್ಯಾಂಕಿನ ನಿವೃತ್ತ ಅಧಿಕಾರಿ ಶ್ರೀ ಸದಾನಂದ ಶೇಟ್, ಶ್ರೀ ಎಚ್. ಡುಂಡಿರಾಜ – ಇವರೆಲ್ಲ ಉಪಯುಕ್ತ ಮಾಹಿತಿಗಳನ್ನು ನೀಡಿದ್ದಾರೆ. ಕಾರ್ಪೊರೇಶನ್ ಬ್ಯಾಂಕಿನ ಅಧ್ಯಕ್ಷ ಶ್ರೀ ವಿ.ಕೆ. ಚೋಪ್ರಾ, ಜನರಲ್ ಮ್ಯಾನೇಜರ್ ಶ್ರೀ ಬಿ. ಆರ್. ಭಟ್ – ಈ ಗ್ರಂಥವನ್ನು ಶ್ರದ್ಧೆಯಿಂದ ಪ್ರಕಟಿಸುತ್ತಿದ್ದಾರೆ. ಇವರೆಲ್ಲರಿಗೂ ನನ್ನ ಕೃತಜ್ಞತೆಗಳು.

ಈ ಪುಸ್ತಕವನ್ನು ಬರೆಯಲು ನಾನು ಮಾಹಿತಿಯನ್ನು ಸಂಗ್ರಹಿಸುತ್ತಿದ್ದಾಗ ನನಗೆ ಸಿಕ್ಕಿದ ಜನರ ಪ್ರತಿಕ್ರಿಯೆಯಿಂದ ತುಂಬ ಪ್ರಭಾವಿತನಾದೆ. ಉಡುಪಿಯ ಹಳೆಯ ತಲೆಮಾರಿನವರು ಹಾಜಿ ಅಬ್ದುಲ್ಲಾರವರ ಸತ್ಕಾರ್ಯಗಳನ್ನು ಶ್ರದ್ಧೆ, ಭಕ್ತಿಗಳಿಂದ ಜ್ಞಾಪಿಸಿಕೊಂಡರೆ, ಯುವ ಜನರು ಅವರ ಬಗ್ಗೆ ಅರಿತುಕೊಳ್ಳುವುದರಲ್ಲಿ ಆಸಕ್ತಿ ತೋರಿದರು. ಉಡುಪಿಯ ರಾಷ್ಟ್ರಕವಿ ಗೋವಿಂದ ಪೈ ಸಂಶೋಧನ ಕೇಂದ್ರದಲ್ಲಿ ಹಾಜಿ ಅಬ್ದುಲ್ಲಾ ಸಾಹೇಬರ ಹೆಸರಿನಲ್ಲಿ ಪ್ರತಿವರ್ಷ ಸಾಂಸ್ಕೃತಿಕ ಉತ್ಸವ ನಡೆಸಲು ಶಾಶ್ವತ ನಿಧಿಯೊಂದರ ಸ್ಥಾಪನೆ, ಅವರ ಹೆಸರಿನಲ್ಲಿ ಉಡುಪಿಯಲ್ಲೊಂದು ಗ್ರಂಥಾಲಯ, ಬಡ ವಿದ್ಯಾರ್ಥಿಗಳಿಗೆ ನೆರವು ನೀಡುವ ನಿಧಿಯೊಂದರ ಸ್ಥಾಪನೆಯೇ ಮೊದಲಾದ ಸಮಾಜ ಕಲ್ಯಾಣ ಚಟುವಟಿಕೆಗಳ ಮೂಲಕ ಹಾಜಿ ಅಬ್ದುಲ್ಲಾರವರನ್ನು ಚಿರಂತನಗೊಳಿಸುವ ಕೆಲಸ ನಡೆಯಬೇಕೆನ್ನುವ ಸಲಹೆಗಳೂ ಅವರಿಂದ ಬಂದವು. ತನ್ನ ಶತಮಾನೋತ್ಸವ ಸಂಭ್ರಮಾಚರಣೆಯ ಅಂಗವಾಗಿ ಕಾರ್ಪೊರೇಶನ್ ಬ್ಯಾಂಕ್ ಮಂಗಳೂರಿನಲ್ಲಿ ಒಂದು ಅತ್ಯಾಧುನಿಕ ತಂತ್ರಜ್ಞಾನವನ್ನೊಳಗೊಂಡ ಸಾರ್ವಜನಿಕ ಗ್ರಂಥಾಲಯ ಹಾಗೂ ೨೫ ಗ್ರಾಮೀಣ ಪ್ರದೇಶಗಳಲ್ಲಿ ಗ್ರಂಥಾಲಯಗಳನ್ನು ಸ್ಥಾಪಿಸುತ್ತಿರುವುದು ಮತ್ತು ಗ್ರಾಮೀಣ ಪ್ರದೇಶಗಳ ೧೦೦ ಅರ್ಹ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನವನ್ನು ನೀಡುವ ಯೋಜನೆಯನ್ನು ಆರಂಭಿಸಿರುವುದು ನನಗೆ ಸಂತಸವನ್ನು ತಂದಿದೆ.

ಬ್ಯಾಂಕಿನ ಇಂತಹ ಜನಹಿತ ಕಾರ್ಯಕ್ರಮಗಳು ಹಾಜಿ ಅಬ್ದುಲ್ಲಾರವರು ಪ್ರತಿಪಾದಿಸಿದ ಆದರ್ಶಗಳನ್ನು ಎತ್ತಿ ಹಿಡಿಯುವಲ್ಲಿ ಮಹತ್ವದ ಪರಿಣಾಮವನ್ನು ಬೀರುವುದರಲ್ಲಿ ಸಂಶಯವಿಲ್ಲ.

**– ಮುರಳೀಧರ ಉಪಾಧ್ಯ ಹಿರಿಯಡಕ**

'ಸಖೀಗೀತ'

ಎಂ.ಐ.ಜಿ. -(ಎಚ್) ದೊಡ್ಡನಗುಡ್ಡೆ, ಉಡುಪಿ – ೫೭೬ ೧೦೨.

* * *

# ಅಧ್ಯಾಯ ೧. ಉಡುಪಿ-ಹತ್ತೊಂಬತ್ತರಿಂದ ಇಪ್ಪತ್ತನೆಯ ಶತಮಾನದತ್ತ

ಕಡೆಗೋಲು ಕೃಷ್ಣನ ಉಡುಪಿ, ಕಾರ್ಪೊರೇಶನ್ ಬ್ಯಾಂಕಿನ ಹುಟ್ಟೂರು. ಉಡುಪಿ ಇತಿಹಾಸದಲ್ಲಿ ಹೊಸ ತಿರುವು ಆರಂಭವಾದದ್ದು ಹದಿಮೂರನೆಯ ಶತಮಾನದಲ್ಲಿ, ಶ್ರೀ ಮಧ್ವಾಚಾರ್ಯರ ಕಾಲದಲ್ಲಿ. ಮಧ್ವಾಚಾರ್ಯರು ತತ್ವಜ್ಞಾನಿ ಮಾತ್ರವಲ್ಲದೆ, 'ಮಹಾಭಾರತ ತಾತ್ಪರ್ಯ ನಿರ್ಣಯ'ದಂಥ ಗ್ರಂಥವನ್ನು ಬರೆದ ಸಂಶೋಧಕರಾಗಿದ್ದರು. ಉಡುಪಿಯಿಂದ ಹಿಮಾಲಯದವರೆಗೆ ಪ್ರವಾಸ ಮಾಡಿದ್ದ ಮಧ್ವಾಚಾರ್ಯರಿಂದಾಗಿ ಉಡುಪಿ ನಾಡಿನ ಉದ್ದಗಲದಲ್ಲಿ ಖ್ಯಾತಿ ಪಡೆಯಿತು.

ಉಡುಪಿಯ ಪರಂಪರೆಗೆ ಮತ್ತೆ ಹೊಸ ಆಯಾಮ ನೀಡಿದವರು ಸೋದೆಮಠದ ಶ್ರೀ ವಾದಿರಾಜ ಸ್ವಾಮಿಗಳು (೧೪೮೦ – ೧೬೦೦). ಮಧ್ವಾಚಾರ್ಯರ ಕಾಲದಿಂದ ಎರಡು ತಿಂಗಳಿಗೊಮ್ಮೆ ನಡೆಯುತ್ತಿದ್ದ 'ಪರ್ಯಾಯ'ವನ್ನು (ಅಷ್ಟಮಠದ ಯತಿಗಳಲ್ಲಿ ಅನುಕ್ರಮವಾಗಿ ಕೃಷ್ಣಪೂಜೆಯ ಅಧಿಕಾರ ಬದಲಾವಣೆ) ಎರಡು ವರ್ಷಗಳಿಗೊಮ್ಮೆ ನಡೆಯುವಂತೆ ಮಾಡಿದವರು ಇವರು. ಸಂಸ್ಕೃತ ಕವಿ, ಕನ್ನಡ ವಾಗ್ಗೇಯಕಾರ, ಕೀರ್ತನಕಾರರಾಗಿದ್ದ ಶ್ರೀ ವಾದಿರಾಜರ ಕಾಲದಲ್ಲಿ ಉಡುಪಿ ಧಾರ್ಮಿಕ ಕ್ಷೇತ್ರವಾಗಿ ಪ್ರಸಿದ್ಧಿ ಪಡೆಯಿತು. ಆ ಕಾಲದಲ್ಲಿ ಕನಕದಾಸರು. ಪುರಂದರದಾಸರು ಉಡುಪಿಯ ರಥಬೀದಿಯಲ್ಲಿ ಹಾಡಿದರು, ಕುಣಿದರು. 'ಕನಕನ ಕಿಂಡಿ' ಜಾತಿ ವ್ಯವಸ್ಥೆಯ ಅಂಚಿನಲ್ಲಿರುವವರ ನೆಲೆಯಿಂದ ನೋಡಿದಾಗ ಪವಾಡವಾಗಿ ಕಾಣಿಸುತ್ತದೆ. ವ್ಯವಸ್ಥೆ ಒಳಗಿನಿಂದ ನೋಡಿದಾಗ ಇದು ಉಡುಪಿಯ ಮಡಿವಂತರಿಗೆ ಹೊಸ ಬೆಳಕು ನೀಡಲು ಶ್ರೀ ವಾದಿರಾಜ ಸ್ವಾಮಿಗಳು ಹೂಡಿದ ತಂತ್ರವಾಗಿತ್ತು ಅನ್ನಿಸುತ್ತದೆ. 'ತೀರ್ಥಪ್ರಬಂಧ' ಬರೆದ ಶ್ರೀ ವಾದಿರಾಜ ಸ್ವಾಮಿಗಳು ಅಖಿಲ ಭಾರತ ಪರ್ಯಟನೆ ಮಾಡಿದ್ದರು.

ಹೈದರಾಲಿ ಮತ್ತು ಟಿಪ್ಪುಸುಲ್ತಾನರ ಆಳ್ವಿಕೆಯಲ್ಲಿದ್ದ (೧೭೬೩-೧೭೯೯) ಕರ್ನಾಟಕದ ಕರಾವಳಿ ೧೭೯೯ರಲ್ಲಿ ಈಸ್ಟ್ ಇಂಡಿಯಾ ಕಂಪೆನಿಯ ವಶವಾಯಿತು. ಹತ್ತೊಂಬತ್ತನೆಯ ಶತಮಾನದ ದಕ್ಷಿಣ ಕನ್ನಡ ಜಿಲ್ಲೆ (ಮಂಗಳೂರು, ಉಡುಪಿ) ಕಂಪೆನಿ ಮತ್ತು ಬ್ರಿಟಿಷ್ ಸರಕಾರವನ್ನು ಪ್ರೀತಿ ಮತ್ತು ದ್ವೇಷದಿಂದ ಕಂಡಿತು; ಅದರ ಸಿಹಿ ಕಹಿಯನ್ನು ಅನುಭವಿಸಿತು.

ಡಾ| ಫ್ರಾನ್ಸಿಸ್ ಬುಖಾನನ್ ೧೮೦೦ರಲ್ಲಿ ಕ್ಷೇತ್ರಕಾರ್ಯ ಮಾಡಿ ಸಂಗ್ರಹಿಸಿದ ಮಾಹಿತಿಗಳು 'Journey from Madras through the countries of Mysore, Canara and Malabar' (೧೮೦೧) ಎಂಬ ವರದಿಯಲ್ಲಿ ಲಭ್ಯವಿದೆ. ಕಾರ್ಕಳದಿಂದ ಬೈಲೂರು ಹಿರಿಯಡ್ಕ ಮಾರ್ಗವಾಗಿ ಉಡುಪಿಗೆ ಬರುವಾಗ ತಾನು ನೋಡಿದ ತೆಂಗಿನ ತೋಟಗಳು, ಭತ್ತದ ಗದ್ದೆಗಳು ಹಾಗೂ ರಸ್ತೆ ಬದಿಯ ಸಾಲುಮರಗಳನ್ನು ಬುಖಾನನ್ ವಿವರಿಸಿದ್ದಾನೆ. ಮಧ್ವಾಚಾರ್ಯರು ಹಾಗೂ ಅವರ ಬೋಧನೆಗಳು, ಕೃಷ್ಣ ಮಠದ ಪರ್ಯಾಯ ವ್ಯವಸ್ಥೆ, ತುಳು ಬ್ರಾಹ್ಮಣ ಸಮಾಜದ ಮೂಲ, 'ಗ್ರಾಮಪದ್ಧತಿ'ಯಲ್ಲಿರುವ ತುಳು ಬ್ರಾಹ್ಮಣ ಸಮಾಜದ ಇತಿಹಾಸ, ಸಮಾಜದ ಇತರ ವರ್ಗಗಳು – ಇಂಥ ವಿವರಗಳು ಬುಖಾನನ್ ವರದಿಯಲ್ಲಿ ದಾಖಲಾಗಿವೆ. ಹತ್ತೊಂಬತ್ತನೆಯ ಶತಮಾನದ ಮೊದಲ ದಶಕಗಳ ಅವಧಿಯಲ್ಲಿ ಕರ್ನಲ್ ಮೆಕೆಂಜಿ ಸಂಗ್ರಹಿಸಿದ 'ಕೈಫಿಯತ್ತು'ಗಳಲ್ಲಿ ಉಡುಪಿಯ ಅಷ್ಟಮಠಗಳು ಮತ್ತು ಕಾಪು, ಕುಂಜಾರು, ಕುಂಭಾಸಿ, ಕೊಲ್ಲೂರು, ಪೆರಡೂರು, ಬಸರೂರು, ಬಾರ್ಕೂರು, ಯಲ್ಲೂರು ದೇವಸ್ಥಾನಗಳ ಕೈಫಿಯತ್ತು (ಸಮಾಚಾರ) ದಾಖಲಾಗಿದೆ. ೧೮೩೪ರಲ್ಲಿ ದಕ್ಷಿಣಕನ್ನಡಕ್ಕೆ ಜರ್ಮನಿ ಮಿಷನರಿಗಳು ಆಗಮಿಸಿದರು.

೧೮೫೭ರ ಅನಂತರ ಮಂಗಳೂರಿನಲ್ಲಿ ಪಡುವಣ ಗಾಳಿ ಬೀಸತೊಡಗಿತು. ಮಂಗಳೂರಿನಲ್ಲಿ ಕಲೆಕ್ಟರ್ ಆಫೀಸು (ಜಿಲ್ಲಾಧಿಕಾರಿ ಕಚೇರಿ) ಆರಂಭವಾದದ್ದು ೧೮೬೫ರಲ್ಲಿ. ಅದೇ ವರ್ಷ ಮಂಗಳೂರಿನ ಸರಕಾರಿ ಕಾಲೇಜು (ಈಗಿನ ವಿಶ್ವವಿದ್ಯಾನಿಲಯ ಕಾಲೇಜು) ಆರಂಭವಾಯಿತು. ೧೮೬೬ರಲ್ಲಿ ಮಂಗಳೂರು ಮುನಿಸಿಪಾಲಿಟಿ ಕಾರ್ಯಾರಂಭ ಮಾಡಿತು. ಸಂತ ಎಲೋಶಿಯಸ್ ಕಾಲೇಜಿನ (೧೮೮೦) ಸ್ಥಾಪನೆ ಮಂಗಳೂರಿನ ಶೈಕ್ಷಣಿಕ ಪ್ರಗತಿಯ ಮಹತ್ವದ ಹೆಜ್ಜೆಯಾಯಿತು. ೧೮೮೭ ರಲ್ಲಿ 'ಕೃಷ್ಣ-ಭೀಮ' ಎಂಬ ಎರಡು ಹಡಗುಗಳು

ಮಂಗಳೂರಿನಿಂದ ಮುಂಬಯಿಗೆ ತಿರುಗಾಟ ಆರಂಭಿಸಿದುವು. ಬಾಸೆಲ್ ಮಿಷನ್‌ನವರಿಂದಾಗಿ ಮಂಗಳೂರು ಕೈಗಾರಿಕೆ, ಮುದ್ರಣರಂಗಗಳಲ್ಲಿ ಮುಂದುವರಿಯಿತು. ೧೯೦೭ರಲ್ಲಿ ಮಂಗಳೂರು ರೈಲು ಸಂಪರ್ಕ ಪಡೆಯಿತು.

ಹತ್ತೊಂಬತ್ತನೆಯ ಶತಮಾನದ ಉಡುಪಿ, ಮಂಗಳೂರಿಗೆ ಹೋಲಿಸಿದಾಗ ಆರ್ಥಿಕವಾಗಿ, ಶೈಕ್ಷಣಿಕವಾಗಿ ಹಿಂದುಳಿದಿತ್ತು. ಬಾಸೆಲ್ ಮಿಶನ್‌ನವರು ೧೮೫೮ರಲ್ಲಿ ಉಡುಪಿಯಲ್ಲಿ ಕ್ರಿಶ್ಚಿಯನ್ ಹೈಸ್ಕೂಲನ್ನು ಆರಂಭಿಸಿದರು. ೧೮೯೦ರಲ್ಲಿ ಬೋರ್ಡ್ ಮಿಡ್ಲ್ ಸ್ಕೂಲ್ ೧೯೧೮ ರಲ್ಲಿ ಬೋರ್ಡ್ (ಸರಕಾರಿ) ಹೈಸ್ಕೂಲು ಸ್ಥಾಪನೆಗೊಂಡುವು. ಉಡುಪಿಯ ಪ್ರಾಚೀನ ಸಂಸ್ಕೃತ ಶಾಲೆ ಅನಂತೇಶ್ವರ ದೇವಸ್ಥಾನದ ಜಗಲಿಯಲ್ಲಿತ್ತು. ಸಂಸ್ಕೃತ ಮಹಾಪಾಠ ಶಾಲೆಯ ಸ್ಥಾಪನೆ (೧೯೦೪) ಉಡುಪಿಯ ಶೈಕ್ಷಣಿಕ ಇತಿಹಾಸದ ಮಹತ್ವ ಮುನ್ನಡೆಯಾಯಿತು. ಸೋದೆ ಮಠದ ಶ್ರೀ ವಿಶ್ವೇಂದ್ರ ತೀರ್ಥರು ೧೯೪೩ರಲ್ಲಿ ಇನ್ನಂಜೆಯಲ್ಲಿ ಸ್ಥಾಪಿಸಿದ ಎಸ್.ವಿ.ಎಚ್. ಹೈಸ್ಕೂಲ್ ಉಡುಪಿ ತಾಲೂಕಿನ ಗ್ರಾಮಾಂತರ ಪ್ರದೇಶದಲ್ಲಿ ಆರಂಭಗೊಂಡ ಮೊದಲ ಹೈಸ್ಕೂಲ್.

೧೮೯೪ ರಲ್ಲಿ ಮದ್ರಾಸು ಸರಕಾರ ಪ್ರಕಟಿಸಿದ 'ಸೌತ್ ಕೆನರಾ' ಗ್ಯಾಸೆಟಿಯರ್ ಅಧಿಕೃತ ದಾಖಲೆಗಳನ್ನು ನೀಡುವ ಐತಿಹಾಸಿಕ ಮಹತ್ವದ ಗ್ರಂಥ. ಈ ಗ್ರಂಥವನ್ನು ಕರ್ನಾಟಕ ಸರ್ಕಾರದ ಗ್ಯಾಸೆಟಿಯರ್ ಇಲಾಖೆ ೨೦೦೩ರಲ್ಲಿ ಪುನರ್ ಮುದ್ರಿಸಿದೆ. ೧೮೯೧ ರಲ್ಲಿ ಮಂಗಳೂರು ತಾಲೂಕಿನ ಜನಸಂಖ್ಯೆ ೨,೭೮,೯೦೮. ಪುರುಷರು ೧,೩೭,೧೬೬. ಮಹಿಳೆಯರು – ೧,೪೧,೭೪೨. ಹಿಂದುಗಳು ೨,೦೧,೨೮೭, ಕ್ರಿಶ್ಚಿಯನ್ನರು ೪೧,೬೪೫. ಮುಸ್ಲಿಮರು – ೩೦೬೭೦, ಜೈನರು ೫೨೪೨. ಮಂಗಳೂರು ನಗರದ ಜನಸಂಖ್ಯೆ ೪೦೯೨೨. ಹಿಂದುಗಳು ೨೩೩೯೮. ಕ್ರಿಶ್ಚಿಯನ್ನರು ೯೮೪೫, ಮುಸ್ಲಿಮರು ೭೫೮೫.

ಈಗಿನ ಉಡುಪಿ ಜಿಲ್ಲೆಯ (ಅಂದರೆ ಉಡುಪಿ, ಕುಂದಾಪುರ ತಾಲೂಕುಗಳ) ೧೮೯೧ರ ಜನಸಂಖ್ಯೆ – ೩೭೩೯೮೫, ಪುರುಷರು-೧೭೩೭೯೯. ಮಹಿಳೆಯರು – ೨೦೦೧೬೬. ಹಿಂದುಗಳು – ೩೩೮೮೪೬. ಕ್ರಿಶ್ಚಿಯನ್ನರು – ೨೦೩೧೪, ಮುಸ್ಲಿಮರು – ೧೨೨೪೭. ಜೈನರು – ೨೫೭೮. ಪುರುಷರಲ್ಲಿ ನೂರರಲ್ಲಿ ಹತ್ತು ಮಂದಿ, ಮಹಿಳೆಯರಲ್ಲಿ ನೂರಕ್ಕೆ ಒಬ್ಬರು ಅಕ್ಷರಸ್ಥರಾಗಿದ್ದರು. ಕನ್ನಡಿಗರು ೧೬೪೩೮೧, ತುಳುವರು – ೧೨೬೭೦೦. ಕೊಂಕಣಿಗರು – ೫೧೦೩೦೭. ಮರಾಠಿಗರು – ೧೬೩೧೯. ಹಿಂದುಸ್ತಾನಿ – ೬೫೧೧. ಉಡುಪಿ ತಾಲ್ಲೂಕಿನಲ್ಲಿ ತುಳು ಮನೆ ಮಾತಿನವರು ಬಹು ಸಂಖ್ಯಾಕರಾಗಿದ್ದರು. ಉಡುಪಿ ಜಿಲ್ಲೆಯಲ್ಲಿ ೨೦೪೫ ಗಾಡಿಗಳಿದ್ದುವು.

ಉಡುಪಿ ಜಿಲ್ಲೆಯಲ್ಲಿ ೧೮೯೧ರಲ್ಲಿದ್ದ ಧನಿ – ಒಕ್ಕಲುಗಳ ಸಂಖ್ಯೆ ೨,೦೬೬೩೧. ಕೃಷಿ ಕಾರ್ಮಿಕರು – ೧೦೭೮೮. ಕಾರ್ಮಿಕರು – ೭೫೩೧೬, ವ್ಯಾಪಾರಿಗಳು – ೨೮೯೮೯, ಕುಶಲಕರ್ಮಿಗಳು – ೨೩೨೪೯, ನೆಯ್ಗೆಯವರು -೧೦೨೩, ಇತರ ವೃತ್ತಿಯವರು – ೧೭,೯೮೪. ಉಡುಪಿ ತಾಲೂಕಿನ ತಹಶೀಲ್ದಾರರ ಆಗಿನ ಸಂಬಳ ರೂ. ೨೨೫.

೧೮೯೧ ರಲ್ಲಿ ಉಡುಪಿ ೭೨೭೨ ಜನಸಂಖ್ಯೆಯ ಪುಟ್ಟ ಪಟ್ಟಣವಾಗಿತ್ತು. ಉಡುಪಿಯಲ್ಲಿ ೫೯೧೬ ಹಿಂದುಗಳು, ೭೮೧ ಕ್ರಿಶ್ಚಿಯನ್ನರು, ೫೭೪ ಮುಸ್ಲಿಮರು ವಾಸಿಸುತ್ತಿದ್ದರು. ಕಾರ್ಕಳ ಪೇಟೆಯಲ್ಲಿ ೪೧೧೫, ಕುಂದಾಪುರದಲ್ಲಿ ೩೬೧೭, ಬಾರ್ಕೂರಿನಲ್ಲಿ ೯೫೧, ಕಲ್ಯಾಣಪುರದಲ್ಲಿ ೫೫೮೨, ಮಲ್ಪೆಯಲ್ಲಿ ೩೧೨೫ ಜನಸಂಖ್ಯೆ ಇತ್ತು.

ಹತ್ತೊಂಬತ್ತನೆಯ ಶತಮಾನದ ಉತ್ತರಾರ್ಧದ ಉಡುಪಿಯಲ್ಲಿ ಮಕರ ಸಂಕ್ರಮಣ ಜಾತ್ರೆ, ಪರ್ಯಾಯ ಇವೆಲ್ಲ ಇದ್ದುವು. ಆದರೆ ಕಾಫಿ, ಹೊಟೇಲ್, ಛತ್ರ, ವಿದ್ಯುತ್, ಆಧುನಿಕ ಶೌಚಾಲಯ, ಫೋನ್, ಬಸ್ಸು, ಕಾರು, ಕಾಲೇಜು, ಸಿನಿಮಾ ಥಿಯೇಟರ್ – ಯಾವುದೂ ಇರಲಿಲ್ಲ. 'ಕಾರ್ಪೊರೇಶನ್ ಬ್ಯಾಂಕ್'ನ ಇತಿಹಾಸ ಬರೆದಿರುವ ಹಿರಿಯ ಅಂಕಣಕಾರ ಎಂ.ವಿ.ಕಾಮತರು 'ಆ ದಿನಗಳು' ಎಂಬ ಲೇಖನದಲ್ಲಿ ಉಡುಪಿಯ ತನ್ನ ಬಾಲ್ಯದ ದಿನಗಳನ್ನು ನೆನಪಿಸಿಕೊಂಡಿದ್ದಾರೆ – "ಇಷ್ಟು ಹೇಳಿದ ಮೇಲೆ ನನ್ನ ಕಥೆ ಶುರುವಾದದ್ದು ನಾನು ಹುಟ್ಟಿದ ವರ್ಷವಾದ ೧೯೨೧ರಲ್ಲಿ ಎಂದು ಧಾರಾಳ ಒಪ್ಪಿಕೊಳ್ಳಬಹುದು. ಆಗ ಸುತ್ತಮುತ್ತ ಆಸ್ಪತ್ರೆಗಳು ಇರಲಿಲ್ಲ. ಹೆರಿಗೆ ಬಗ್ಗೆ ಸಲಹೆ ನೀಡಲು

ಪ್ರಸವ ವಿಜ್ಞಾನ ತಜ್ಞರಿರಲಿಲ್ಲ. ತಾಯಿ ನನ್ನನ್ನು ಹೆತ್ತದ್ದು ಒಬ್ಬಳು ಸೂಲಗಿತ್ತಿಯ ಸಹಾಯದಿಂದ ಹೆರಿಗೆ ಕೆಲಸದಲ್ಲಿ ಇಂದಿನ ಎಂ.ಡಿ.ಗಳಿಗಿಂತ ಆಕೆಗೆ ಹೆಚ್ಚು ಅನುಭವವಿತ್ತು. ಅವಳು ಒಂದು ಸಂಸ್ಥೆಯೇ ಆಗಿದ್ದಳು. ಅನಂತರ ಆಕೆಯ ಮಗಳೂ ಅಷ್ಟೇ ಪ್ರಖ್ಯಾತಿ ಪಡೆದಳು. ಉಡುಪಿಯಲ್ಲಿ 'ಸೂಲಗಿತ್ತಿ ಕಮಲ' ಎಂದರೆ ಗಣನೀಯ ವ್ಯಕ್ತಿಯಾಗಿದ್ದಳು." (ಅಡ್ಡನಡ್ಕ ಕೃಷ್ಣಭಟ್ (ಸಂ.) – ೧೯೭೭).

ಕಾಲ್ನಡಿಗೆ, ಎತ್ತಿನ ಗಾಡಿ, ಜಟ್ಕಾಬಂಡಿ, ಸೈಕಲ್, ದೋಣಿ, ಪಲ್ಲಕ್ಕಿ – ಹೀಗೆ ಪ್ರಯಾಣ ವೈವಿಧ್ಯಪೂರ್ಣವಾಗಿತ್ತು. ಉಡುಪಿಯ ಪರ್ಯಾಯದ ಸ್ವಾಮಿಗಳು ಪಲ್ಲಕ್ಕಿಯಲ್ಲಿ ಕುಳಿತು ಪರ್ಯಾಯದ ಮೆರವಣಿಗೆಯಲ್ಲಿ ಬರುತ್ತಿದ್ದರು. ಮದುಮಗನ ದಿಬ್ಬಣಕ್ಕೂ ಪಲ್ಲಕ್ಕಿ ಬಳಕೆಯಾಗುತ್ತಿತ್ತು. 'ಸುಬ್ಬಯ್ಯ ಶೆಟ್ಟರ ವಿಲೇವಾರಿ' ಎಂಬ ಮಾತು ಈಗಲೂ ಬಳಕೆಯಲ್ಲಿದೆ. ಸುಬ್ಬಯ್ಯ ಶೆಟ್ಟರೂ ಮಂಗಳೂರಿನಿಂದ ಉಡುಪಿಗೆ ಕರಾವಳಿ ಮಾರ್ಗದಲ್ಲಿ ಜಟ್ಕಾಗಾಡಿಗಳ ಓಡಾಟ ನಿರ್ವಹಿಸುತ್ತಿದ್ದರು. ಹೊಳೆ ಎದುರಾದಾಗ ಜಟ್ಕಾದಿಂದ ಇಳಿದು ದೋಣಿ ದಾಟಿದಾಗ ಇನ್ನೊಂದು ಜಟ್ಕಾ ಸಿದ್ಧವಾಗಿರುತ್ತಿತ್ತು. ಅಧಿಕಾರಿಗಳು, ವ್ಯಾಪಾರಿಗಳು ಕ್ಲಪ್ತಕಾಲಕ್ಕೆ ಮಂಗಳೂರು ಸೇರುವುದು ಸಾಧ್ಯವಿತ್ತು. 'ಸುಬ್ಬಣ್ಣ ಶೆಟ್ರ ವಿಲೇವಾರಿ' ಎಂದರೆ ಸಮಯ ಪರಿಪಾಲನೆ ಎಂದು ಅರ್ಥ. ಪರಿಸರ ಮಾಲಿನ್ಯ ಮಾಡದ ಸೈಕಲ್ ಬ್ರಿಟಿಷರ ಕಾಲದಲ್ಲಿ ಬಳಕೆಗೆ ಬಂದ ಅದ್ಭುತವಾಹನ ಯಕ್ಷಗಾನ ಮೇಳಗಳ ಕಲಾವಿದರು ತಮ್ಮ ವೇಷಭೂಷಣಗಳ ಪೆಟ್ಟಿಗೆಗಳನ್ನು ಹೊತ್ತುಕೊಂಡು ಊರಿಂದೂರಿಗೆ ಪ್ರಯಾಣ ಮಾಡುತ್ತಿದ್ದರು. ಹಿರಿಯಡ್ಕ ಗೋಪಾಲರಾಯರು ತನ್ನ ಬಾಲ್ಯದಲ್ಲಿ ಹಿರಿಯಡ್ಕದಿಂದ ಉಡುಪಿಗೆ ಕಾಲ್ನಡಿಗೆಯಲ್ಲಿ ಬಂದು, ಉಡುಪಿಯ ಆಸುಪಾಸಿನಲ್ಲಿ ಚೆಂಡೆ ಕೇಳುತ್ತಿದ್ದಲ್ಲಿಗೆ ಹೋಗಿ ರಾತ್ರಿಯಿಡೀ ಯಕ್ಷಗಾನ ಪ್ರದರ್ಶನ ನೋಡಿ, ಬೆಳಿಗ್ಗೆ ಊರಿಗೆ ವಾಪಾಸು ಹೋಗುತ್ತಿದ್ದರಂತೆ. ಅವರ ಆತ್ಮಕತೆ ಯಕ್ಷಗಾನ ಇತಿಹಾಸದ ಒಂದು ಸಾಂಸ್ಕೃತಿಕ ದಾಖಲೆ.

ಶಿವರಾಮ ಕಾರಂತರ ಕಾದಂಬರಿಗಳಲ್ಲಿ ದೋಣಿಯಲ್ಲಿ ಮದುವೆ ದಿಬ್ಬಣದವರ ಪ್ರಯಾಣದ ವರ್ಣನೆಗಳಿವೆ. 'ದೋಣಿ, ಹರಿಗೋಲುಗಳಲ್ಲಿ '(೧೯೫೦) ಎಂಬ ಲೇಖನದಲ್ಲಿ ಕಾರಂತರು ತನ್ನ ದೋಣಿ ವಿಹಾರದ ನೆನಪುಗಳನ್ನು ಬರೆದಿದ್ದಾರೆ – "ನಾನು ಎಳೆಯವನಾಗಿದ್ದಾಗ ಒಂದು ರಾತ್ರಿ ಕಲ್ಯಾಣಪುರದಲ್ಲಿ ಹೊಳೆಯಲ್ಲಿ ದೋಣಿಯ ಮೇಲೆ ಕುಳಿತುಕೊಂಡೆ. ಬೆಳಿಗ್ಗೆ ಎದ್ದುದು ನಮ್ಮೂರಿನ ಕಡವು – ಮಣೂರಿನಲ್ಲಿ. ಎಂಟು ಗಂಟೆಗಳಲ್ಲಿ ಹೋದುದು ಹತ್ತೇ ಮೈಲು. ಸಾಮಾನ್ಯ ದೋಣಿಯಲ್ಲಿ ಕುಳಿತರೆ ತಾಸಿಗೆ ಎರಡು ಮೈಲು ಹೋಗಬಹುದು. ಅವಸರವಿದ್ದ ಪ್ರಾಣಿಗೆ ಅದು ಹೇಳಿಸಿದ ಕ್ರಮವಲ್ಲ. ಆತ ತಂತಿಯಲ್ಲೋ, ವಾಯರ್‌ಲೆಸ್ಸಿನಲ್ಲೋ ಪ್ರಯಾಣ ಬೆಳೆಸಬಹುದು. ನಿಮಗೆ ವಿರಾಮವಿದ್ದುದಾದರೆ ನಿಮಿಷ ನಿಮಿಷಕ್ಕೂ ಸುಖ ಉಂಡು ಹೋಗಬಹುದಾದ ಪಯಾಣ ದೋಣಿಯದು. ಆ ದಿನ ನಾನು ದೋಣಿಯಲ್ಲಿ ಚಾಪೆ ಹಾಸಿ, ನಿದ್ದೆ ಬರುವಾಗ ಒರಗುವುದಕ್ಕೆ ದಿಂಬಿಟ್ಟುಕೊಂಡು, ದೋಣಿಯ ಬಾನಿಗೆ ಒರಗಿ ಕುಳಿತುಕೊಂಡೆ. ಅದು ತೊಳೆ ದೋಣಿಯಲ್ಲ, ಜಿಲ್ಲೆಯಿಂದ ಒತ್ತುವ ದೋಣಿ. ಮಾಡು, ಮುಚ್ಚುಮರೆಗಳಿರಲಿಲ್ಲ. ಅದಕ್ಕೇನೆ ರಾತ್ರಿಯ ಪ್ರಯಾಣ ಆರಿಸಿದ್ದು. ನೀಲ ಬಾನಿಗಿಂತ ದೊಡ್ಡ ಮಾಡ್ಯಾವುದು? – ಒಂದಲ್ಲ, ಎರಡಲ್ಲ ಸಾವಿರಾರು ಚುಕ್ಕೆಗಳು ಮೇಲಿಂದ ಮಿನುಗುತ್ತಿರುತ್ತವೆ. ಸಾಲದುದಕ್ಕೆ – ತಿಂಗಳು ಮಾಮಾ ಮೂಡಣದಲ್ಲಿ ತಲೆಯೆತ್ತಿ ಮೇಲಕ್ಕೆ ಬಂದನೇ ಬಂದ. ಅವನ ಬೆಳಗಿನ ನಗು ನದಿಯ ಅಲೆಯಲ್ಲಿ ಮಿನುಗತೊಡಗಿತು. ಸಾವಿರ ಜನರು ಒಮ್ಮೆಗೇ ಹಲ್ಲು ಕಿರಿದು, ನಿಷ್ಕಪಟವಾಗಿ ನಕ್ಕ ಹಾಗೆ ನದಿಗೆ ನದಿಯೇ ನಗತೊಡಗಿತು. ಆಗ ದೋಣಿ ದಡ ಬಿಟ್ಟು ಹೊರಟಿತು. ಇಕ್ಕಡೆಯ ತೆಂಗಿನ ತೋಟಗಳು ತೂಕಡಿಸುತ್ತ, ನಿದ್ದೆ ಮಾಡುತ್ತ ನಿಂತಿದ್ದವು. ದೋಣಿಯ ಜಲ್ಲು ನೀರನ್ನು ಹೊಕ್ಕು ಮೇಲೇಳುವಾಗ ಅದರ ಉರಿಯೇ ಬೇರೆ. ಆ ಪುಟ್ಟ ದೋಣಿ ನೀರನ್ನು ಸೀಳಿಕೊಂಡು ಮೀನಿನ ಹಾಗೆ ಓಡುವಾಗ ಅದರ ಉರಿಯೇ ಬೇರೆ. ಆ ಪುಟ್ಟ ದೋಣಿ ನೀರನ್ನು ಸೀಳಿಕೊಂಡು ಮೀನಿನ ಹಾಗೆ ಓಡುವಾಗ ಅದರ ಲಾಸ್ಯವೇ ಬೇರೆ. ತಂಪಾದ ಹವೆ, ಸೊಂಪಾದ ನೋಟ, ಬಾನು ನೀರುಗಳ ಅನುಪಮ ಮೇಳವದು. ಬಾನನ್ನು ನೋಡುತ್ತ ಕುಳಿತರೆ ಒಂದೊಂದೇ ನಕ್ಷತ್ರ ಸಿಡಿದು ಬಾಳುವುದೂ ಕಾಣುತ್ತದೆ. ನಕ್ಷತ್ರವಲ್ಲ, ನ್ಯಾಯವಾಗಿ ಉಲ್ಕೆಗಳು. ಆ ವಿಷಯವಾಗಿ ಅಜ್ಜಿಯ ಕತೆ ಬೇರೆಯೇ ಹೇಳುತ್ತದೆ. ಸ್ವರ್ಗವನ್ನೇರಿದ ಆತ್ಮಗಳು ನಕ್ಷತ್ರಗಳಾಗಿದ್ದು ತಮ್ಮ ಪುಣ್ಯ ಖರ್ಚಾಗುತ್ತಲೆ, ಕೆಳಕ್ಕೆ ಬಿದ್ದು ನರಕಕ್ಕೆ ಹೋಗುತ್ತವೆ ಎಂದು. ಆ ಒಂದು ರಾತ್ರಿ ನಾನು ಹತ್ತಿಪ್ಪತ್ತು ಜೀವರುಗಳ ಪುಣ್ಯ ಖರ್ಚಾಗಿ ಅವರು ಭೂಮಿಗೆ ಬಿದ್ದುದನ್ನು ನೋಡಿದೆ. ಆದರೆ ನನ್ನ ಪುಣ್ಯ ಖರ್ಚಾಗಿ ಕಂಡದ್ದು ನಾನು ದೋಣಿಯಿಂದ ಇಳಿಯಬೇಕಾಗಿ ಬಂದಾಗ ಮಾತ್ರ. ನಿದ್ದೆ ಬರಲಿ, ಬಾರದಿರಲಿ, ಮನಸ್ಸಿಗೆ ದೊರೆಯುವ ಜಲಯಾನದ ಶಾಂತಿ ಚಿರಸ್ಮರಣೀಯವಾದದ್ದು" (ಶಿವರಾಮ ಕಾರಂತ, ೧೯೭೨)

ಹತ್ತೊಂಬತ್ತನೆಯ ಶತಮಾನದ, ಇಪ್ಪತ್ತನೆಯ ಶತಮಾನದ ಪೂರ್ವಾರ್ಧದ ಉಡುಪಿಯ ಸುತ್ತ ಮುತ್ತ ಕಿತ್ತು ತಿನ್ನುವ ಬಡತನವಿತ್ತು. ಉಡುಪಿಯ ಪಾ.ವೆಂ. ಆಚಾರ್ಯರು (೧೯೧೫-೧೯೯೨) ತನ್ನ ಆತ್ಮಕತೆಯಲ್ಲಿ, ತಾನು ಬಾಲ್ಯದಲ್ಲಿ ಕೃಷ್ಣಮಠದ ಭೋಜನಶಾಲೆಯಲ್ಲಿ ಧರ್ಮಾರ್ಥದ ಊಟ ಮಾಡುತ್ತಿದ್ದಾಗ ಅನುಭವಿಸುತ್ತಿದ್ದ ಅವಮಾನವನ್ನು ನೆನಪಿಸಿಕೊಂಡಿದ್ದಾರೆ. ಶಿವರಾಮ ಕಾರಂತರ ಅಣ್ಣ ಕೋ.ಲ. ಕಾರಂತರ ಆತ್ಮಕತೆಯಲ್ಲಿ ಅವರ ಹಿರಿಯರ ಬಡತನದ ಪ್ರಸ್ತಾವವಿದೆ. ಕಾರಂತರ ತಾಯಿ ಶೃಂಗೇರಿಯಲ್ಲಿ ನವರಾತ್ರಿ ಸಂದರ್ಭದಲ್ಲಿ ನೀಡುತ್ತಿದ್ದ ಸೀರೆದಾನ ಪಡೆಯಲಿಕ್ಕಾಗಿ, ತನ್ನ ಗೆಳತಿಯರೊಡನೆ ಶೃಂಗೇರಿಗೆ ಕಾಲ್ನಡಿಗೆಯಲ್ಲಿ ಹೋಗುತ್ತಿದ್ದರಂತೆ. ಬೆಳೆ ಹಾಳಾದ ವರ್ಷ ಧನಿಗಳಿಗೆ ಗೇಣಿ ಕೊಡಲಾರದೆ ತರತರದ ಕಾಟ ಅನುಭವಿಸುತ್ತಿದ್ದರು. ಉಡುಪಿಯ ಮಠವೊಂದರ ಉಗ್ರಾಣಿ ಪುತ್ತಿಗೆಯ ಸಮೀಪವಿದ್ದ ನಮ್ಮ ಹಿರಿಯರ ಕೂಟದ ಗುಂಡಿ ಮಠಕ್ಕೆ ಗೇಣಿ ವಸೂಲಿಗೆಂದು ಬರುತ್ತಿದ್ದುದು ನನ್ನ ಬಾಲ್ಯದ ನೆನಪುಗಳಲ್ಲೊಂದು.

'ಹುಲ್ಲೆಮೊಗದ ಹುಲಿ'ಗಳಾಗಿದ್ದ ಬ್ರಿಟಿಷರು ನಮ್ಮ ರಾಜರುಗಳನ್ನು ಗುಲಾಮರನ್ನಾಗಿ ಮಾಡಿಕೊಂಡಿದ್ದು ಮಾತ್ರವಲ್ಲ, ನಮ್ಮ ದೇವಸ್ಥಾನಗಳ ಆಸ್ತಿಯನ್ನೂ ನುಂಗಿ ನೀರು ಕುಡಿದರು. ಮೊಣ ಕೈಗಂಟಿಗೆ ಬೆಲ್ಲ ಹಚ್ಚಿ ನೆಕ್ಕಲು ಹೇಳಿದಂತೆ ದೇವಸ್ಥಾನಗಳ ನೈವೇದ್ಯ – ನಂದಾದೀಪಗಳಿಗಾಗಿ ತಸ್ತೀಕು ಮಂಜೂರು ಮಾಡಿದರು. ಈಗ ದಕ್ಷಿಣ ಕನ್ನಡ ಉಡುಪಿ ಜಿಲ್ಲೆಗಳ ಧಾರ್ಮಿಕ ದತ್ತಿ ಇಲಾಖೆಯ ಅಧೀನದಲ್ಲಿರುವ ದೇವಸ್ಥಾನಗಳ ಸಂಖ್ಯೆ ೧೫೦೦ ಕ್ಕಿಂತ ಹೆಚ್ಚು. ಇವುಗಳಲ್ಲಿ ೪೦೦ ಹೆಚ್ಚು ಪ್ರಧಾನ ದೇವಾಲಯಗಳು (ನೋಡಿ – ಮುರುಳೀಧರ ಉಪಾಧ್ಯ ಹಿರಿಯಡಕ, ಡಾ| ಪಿ. ಎನ್. ನರಸಿಂಹಮೂರ್ತಿ, (ಸಂ.) – 'ದಕ್ಷಿಣ ಕನ್ನಡದ ದೇವಾಲಯಗಳು' (೨೦೦೦). ಉಡುಪಿಯ ಅಷ್ಟಮಠಗಳವರು ಪರ್ಯಾಯದ ಖರ್ಚಿಗಾಗಿ ಸಾಲ ಮಾಡಬೇಕಾದ ಪರಿಸ್ಥಿತಿ ಇತ್ತು. ತಲೆ ಬೋಳಿಸಿಕೊಂಡ, ಕೆಲವು ಸೀರೆ ಉಟ್ಟ ವಿಧವೆಯರು ಕೃಷ್ಣಮಠದ ಭೋಜನಶಾಲೆಯ ಧರ್ಮಾರ್ಥ ಊಟಕ್ಕಾಗಿ ಬರುತ್ತಿದ್ದುದು ಸಾಮಾನ್ಯ ದೃಶ್ಯವಾಗಿತ್ತು. ಉನ್ನತ ಶಿಕ್ಷಣಕ್ಕಾಗಿ ಮಂಗಳೂರು, ಮದ್ರಾಸುಗಳಿಗೆ ಹೋಗಲಾರದೆ ಉಡುಪಿ ನೂರಾರು ಯುವಕರು ಕನಸುಗಳು ಭಗ್ನಗೊಳ್ಳುತ್ತಿದ್ದುವು. ಉಡುಪಿಯ ಕ್ರಿಶ್ಚಿಯನ್ ಹೈಸ್ಕೂಲಿನಲ್ಲಿ ಅಧ್ಯಾಪಕನಾಗಿದ್ದ ನಂದಳಿಕೆ ಲಕ್ಷ್ಮೀ ನಾರಾಯಣಪ್ಪ (೧೮೭೦-೧೯೦೧) ಆ ಕಾಲದ ಉಡುಪಿಯಲ್ಲಿ ಕನಸು ಕಾಣುತ್ತಿದ್ದ ಕವಿ. 'ಮುದ್ದಣ' ಕಾವ್ಯನಾಮದ ಈ ಕವಿಯ ಕನಸುಗಳು ಕ್ಷಯರೋಗದಿಂದಾಗಿ ನನಸಾಗಲಿಲ್ಲ. ಆದರೆ ತನ್ನ 'ಶ್ರೀ ರಾಮಾಶ್ವಮೇಧ' ಕಾವ್ಯದಿಂದಾಗಿ ಈತ ಈಗ ಕನ್ನಡ ಸಾಹಿತ್ಯದಲ್ಲಿ ಅಮರ.

ಹತ್ತೊಂಬತ್ತನೆಯ ಶತಮಾನದ ಉಡುಪಿಯಲ್ಲಿ ಜಾತೀಯತೆ, ಅಸ್ಪೃಶ್ಯತೆಯ ಆಚರಣೆ, ವಿಧವೆಯರ ಕೇಶಮುಂಡನ ಇವೆಲ್ಲ ಇದ್ದುವು. ಮೃಷ್ಟಾನ್ನ ಭೋಜನ ಮಾಡಿ ಎಸೆದ ಎಂಜಲೆಲೆಯಲ್ಲಿದ್ದ ಅನ್ನ, ಭಕ್ಷ್ಯಗಳನ್ನು ಸಂಗ್ರಹಿಸಿ ತಿನ್ನುವ ಬಡವರನ್ನು ಸ್ಥಿತಪ್ರಜ್ಞರಾಗಿ ನೋಡುವವರಿದ್ದರು. ಮಹಾತ್ಮಾ ಗಾಂಧೀಜಿ ೧೯೩೪ ರಲ್ಲಿ ಕೃಷ್ಣನ ದರ್ಶನಕ್ಕಾಗಿ ರಥಬೀದಿಗೆ ಬಂದರು. ದಲಿತರಿಗೆ ಕೃಷ್ಣನ ದರ್ಶನಕ್ಕೆ ಅವಕಾಶವಿಲ್ಲ ಎಂದು ಗೊತ್ತಾದಾಗ 'ಹಾಗಾದರೆ ನಾನೂ ದೇವರ ದರ್ಶನ ಮಾಡುವುದಿಲ್ಲ' ಎಂದು ವಾಪಾಸು ಹೋದರು. ಉಡುಪಿ ಜಿಲ್ಲೆಯ ಹಲವು ಊರುಗಳಲ್ಲಿದ್ದ ದೇವದಾಸಿ ಪದ್ಧತಿಯ ಹಿನ್ನೆಲೆಯಲ್ಲಿ ಶಿವರಾಮ ಕಾರಂತರ 'ಮೈಮನಗಳ ಸುಳಿಯಲ್ಲಿ' ಕಾದಂಬರಿಯನ್ನು ಓದಬೇಕು. ಇದೊಂದು ಸಾಂಸ್ಕೃತಿಕ ದಾಖಲೆ. ಶಿವರಾಮ ಕಾರಂತರು ಅಂತರ್ ಜಾತೀಯ ವಿವಾಹ ಮಾಡಿಕೊಂಡಾಗ ಅವರನ್ನು ಗೇಲಿ ಮಾಡಿ ಉಡುಪಿಯ ಪತ್ರಿಕೆಯೊಂದರಲ್ಲಿ ಒಂದು ಲೇಖನ ಪ್ರಕಟವಾಯಿತು. ಕಾರಂತರು ಆ ಲೇಖನ ಬರೆದವರ ಮೇಲೆ ಮಾನನಷ್ಟ ಮೊಕದ್ದಮೆ ಹೂಡಿ ಅವರನ್ನು ಜೈಲಿಗೆ ಕಳಿಸಿದರು. ಬೋಳಾರ ಬಾಬುರಾಯರ 'ವಾಗ್ದೇವಿ' (೧೯೦೫) ಕಾದಂಬರಿಯಲ್ಲಿ, ಉಡುಪಿಯ 'ಸರಸ್ವತಿ ಬಾಯಿ ರಾಜವಾಡೆಯವರ ಕತೆಗಳಲ್ಲಿ ಉಡುಪಿ ಇತಿಹಾಸದ ಅನೇಕ ಕರಾಳ ದೃಶ್ಯಗಳು ಅನಾವರಣಗೊಳ್ಳುತ್ತವೆ. ಇವುಗಳ ಬಗ್ಗೆ ಜಿಜ್ಞಾಸೆ ನಡೆಸಿದಾಗ ಕವಿ ಗೋಪಾಲಕೃಷ್ಣ ಅಡಿಗರು ಉಡುಪಿಯಲ್ಲಿದ್ದಾಗ ಬರೆದ 'ಪ್ರಾಣಮುಖ್ಯರ ಮುಟ್ಟುಚಟ್ಟುತೊಟ್ಟಿಗಳಲ್ಲಿ ನಿಂತ ನೀರಿನ ವಾಸ ಸುತ್ತಲೆಲ್ಲ' ಎಂಬ ಸಾಲಿನ ಅರ್ಥ ಹೊಳೆಯುತ್ತದೆ.

ಉಡುಪಿಯಲ್ಲಿ ವೈದಿಕ ಸಂಸ್ಕೃತಿಯ ದೇವತೆಗಳು ಮತ್ತು ತುಳು ಸಂಸ್ಕೃತಿಯ ಭೂತಗಳ ನಡುವೆ, ಹಿಂದೂ, ಮುಸ್ಲಿಂ, ಕ್ರೈಸ್ತರ ನಡುವೆ ಸಮನ್ವಯವಿತ್ತು. ಸೌಹಾರ್ದ ಸಂಬಂಧವಿತ್ತ. ಉಡುಪಿಯಲ್ಲಿ ೧೮೫೪ರಲ್ಲಿ ಆರಂಭಗೊಂಡ ಕ್ರಿಶ್ಚಿಯನ್ ಹೈಸ್ಕೂಲು ಆಧುನಿಕ ಶಿಕ್ಷಣಕ್ಕೆ

ನಾಂದಿ ಹಾಡಿತು. ಕಾರ್ಪೊರೇಶನ್ ಬ್ಯಾಂಕಿನ ಸ್ಥಾಪಕ ಅಧ್ಯಕ್ಷ ಹಾಜಿ ಅಬ್ದುಲ್ಲಾ ಸಾಹೇಬರು ಉಡುಪಿಯ ಧರ್ಮ ಸಮನ್ವಯದ ಸಂಕೇತವಾಗಿದ್ದರು.

ಇಪ್ಪತ್ತನೆಯ ಶತಮಾನದ ಆರಂಭದ ದಶಕದಲ್ಲಿ ಮುನ್ನೋಟದ ಕನಸುಗಳೊಂದಿಗೆ ಉಡುಪಿಯಲ್ಲಿ ಒಂದು ಬ್ಯಾಂಕನ್ನು ಸ್ಥಾಪಿಸಿದ ಹಾಜಿ ಅಬ್ದುಲ್ಲಾ ಸಾಹೇಬರ ಜೀವನಚರಿತ್ರೆಗೆ ಹೊರಳುವ ಮುನ್ನ ಬ್ರಿಟಿಷರ ಆಡಳಿತ ಕಾಲದ ಉಡುಪಿ ಜಿಲ್ಲೆಯ ಆರ್ಥಿಕ ಸ್ಥಿತಿಯನ್ನು ಅವಲೋಕಿಸೋಣ. ಇತಿಹಾಸ ಸಂಶೋಧಕಿ ಡಾ| ಮಾಲತಿ ಕೆ. ಮೂರ್ತಿ ಅವರು ಬರೆದಿರುವಂತೆ "ಕೃಷಿ ಪ್ರಧಾನವಾಗಿದ್ದ ಈ ಜಿಲ್ಲೆಯಲ್ಲಿ ನೀರಿನ ಲಭ್ಯತೆಯನ್ನು ಅನುಸರಿಸಿ, ವರ್ಷಾವಧಿ ಮೂರು ಭತ್ತದ ಬೆಳೆಗಳ ಕೃಷಿ ನಡೆಯುತ್ತಿತ್ತು. (ಎಣಲ್ ಅಥವಾ ಕಾರ್ತಿ, ಸುಗ್ಗಿ ಮತ್ತು ಕೊಳಕೆ) ಬೆಳೆಗಳ ಆವರ್ತ (rotation) ವಿದ್ದಲ್ಲಿ ಉದ್ದು, ಹೆಸರು, ಅವಡೆ, ಹುರುಳಿ ಮುಂತಾದ ಧಾನ್ಯಗಳನ್ನು, ನೆಲಗಡಲೆ, ಮೆಣಸು, ಕಬ್ಬುಗಳನ್ನು ಬೆಳೆಸಲಾಗುತ್ತಿತ್ತು. ತೆಂಗು, ಅಡಿಕೆ, ಕಾಳುಮೆಣಸು, ಮಾವು, ಹಲಸು, ಗೇರು – ಮುಖ್ಯ ತೋಟಗಾರಿಕಾ ಬೆಳೆಗಳಾಗಿದ್ದುವು. ಅರಿಶಿನ, ಶುಂಠಿ, ವಿವಿಧ ತರಕಾರಿಗಳ ಕೃಷಿಗೂ ಜಿಲ್ಲೆಯ ಹವಾಮಾನ ಸೂಕ್ತವಾಗಿತ್ತು.

ಉಡುಪಿ ಜಿಲ್ಲೆಯ ಕರಾವಳಿ ಪ್ರದೇಶಗಳಲ್ಲಿ ಮೀನುಗಾರಿಕೆ ಪ್ರಮುಖ ಉದ್ಯೋಗವಾಗಿತ್ತು. ಉಡುಪಿ ಹಾಗೂ ಕುಂದಾಪುರ ತಾಲೂಕುಗಳಿಗೆ ಪ್ರಕೃತಿಯಿತ್ತ ವರವೆಂದರೆ ಅನೇಕ ನದಿಗಳು ಹಾಗೂ ಪಶ್ಚಿಮದ ಗಡಿಯಾಗಿರುವ ಅರಬ್ಬೀ ಸಮುದ್ರ ತೀರ. ಇದು ಜಿಲ್ಲೆಯ ಒಳನಾಡು ಹಾಗೂ ಸಮುದ್ರ ವ್ಯಾಪಾರಕ್ಕೆ ಬಹಳಷ್ಟು ಅನುಕೂಲಕರವಾಗಿದ್ದು ಜಿಲ್ಲೆಯ ಆರ್ಥಿಕ ಅಭಿವೃದ್ಧಿಗೆ ಕಾರಣವಾಗಿದೆ. ಶಿರೂರು, ಬೈಂದೂರು, ನ್ಯಾಕನ ಕಟ್ಟೆ, ಗಂಗೊಳ್ಳಿ, ಹಂಗಾರಕಟ್ಟೆ, ಮಲ್ಪೆ, ಕಾಪು ಮುಂತಾದ ಬಂದರುಗಳು ಹಾಗೂ ನಿಲುಗಡೆಗಳಿಂದ ಇಲ್ಲಿನ ಅಕ್ಕಿ, ತೆಂಗಿನಕಾಯಿ, ಕೊಬ್ಬರಿ, ಅಡಿಕೆ, ಬೆಲ್ಲ, ಕಾಚು, ತೆಂಗಿನ ನಾರು, ಕಬ್ಬು, ಮರಮಟ್ಟು, ಗೇರುಬೀಜ, ಹುರಿಹಗ್ಗ, ಶುಂಠಿ, ಎಳ್ಳೆಣ್ಣೆ ಮುಂತಾದ ಜಿಲ್ಲೆಯ ಉತ್ಪನ್ನಗಳನ್ನು ಉತ್ತರದ ಮುಂಬೈ, ಗೋವಾ, ಕಛ್, ಕಾಠೇವಾಡದ ಬಂದರುಗಳಿಗೂ, ದಕ್ಷಿಣದ ಮಂಗಳೂರು, ಕೊಚ್ಚಿ ಹಾಗೂ ಅಮಿನ್‌ದೀವಿಗಳಿಗೂ ರಫ್ತು ಮಾಡಲಾಗುತ್ತಿತ್ತು. ಅಂತೆಯೇ ಗೋವಾದಿಂದ ಸೀಮೆ ಎಣ್ಣೆ, ಕಾಗದ ಮತ್ತು ಉಪ್ಪು, ಮುಂಬೈಯಿಂದ ಪೆಟ್ರೋಲು, ಅರೇಬಿಯಾದಿಂದ ಖರ್ಜೂರ, ಸೂರತ್‌ನಿಂದ ಬಟ್ಟೆ ಮುಂತಾದ ಅನೇಕ ಸರಕುಗಳು ಆಮದಾಗುತ್ತಿದ್ದವು. ಕಂಪೆನಿ ಸರಕಾರ ಮದ್ರಾಸ್ ಮುಖಾಂತರ ಚೀನಕ್ಕೆ ರಫ್ತು ಮಾಡುತ್ತಿದ್ದ ಮೈಸೂರಿನ ಶ್ರೀಗಂಧವನ್ನು ಕುಂದಾಪುರ ಮತ್ತು ತಲಚೇರಿಗಳಲ್ಲಿ ದಾಸ್ತಾನು ಮಾಡಲಾಗುತ್ತಿತ್ತು. ಶ್ರೀಗಂಧದಿಂದ ಗಂಧದೆಣ್ಣೆಯನ್ನು ತೆಗೆಯುವ ಉದ್ಯಮ ಬಾರ್ಕೂರು ಮತ್ತು ಉಡುಪಿ ತಾಲೂಕಿನ ಕೆಲವು ಪ್ರದೇಶಗಳಲ್ಲಿತ್ತು. ಒಳನಾಡು ವ್ಯಾಪಾರಕ್ಕೆ ಘಟ್ಟಗಳ ಸಾಲು ಅಡಚಣೆಯನ್ನೊಡ್ಡಿದರೂ ದಕ್ಷಿಣದಲ್ಲಿ ಕಾರ್ಕಳ ಸೋಮೇಶ್ವರ ಆಗುಂಬೆ ಘಾಟಿ ಮಾರ್ಗವಾಗಿ ಶಿವಮೊಗ್ಗ ಹಾಗೂ ಉತ್ತರದಲ್ಲಿ ಅರಬೈಲು, ದೇವಿ ಮಲೆ ಘಾಟಿ ಮಾರ್ಗಗಳ ಮೂಲಕ ಉತ್ತರ ಕನ್ನಡ ಮತ್ತು ಕೊಲ್ಲೂರು ಮತ್ತು ಹೊಸಂಗಡಿ ಘಾಟಿ ಮಾರ್ಗಗಳ ಮೂಲಕ ಮೈಸೂರಿನೊಂದಿಗೆ ವ್ಯಾಪಾರ ಬಾಂಧವ್ಯ ಸಾಧ್ಯವಾಗಿತ್ತು.

ಹಂಚು ಉದ್ಯಮ ಹುರಿಹಗ್ಗ, ಪಾತ್ರೆ ತಯಾರಿ, ಮೀನೆಣ್ಣೆ ತಯಾರಿ, ಬೆಲ್ಲ ಉತ್ಪಾದನೆ, ಉಪ್ಪು ತಯಾರಿ, ಚಮ್ಮಾರಿಕೆ, ಮರಗೆಲಸ, ತಾಮ್ರ, ಹಿತ್ತಾಳೆ ಕಂಚುಗಳಿಂದ ಮೂರ್ತಿಗಳು ಹಾಗೂ ಉಪಕರಣಗಳ ತಯಾರಿ, ಚಾಪೆ, ಬುಟ್ಟಿ, ಬೆತ್ತ ಹೆಣಿಗೆ, ಚಿನ್ನಾಭರಣ ತಯಾರಿ, ಕಾಡುತ್ಪನ್ನಗಳ ಸಂಗ್ರಹ, ನೇಯ್ಗೆ ಮುಂತಾದ ಅನೇಕ ಸಣ್ಣ ಉದ್ಯಮಗಳು ಜಿಲ್ಲೆಯಲ್ಲಿ ವಿಪುಲ ಉದ್ಯೋಗಾವಕಾಶಗಳಿದ್ದುವು ಎನ್ನುವುದನ್ನು ಸೂಚಿಸುತ್ತವೆ. (೨೦ನೇ ಶತಮಾನದ ಮೊದಲ ದಶಕಗಳಲ್ಲಿ ಕಾರ್ಕಳ ತಾಲೂಕಿನ ಮಾಯಿಪ್ಪಾಡಿಯ ಕೆಲವೊಂದು ಶಾಲಾ ಶಿಕ್ಷಕರು ಹತ್ತಿಯಿಂದ ನೂಲು ತೆಗೆವ ಕೆಲಸವನ್ನು ಲೋಕಲ್‌ಬೋರ್ಡ್ ಶಾಲೆಯಲ್ಲಿ ಕಲಿಸುವ ಉದ್ದೇಶಕ್ಕಾಗಿ ಕಲಿತಿದ್ದರು. ಸಂಸ್ಕರಿಸಿದ ಹತ್ತಿಯನ್ನು ಅವರು ಹುಬ್ಬಳ್ಳಿಯಿಂದ ತರಿಸಿಕೊಂಡು ಬಳಿಕ ಸ್ಥಳೀಯ ನೇಕಾರರಿಗೆ ತಾವು ನೂತ ನೂಲನ್ನು ನೀಡುತ್ತಿದ್ದರಂತೆ.) ಉಡುಪಿಯಲ್ಲೂ ಅನೇಕ ಕೈಮಗ್ಗಗಳಿದ್ದು ಬಾಸೆಲ್ ಮಿಶನ್ನಿನ ಪ್ರವೇಶಾನಂತರ (ಕ್ರಿಶ್ಚಿಯನ್ ಧರ್ಮಕ್ಕೆ ಮತಾಂತರ ಹೊಂದಿದವರಿಗಾಗಿ ಅದು ನೀಡಿದ ತರಬೇತಿಯಲ್ಲಿ ನೇಯ್ಗೆಯೂ ಒಂದಾಗಿತ್ತು.) ಈ ಉದ್ಯಮವೂ ಬೆಳೆಯಿತು. ಜರ್ಮನಿಯಿಂದ ಬಾಸೆಲ್ ಮಿಶನ್ನಿನವರು ತರಿಸಿದ ಬಣ್ಣಗಳನ್ನು ಇಲ್ಲಿನ ನೂಲಿಗೆ ಬಳಸುವುದನ್ನು ಈ ಜಿಲ್ಲೆಯ ನೇಕಾರರು ಕಲಿತರು. ೧೯೩೫ರ ಸುಮಾರಿಗೆ ಉಡುಪಿಯಲ್ಲಿ ೪೭೧, ಕುಂದಾಪುರದಲ್ಲಿ ೫೩

ಹಾಗೂ ಕಾರ್ಕಳದಲ್ಲಿ ೫೨ ಮಗ್ಗಗಳಿದ್ದುವು. ಉಡುಪಿ ತಾಲೂಕಿನಲ್ಲಿ ೫ ಮಗ್ಗಗಳಲ್ಲಿ ಕೃತಕ ರೇಶಿಮೆಯನ್ನು ನೇಯುತ್ತಿದ್ದರೆನ್ನಲಾಗಿದೆ. ಉಪ್ಪುಂದ, ಮರವಂತೆ, ಉಪ್ಪಿನಕುದ್ರು, ಕೋಣಿ, ತೋನ್ಸೆ, ಮಲ್ಪೆ ಮುಂತಾದೆಡೆ ಹುರುಹಗ್ಗದ ಉದ್ಯಮ ಬಹಳ ಜನರಿಗೆ ಉದ್ಯೋಗಾವಕಾಶಗಳನ್ನು ನೀಡಿ ಈ ಜಿಲ್ಲೆಯಿಂದ ಮುಂಬೈ ಮತ್ತು ಮೈಸೂರಿಗೂ ಹುರಿಹಗ್ಗ ರಫ್ತಾಗುತ್ತಿತ್ತು. ಕಾಚು ಉತ್ಪಾದನೆ ಕುಂದಾಪುರ ತಾಲೂಕಿನ ಪ್ರಮುಖ ಸಣ್ಣ ಉದ್ಯಮವಾಗಿದ್ದರೆ, ಕಾರ್ಕಳದಲ್ಲಿ ಕಲ್ಲಿನ ಉದ್ಯಮ, ತೆಂಗಿನೆಣ್ಣೆ ತಯಾರಿ, ಬೆತ್ತ, ಬುಟ್ಟಿ, ಚಾಪೆಗಳ ಉದ್ಯಮ ಪ್ರಮುಖವಾಗಿತ್ತು. ಈ ಜಿಲ್ಲೆಯಲ್ಲಿ ತಯಾರಾದ ಹಂಚುಗಳು, ಕೊಲಂಬೊ, ಕೊಚ್ಚಿ, ಕಾಥೇವಾಡ, ಕರಾಚಿ, ಮುಂಬೈ, ಕೊಡಗು ಮತ್ತು ಮೈಸೂರುಗಳಿಗೆ ರಫ್ತಾಗುತ್ತಿದ್ದುವು. ಈ ಉದ್ಯಮದ ಬೆಳವಣಿಗೆಯಲ್ಲಿ ಬಾಸೆಲ್ ಮಿಶನ್ನಿನ ಕೊಡುಗೆ ಮಹತ್ವದಾಗಿತ್ತು. ಈ ಜಿಲ್ಲೆಯ ವಿವಿಧೆಡೆ ವಾರದ ಸಂತೆಗಳು ನಡೆಯುತ್ತಿದ್ದು ಆಗ ಸುತ್ತ ಮುತ್ತಣ ಪ್ರದೇಶಗಳ ಮಾರಾಟ ಭರದಿಂದ ನಡೆಯುತ್ತಿತ್ತು. ಇದರ ಜತೆಗೆ ಅನೇಕ ಧರ್ಮಕ್ಷೇತ್ರಗಳ ವರ್ಷಾವಧಿ ಜಾತ್ರೆಗಳೂ ಇಲ್ಲಿನ ಆರ್ಥಿಕ ಚಟುವಟಿಕೆಗಳ ಹೆಚ್ಚಳಕ್ಕೆ ಕಾರಣವಾಗುತ್ತಿದ್ದವು. ಉದಾ: ಕುಕ್ಕೆ ಸುಬ್ರಹ್ಮಣ್ಯ ಷಷ್ಠಿಯ ಸಂದರ್ಭದಲ್ಲಿ ಜಾನುವಾರು ಜಾತ್ರೆಗೆ ಕುಂದಾಪುರ ಹಾಗೂ ದಕ್ಷಿಣ ಮಾಗಣೆಗಳಿಂದಲೂ ಜಾನುವಾರುಗಳನ್ನು ಖರೀದಿಸಲು ಜನರು ಬರುತ್ತಿದ್ದರು. ೧೮೦೧ರಷ್ಟು ಹಿಂದೆಯೇ ದಶಂಬರದಲ್ಲಿ ನಡೆಯುವ ಈ ಜಾತ್ರೆಗೆ ಸುಮಾರು ೧೦,೦೦೦ ದಷ್ಟು ಜಾನುವಾರುಗಳನ್ನು ಮಾರಾಟಕ್ಕೆ ತಂದಿದ್ದರೆಂಬ ವರದಿ ದೊರೆಯುತ್ತದೆ. ಅಂತೆಯೇ ಧರ್ಮಸ್ಥಳದಲ್ಲಿ ನವೆಂಬರ್ ಕೊನೆಯಲ್ಲಿ, ದಶಂಬರ ಮೊದಲ ವಾರ ನಡೆಯುವ ಜಾತ್ರೆ, ಕಲ್ಯಾಣಪುರ ಇಗರ್ಜಿಯಲ್ಲಿ ನಡೆಯುವ ಸಾಂತ್‌ಮಾರಿ ಹಬ್ಬ – ಇವೆಲ್ಲ ಧಾರ್ಮಿಕ ಹಾಗೂ ವ್ಯಾಪಾರೀ ಮಹತ್ವವನ್ನು ಪಡೆದಿದ್ದುವು. ಎರಡು ವರ್ಷಗಳಿಗೊಮ್ಮೆ ನಡೆಯುವ ಉಡುಪಿ ಪರ್ಯಾಯಕ್ಕೆ ಸುಮಾರು ೧೨೦೦೦ ದಷ್ಟು ಜನರು ಬರುತ್ತಿದ್ದು, ಆ ಸಂದರ್ಭದಲ್ಲಿ ವಿಶೇಷವಾಗಿ ಜವುಳಿ ವ್ಯಾಪಾರ ನಡೆಯುತ್ತಿತ್ತು. ಕೊಲ್ಲೂರು ರಥೋತ್ಸವಕ್ಕೂ ಸುಮಾರು ೧೫೦೦೦ ದಷ್ಟು ಜನರು ಸೇರುತ್ತಿದ್ದರು. ಹಿರಿಯಡ್ಕ, ಸೂರಾಲು, ಕಾಂತಾವರ, ಬಾರ್ಕೂರುಗಳ ವಾರ್ಷಿಕ ರಥೋತ್ಸವಗಳು ಧಾರ್ಮಿಕ ಹಾಗೂ ವ್ಯಾಪಾರೀ ಮಹತ್ವವನ್ನು ಪಡೆದಿದ್ದುವು.

ಇಲ್ಲಿನ ಆರ್ಥಿಕ ಚಟುವಟಿಕೆಗಳಲ್ಲಿ ಕಂಪೆನಿ ಸರಕಾರದ ಆಡಳಿತ ಹಸ್ತಕ್ಷೇಪ ಅತ್ಯಂತ ಕನಿಷ್ಠದ್ದಾಗಿದ್ದು, ಸುಂಕದ ದರಗಳನ್ನು ಬದಲಾಯಿಸುವ ನಿರ್ಧಾರಗಳ ಹೊರತು, ಜನರಿಗೆ ಅಗತ್ಯವಾದ ಮೂಲಭೂತ ಸೌಕರ್ಯಗಳನ್ನು ಒದಗಿಸುವ ನಿಟ್ಟಿನಲ್ಲಿ ಜನಪರ ಯೋಜನೆಗಳ ಅನುಷ್ಠಾನವಾದದ್ದು ಕಡಿಮೆ ಎಂದೇ ಹೇಳಬಹುದು. ಬ್ರಿಟಿಷ್ ಆಡಳಿತದಲ್ಲಿ ಆರ್ಥಿಕರಂಗಕ್ಕೆ ಪ್ರಯೋಜನಕಾರಿಯಾದ ಕೆಲವು ಪ್ರಯತ್ನ ಬ್ಯಾಂಕಿಂಗ್ ಕ್ಷೇತ್ರದಲ್ಲಿ ನಡೆದದ್ದು ಖಾಸಗಿ ಪ್ರಯತ್ನದಿಂದ ಎನ್ನುವುದು ಗಮನಾರ್ಹ. ಉಡುಪಿಯಲ್ಲಿ ೧೯೦೬ರಲ್ಲಿ ಆರಂಭವಾದ ದಿ. ಕೆನರಾ ಬ್ಯಾಂಕಿಂಗ್ ಕಾರ್ಪೊರೇಶನ್ ಲಿ. (ಮುಂದೆ ಕಾರ್ಪೊರೇಷನ್ ಬ್ಯಾಂಕ್ ಲಿ.), ೧೯೨೦ರಲ್ಲಿ ಆರಂಭವಾದ ಪಾಂಗಾಳ ನಾಯಕ್ ಬ್ಯಾಂಕ್ ಲಿ. (ಕ್ರಮೇಣ ಮುಚ್ಚುಗಡೆ.), ಅದೇ ವರ್ಷ ಆರಂಭವಾದ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್ ಲಿ. (ಮುಂದಿ ಸಿಂಡಿಕೇಟ್ ಬ್ಯಾಂಕ್ ಲಿ.), ೧೯೩೨ರಲ್ಲಿ ಕುಂದಾಪುರದಲ್ಲಿ ಸ್ಥಾಪಿತವಾದ ಕುಂದಾಪುರ ಬ್ಯಾಂಕ್ ಲಿ. (ಕ್ರಮೇಣ ಮುಚ್ಚುಗಡೆ), ೧೯೩೩ರಲ್ಲಿ ಉಡುಪಿಯಲ್ಲಿ ಸ್ಥಾಪಿತವಾದ ತುಳುನಾಡು ಬ್ಯಾಂಕ್ ಎಂಡ್ ಸಪ್ಲೈ ಏಜೆನ್ಸಿ ಲಿ. (ಮುಚ್ಚುಗಡೆ), ೧೯೩೪ರಲ್ಲಿ ಕುಂದಾಪುರ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬ್ಯಾಂಕ್ (ಕ್ರಮೇಣ ಮುಚ್ಚುಗಡೆ), ೧೯೪೨ರಲ್ಲಿ ಮತ್ತು ೧೯೪೩ರಲ್ಲಿ ಅನುಕ್ರಮವಾಗಿ ಉಡುಪಿಯಲ್ಲಿ ಸ್ಥಾಪಿತವಾದ ಸದರ್ನ್ ಇಂಡಿಯಾ ಅಪೆಕ್ಸ್ ಬ್ಯಾಂಕ್ ಲಿ., ಮತ್ತು ಮಹಾರಾಷ್ಟ್ರ ಎಪೆಕ್ಸ್ ಬ್ಯಾಂಕ್ ಲಿ. (ಮುಂದೆ ಸಿಂಡಿಕೇಟ್ ಬ್ಯಾಂಕ್‌ನೊಂದಿಗೆ ವಿಲೀನ – ಇವೆಲ್ಲ ಬ್ರಿಟಿಷ್ ಆಳ್ವಿಕೆಯಲ್ಲಿ ಈ ಜಿಲ್ಲೆಯಲ್ಲಿ ಬ್ಯಾಂಕಿಂಗ್ ಕ್ಷೇತ್ರದಲ್ಲಿ ಖಾಸಗಿ ಪ್ರಯತ್ನದಿಂದಾದ ಸಾಧನೆಗಳು" (ಸಂ. – ಮುರಳೀಧರ ಉಪಾಧ್ಯ ಹಿರಿಯಡಕ (೨೦೦೪), 'ಸಂಭ್ರಮ')

ವ್ಯಾಪಾರೀ ಮಹತ್ವದ ಮಹತ್ವದ ಜಾತ್ರೆಗಳಲ್ಲಿ ಹಿರಿಯಡ್ಕದ ಜಾತ್ರೆಯನ್ನು ಡಾ| ಮಾಲತಿ ಮೂರ್ತಿ ಇಲ್ಲಿ ಉಲ್ಲೇಖಿಸಿದ್ದಾರೆ. ನಾನು ನನ್ನ ಬಾಲ್ಯದ ದಿನಗಳಲ್ಲಿ ನೋಡಿದ ಹಿರಿಯಡಕದ ಹುಣ್ಣಿಮೆ (ಸಿರಿಜಾತ್ರೆ) ನೆನಪಾಗುತ್ತದೆ. ಹಿರಿಯಡ್ಕದ ಸಿರಿಜಾತ್ರೆಯ ಮನಃಶಾಸ್ತ್ರೀಯ ಮಹತ್ವವನ್ನು ಸಮಾಜಶಾಸ್ತ್ರಜ್ಞರು ಈಗಾಗಲೇ ಗುರುತಿಸಿದ್ದಾರೆ. ಸಿರಿಜಾತ್ರೆಯಂದು ಗೊರಬಿನ (ಕೊರಂಬು) ಜಾತ್ರೆಯೂ ನಡೆಯುತ್ತಿತ್ತು.

ಎಲೆಯಿಂದ ತಯಾರಿಸಿದ ಗೊರಬು ಕೃಷಿಕಾರ್ಮಿಕರಿಗೆ, ಕಾರ್ಮಿಕರಿಗೆ, ಗೃಹಿಣಿಯರಿಗೆ 'ತೆಂಕಣಗಾಳಿ'ಯು, 'ಕೊಂಕಣಸೀಮೆ'ಗೆ ತರುವ ಜಡಿಮಳೆಯಿಂದ ರಕ್ಷಿಸಿಕೊಳ್ಳಲು ಸಹಾಯ ಮಾಡುತ್ತಿತ್ತು. ಗೊರಬಿನ ತಯಾರಿ ಸಾವಿರಾರು ಬಡವರಿಗೆ ಉದ್ಯೋಗ ನೀಡುತ್ತಿತ್ತು.

ಹಿರಿಯಡ್ಕದ ಜಾತ್ರೆಗೆ ಹಳ್ಳಿಗಳಿಂದ ನೂರಾರು ಗೊರಬಿನ ಗಾಡಿಗಳು ಬಂದು ನಮ್ಮ ಮನೆಯ ಮುಂದೆ ಸಾಲಾಗಿ ನಿಲ್ಲುತ್ತಿದ್ದುವು. ಆ ಗೊರಬುಗಳನ್ನು ಕೊಳ್ಳಲು ಜಿಲ್ಲೆಯ ಬೇರೆ ಬೇರೆ ಊರುಗಳಿಂದ ವ್ಯಾಪಾರಿಗಳು ಬರುತ್ತಿದ್ದರು. ಸಿರಿ ಜಾತ್ರೆಯ ದೈವಗಳ ಆವೇಶ ನೋಡಿ ಭಯಪಡುತ್ತಿದ್ದ ನಾವು 'ಈ ವರ್ಷ ಜಾತ್ರೆಗೆ ಎಷ್ಟು ಗೊರವಿನ ಗಾಡಿ ಬಂದಿದೆ?' ಎಂದು ಲೆಕ್ಕ ಹಾಕುತ್ತಿದ್ದೆವು. ಗೊರಬಿನ ವ್ಯಾಪಾರಿಗಳಂತ ಸಣ್ಣ ಪುಟ್ಟ ವರ್ತಕರ ಹಿತೈಷಿಯಾಗಿ ಕಾರ್ಪೊರೇಶನ್ ಬ್ಯಾಂಕ್‌ನಂಥ ಬ್ಯಾಂಕುಗಳು ಬೆಳೆದುವು.

ಹಾಜಿ, ಅಬ್ದುಲ್ಲಾ ಸಾಹೇಬರು ಕವಿ ಮುದ್ದಣನಿಗಿಂತ ಹನ್ನೆರಡು ವರ್ಷ ಕಿರಿಯರು. ಕತೆಗಾರ, ನಾಟಕಕಾರ ಎಂ.ಎನ್. ಕಾಮತರು (ಮಂಡ್ಕೂರು ನರಸಿಂಗ ಕಾಮತರು) ಹಾಜಿ ಅಬ್ದುಲ್ಲಾ ಸಾಹೇಬರಿಗಿಂತ ಒಂದು ವರ್ಷ ಕಿರಿಯರು. ಹಾಜಿ ಅಬ್ದುಲ್ಲಾ ಸಾಹೇಬರು ಉಡುಪಿಯ ಕತೆಗಾರ ಕೊರಡ್ಕಲ್ ಶ್ರೀನಿವಾಸ ರಾಯರಿಗಿಂತ ಮೂರು ವರ್ಷ, ಉಡುಪಿಯ ಸ್ವಾತಂತ್ರ್ಯ ಹೋರಾಟಗಾರ ಎಸ್.ಯು. ಪಣಿಯಾಡಿಯವರಿಂದ ಹದಿನೈದು ವರ್ಷ, ಡಾ| ಟಿ.ಎಂ. ಎ. ಪೈ. ಅವರಿಗಿಂತ ಹದಿನಾಲ್ಕು ವರ್ಷ, ಡಾ| ಶಿವರಾಮ **ಕಾರಂತರಿಗಿಂತ ಇಪ್ಪತ್ತು ವರ್ಷ ಹಿರಿಯರು.**

*** * ***

## ಅಧ್ಯಾಯ ೧. ಕಾರ್ಪೊರೇಟ್ ಕನಸುಗಳ ಯುವಕ

ಮಲ್ಪೆ, ಉಡುಪಿ ಬಳಿಯಲ್ಲಿ ಕಡಲ ತೀರದಲ್ಲಿರುವ ಪಟ್ಟಣ. ಇದು ಇತಿಹಾಸದ ಇಳಿತ – ಭರತಗಳನ್ನು ಕಂಡಿದೆ. ಹದಿಮೂರನೆಯ ಶತಮಾನದಲ್ಲಿ ಉಡುಪಿಯ ಮಧ್ವಾಚಾರ್ಯರಿಗೆ ಬಾಲಕೃಷ್ಣನ ಮೂರ್ತಿ ಸಿಕ್ಕಿದ್ದು ಮಲ್ಪೆಯ ಕಡಲತೀರದಲ್ಲಿ. ದ್ವಾರಕೆಯ ಮೂರ್ತಿ ಮಲ್ಪೆಯ ಕಡಲ ಕಿನಾರೆಗೆ ಬಂದದ್ದು 'ಕೃಷ್ಣಲೀಲೆ'ಯಲ್ಲದೆ ಮತ್ತೇನು? ಮಲ್ಪೆಯ ಬಳಿ ಕಡಲಲ್ಲಿರುವ ಸೈಂಟ್ ಮೆರೀಸ್ ದ್ವೀಪದ ಸಮುದ್ರರಾಜ ನಿರ್ಮಿತ ಕಲಾಕೃತಿಗಳ (ಬಂಡೆಗಳು). ಖ್ಯಾತಿ ಜಗದಗಲ ಹರಡಿದೆ. ಮಲ್ಪೆ ಕರ್ನಾಟಕದ ಪ್ರಸಿದ್ಧ ಮೀನುಗಾರಿಕಾ ಬಂದರು. ಮಲ್ಪೆಯ 'ಬಂಗುಡೆ', 'ಬೂತಾಯಿ'ಗಳ ರುಚಿ ಕರ್ನಾಟಕದ ಮತ್ಸ್ಯಪ್ರಿಯರಿಗೆಲ್ಲ ಗೊತ್ತು. ಹಾಜಿ ಅಬ್ದುಲ್ಲಾ ಸಾಹೇಬರ ತಂದೆ ಖಾಸಿಮ್ ಬುಡಾನ್ ಸಾಹೇಬರು ಮಲ್ಪೆಯಲ್ಲಿ ವಾಸಿಸುತ್ತಿದ್ದರು.

ಹಾಜಿ ಅಬ್ದುಲ್ಲಾ ಸಾಹೇಬರ ಸೋದರಿಯ ಮೊಮ್ಮಗ ಡಾ. ಎಸನ್. ಎ. ಹುಸೇನ್ ಅವರು ಹೇಳುವಂತೆ, "ಗುಜರಾತ್‌ನ ಜುನಾಗಢ ಪ್ರದೇಶದಿಂದ ವ್ಯಾಪಾರ ವಹಿವಾಟು ಕಾರಣದಿಂದ ದಕ್ಷಿಣ ಕನ್ನಡಕ್ಕೆ ಬಂದು ನೆಲೆಸಿದ ಕುಟುಂಬಕ್ಕೆ ಸೇರಿದವರು ಹಾಜಿ ಅಬ್ದುಲ್ಲಾ "ಪ್ರಜಾವಾಣಿ' ಮಂಗಳೂರು, ೧೮೧-೨೦೦೬) ಉರ್ದು ಮನೆಮಾತಿನ ಈ ಕುಟುಂಬದವರು ಗಂಧದೆಣ್ಣೆ, ಅಕ್ಕಿ, ಒಣಮೀನು ವ್ಯಾಪಾರ, ರಫ್ತು ಮಾಡುತ್ತಿದ್ದ ಪ್ರಸಿದ್ಧ ವರ್ತಕರಾಗಿದ್ದು. ಖಾಸಿಮ್ ಸಾಹೇಬರು ಬಡವರಿಗೆ ದಿನಕ್ಕೆ ಒಂದು ಮುಡಿ ಅಕ್ಕಿ (ನಲವತ್ತು ಕಿಲೋ) ವಿತರಣೆ ಮಾಡುತ್ತಿದ್ದ ಕೊಡುಗೈ ದಾನಿಯಾಗಿದ್ದರು. ಅವರು ಎಷ್ಟು ಶ್ರೀಮಂತರಾಗಿದ್ದರು ಎಂಬುದನ್ನು ಮಲ್ಪೆಯ ಹಿರಿಯರು ಈಗಲೂ ತುಳುವಿನಲ್ಲಿ ಹೀಗೆ ವರ್ಣಿಸುತ್ತಾರೆ – 'ನೋಟು ಪೊತ್ತಾದ್ ಚಾ ಮಲ್ಪುನಾತ್ ದೊಡ್ಡು ಅಗಲೆಡ ಇತ್ತ್‌ಂಡ್‌ಗೆ" (ನೋಟಿನ ಕಟ್ಟಿನಲ್ಲೆ ಬೆಂಕಿ ಉರಿಸಿ ಚಾ ಮಾಡುವಷ್ಟು ಸಂಪತ್ತು ಅವರಲ್ಲಿತ್ತಂತೆ.)

ಖಾಸಿಮ್ ಬುಡಾನ್ ಸಾಹೇಬ್ – ಬಾನುಬೀಬಿ ದಂಪತಿಗಳ ಮಗನಾಗಿ ಅಬ್ದುಲ್ಲಾ ಸಾಹೇಬರು ಜನಿಸಿದ್ದು ೧೮೮೨ರಲ್ಲಿ. ಇವರ ಸೋದರರ ಬಗ್ಗೆ ಮಾಹಿತಿಗಳು ಲಭ್ಯವಿಲ್ಲ. ಲತೀಫಾ ಬೇಬಿ, ಫಾತಿಮಾ ಬೀಬಿ ಇವರ ಸೋದರಿಯರು. ಲತೀಫಾ ಅವರು ಕಾರ್ಕಳದ ಪ್ರಸಿದ್ಧ

ಭೂಮಾಲಿಕ ಕುಟುಂಬದ ಅಂಡಾರ್ ಸೈಯದ್ ಅಬ್ಬಾಸ್ ಸಾಹೇಬರನ್ನು ಮದುವೆಯಾದರು. ಉಡುಪಿಯ ಆ ಕಾಲದ 'ಸುಬೋಧಿನಿ' ಪತ್ರಿಕೆ ಖಾಸಿಮ್ ಸಾಹೇಬರ ಮನೆಯ ಸಮಾರಂಭವೊಂದನ್ನು ಹೀಗೆ ವರ್ಣಿಸಿತ್ತು – "ಅಬ್ದುಲ್ಲಾ ಸಾಹೇಬರ ತಂದೆಯವರಾದ ಖಾಸಿಮ್ ಸಾಹೇಬರು ತನ್ನ ಹಿರಿಯ ಮಗನ 'ಖತ್ನಾ' ಸಮಾರಂಭಕ್ಕೆ ಊರೆಲ್ಲಾ ಕರೆ ಕಳುಹಿಸಿ ದೊಡ್ಡ ಔತಣ ಏರ್ಪಡಿಸಿದ್ದು ಮಾತ್ರವಲ್ಲ. ಶಾಖಾಹಾರಿ ಬ್ರಾಹ್ಮಣರಿಗಾಗಿ ಅದೇ ಚಪ್ಪರದಲ್ಲಿ ಪ್ರತ್ಯೇಕ ಭೋಜನವನ್ನು ಏರ್ಪಡಿಸಿ, ಆಮೇಲೆ ದಕ್ಷಿಣೆಯನ್ನು ವಿತರಿಸಿದರು. ಇದು ಉಡುಪಿ ಪರ್ಯಾಯದಂತಿತ್ತು."

ಖಾಸಿಮ್ ಸಾಹೇಬರ ಎಚ್.ಬಿ. ಕಂಪನಿಯ ಕಛೇರಿ ಉಡುಪಿಯಲ್ಲಿತ್ತು. ಮಲ್ಪೆಯಿಂದ ಉಡುಪಿಗೆ ಅವರು ತನ್ನ ಮಗ ಅಬ್ದುಲ್ಲನೊಂದಿಗೆ ಕುದುರೆ ಸಾರೋಟಿನಲ್ಲಿ ಬರುತ್ತಿದ್ದರು. ೧೯೦೧ರ ಅಕ್ಟೋಬರ್‌ನಲ್ಲಿ ಅಬ್ದುಲ್ಲಾ ಸಾಹೇಬರು ತನ್ನ ತಂದೆ ಖಾಸಿಮ್ ಸಾಹೇಬರ ಸ್ಮಾರಕ ದತ್ತಿನಿಧಿ ಬಹುಮಾನವೊಂದನ್ನು ಆರಂಭಿಸಿದರು. ಅಂದರೆ ೧೯೦೧ರ ಅಕ್ಟೋಬರ್‌ಗಿಂತ ಮುನ್ನ ಹಾಜಿ ಖಾಸಿಮ್ ಸಾಹೇಬರು ನಿಧನರಾದರು. ಆಗ ಅಬ್ದುಲ್ಲಾ ಸಾಹೇಬರಿಗೆ ಹತ್ತೊಂಬತ್ತರ ಹರೆಯ.

ಅಬ್ದುಲ್ಲಾ ಸಾಹೇಬರು ಉಡುಪಿಯಲ್ಲೆ ಹೈಸ್ಕೂಲು ಶಿಕ್ಷಣ ಪಡೆದರು. ಅವರಿಗೆ ಕನ್ನಡ, ತುಳು, ಇಂಗ್ಲಿಷ್ ಭಾಷೆಗಳು ಗೊತ್ತಿದ್ದುವು. ಕೊಂಕಣಿ ಅರ್ಥವಾಗುತ್ತಿತ್ತು. ವಹಾಬ್ ದೊಡ್ಡ ಮನೆ ಅವರು ಬರೆದಿರುವಂತೆ, "ತಲೆಯ ಮೇಲೆ ಕೆಂಪಗಿನ ಟರ್ಕಿ ಪೇಜ್ ಟೊಪ್ಪಿ ಆಗಿನ ಕಾಲದ ಮುಸ್ಲಿಮ್ ಹುಡುಗರ ಆದರ್ಶ. ಟರ್ಕಿ ದೇಶದ ಕ್ರಾಂತಿಕಾರಿ ನಾಯಕ 'ಅತಾಟರ್ಕ್' ಎಂದು ಪ್ರಸಿದ್ಧನಾದ ಮುಸ್ತಾಫಾ ಕಮೋಲ್‌ನಿಂದ ಅನುಕರಿಸಿದ್ದು. ಹೆಚ್ಚು ಎತ್ತರವೂ ಅಲ್ಲ. ಕುಳ್ಳನೂ ಅಲ್ಲದ ಸೌಮ್ಯ ಸ್ವಭಾವದ, ಶ್ರೀಮಂತಿಕೆಯ ಗತ್ತು ತೋರದ ಅಬ್ದುಲ್ಲಾ ಸಾಹೇಬರು ಜನಸಾಮಾನ್ಯರಲ್ಲಿ ಒಬ್ಬನಂತೆ ಮೆರೆದವರು" (ಮುರಳೀಧರ ಉಪಾಧ್ಯ, ಎಚ್. ಡುಂಡಿರಾಜ್(ಸಂ) – ಹಾಜಿ ಅಬ್ದುಲ್ಲಾ ಸಾಹೇಬ್, ೨೦೦೧)

ಯುವಕ ಅಬ್ದುಲ್ಲಾ ಸಾಹೇಬರು ತನ್ನ ತಂದೆಯವರ ಅಕ್ಕಿ, ಗಂಧದೆಣ್ಣೆ, ಒಣಮೀನು ವ್ಯಾಪಾರವನ್ನು ಮುಂದುವರಿಸಿದರು. ಒಣಮೀನಿನ ರಫ್ತು ವ್ಯಾಪಾರದಲ್ಲಿ ಮಲ್ಪೆಯ ಶ್ರೀ ಮುತ್ತಪ್ಪ ಸಾಹುಕಾರರು ಅಬ್ದುಲ್ಲಾ ಸಾಹೇಬರ ಪಾಲುದಾರರಾಗಿದ್ದರು. (ದಿ| ಮುತ್ತಪ್ಪ ಸಾಹುಕಾರರು ಉಡುಪಿಯ ಮಾಜಿ ಎಂ.ಎಲ್.ಎ., ಕೊಡುಗೈದಾನಿ ಶ್ರೀ ಮಧ್ವರಾಜರ ತಂದೆ.) ಅಬ್ದುಲ್ಲಾ ಸಾಹೇಬರ ಎಚ್.ಬಿ.ಕಂಪನಿಗೆ ಇಡೀ ಮದ್ರಾಸ್ ರಾಜ್ಯದ 'ನಿಮ್‌ಕೊ" ಬೆಂಕಿಪೆಟ್ಟಿಗೆ ಕಂಪೆನಿಯ ಏಜೆನ್ಸಿ ಸಿಕ್ಕಿತ್ತು. ಕಾಫಿಪುಡಿ ವ್ಯಾಪಾರ ಆರಂಭಿಸಿದ ಅಬ್ದುಲ್ಲಾ ಸಾಹೇಬರು ಉಡುಪಿಯವರಿಗೆ ಕಾಫಿಯ ರುಚಿ ಕಲಿಸಿದರು. ಮುಂದೆ ನಿಧಾನವಾಗಿ ಉಡುಪಿಯ ರಥಬೀದಿಯಲ್ಲಿ ಶಿವಳ್ಳಿ ಬ್ರಾಹ್ಮಣರ ಕಾಫಿ ಹೋಟೇಲುಗಳು ಆರಂಭವಾದುವು. ಎಚ್.ಪಿ. ಕಂಪೆನಿ ಅರೇಬಿಯಾದಿಂದ ಖರ್ಜೂರವನ್ನು ಆಮದು ಮಾಡುತ್ತಿತ್ತು. ಉಡುಪಿ ಜಿಲ್ಲೆಯ ಜಾತ್ರೆಯ ಅಂಗಡಿಗಳಲ್ಲಿ ವಿದೇಶಿ ಹಣ್ಣು ಖರ್ಜೂರ ವಿಶೇಷ ಆಕರ್ಷಣೆ ಗಳಿಸಿತ್ತು.

೧೯೦೧ರ ಅನಂತರ ಅಬ್ದುಲ್ಲಾ ಸಾಹೇಬರು ಉಡುಪಿಯಲ್ಲಿ ಮನೆ ಕಟ್ಟಿಸಿದರು. ಅವರ ಎಚ್.ಬಿ. ಕಂಪೆನಿಯ ಕಛೇರಿ ಇದ್ದ ಸ್ಥಳದಲ್ಲೆ, ಅಂದರೆ ಈಗ ಕಾರ್ಪೊರೇಶನ್ ಬ್ಯಾಂಕ್ ಇರುವಲ್ಲಿ ಅವರ ನೂತನ ನಿಕೇತನ ನಿರ್ಮಾಣಗೊಂಡಿತು. ಅವರು ಗೋಶಾಲೆಯಲ್ಲಿ ಹಲವು ಹೊಸ ತಳಿಯ ದನಗಳಿದ್ದವು. ಅವರು ಸಾಕುತ್ತಿದ್ದ ನವಿಲುಗಳು 'ತುರ್ಕೆಗಿಳಿ' ಉಡುಪಿಯಲ್ಲಿ ಮನೆಮಾತಾಗಿದ್ದುವು. ಅವುಗಳನ್ನು ನೋಡಲು ಉಡುಪಿಯ ಹತ್ತಾರು ಮಕ್ಕಳು ಅಬ್ದುಲ್ಲಾ ಸಾಹೇಬರು ಮನೆಗೆ ಬರುತ್ತಿದ್ದರು.



ಸ್ಥಾಪಕ, ಅಧ್ಯಕ್ಷ ಅಬ್ದುಲ್ಲಾ ಸಾಹೇಬರ ಮನೆ - ಬ್ಯಾಂಕಿನ ಆರಂಭ ಕಾಲದ ಕಛೇರಿ

ಅಬ್ದುಲ್ಲಾ ಸಾಹೇಬರ ಸಂಬಂಧದವರಾದ ನಸೀಬ್ ಸಾಹೇಬರು ಕಾರ್ಪೊರೇಶನ್ ಬ್ಯಾಂಕ್‌ನ ಕೆಲವು ದಶಕಗಳ ಕಾಲ ಸೇವೆ ಸಲ್ಲಿಸಿ ೧೯೭೩ರಲ್ಲಿ ನಿವೃತ್ತರಾದರು. ಅವರು ಒಂದು ಸಂದರ್ಶನದಲ್ಲಿ ಅಬ್ದುಲ್ಲಾ ಸಾಹೇಬರನ್ನು ಹೀಗೆ ನೆನಪಿಸಿಕೊಂಡರು – "ತನ್ನ ತಮ್ಮ – ತಂಗಿಯರ ಬಗ್ಗೆ ಅವರಿಗೆ ತುಂಬ ವಾತ್ಸಲ್ಯ. ಅಬ್ದುಲ್ಲಾ ಸಾಹೇಬರ ಮನೆಯ ಸಮಾರಂಭಗಳಿಗೆ ಅವರ ಸೋದರ-ಸೋದರಿಯರೆಲ್ಲ ಬರುತ್ತಿದ್ದರು. ನಾನು 'ಥರ್ಡ್ ಫಾರ್ಮ್' ಓದುತ್ತಿದ್ದ ದಿನಗಳಿಂದ ನನಗೆ ಅವರ ನೆನಪುಗಳಿವೆ. ಆಗ ಅವರು ಆಗಾಗ ದಿಲ್ಲಿ, ಕಾಶ್ಮೀರಕ್ಕೆ ಹೋಗಿಬರುತ್ತಿದ್ದರು. ಅವರು ಯಾವಾಗ ದಿಲ್ಲಿಗೆ ಹೋಗುತ್ತಿದ್ದರೆಂದು ನಮಗೆ ಗೊತ್ತಾಗುತ್ತಿರಲಿಲ್ಲ. ಆದರೆ ಅವರು ಬಂದದ್ದು ಕೂಡಲೇ ಗೊತ್ತಾಗುತ್ತಿತ್ತು. ಅವರು ಬರುವಾಗ ಬುಟ್ಟಿ ತುಂಬ ಸೇಬು ಹಾಗೂ ದಕ್ಷಿಣ ಕನ್ನಡದಲ್ಲಿ ಸಿಗದ ಇತರ ಹಣ್ಣುಗಳನ್ನು ತರುತ್ತಿದ್ದರು. ಆದ್ದರಿಂದ ನಾವು ಅವರು ಬರುವುದನ್ನೇ ಕಾಯುತ್ತಿದ್ದೆವು.

ಉಡುಪಿಯ ತನ್ನ ಅರಮನೆಯಂಥ ಮನೆಯಲ್ಲಿ ಅವರು ವಾಸಿಸುತ್ತಿದ್ದರು. ಆ ಮನೆಗೆ ಮುಂಬೈಯಿಂದ ತರಿಸಿದ ಮಾರ್ಬಲ್ ಹಾಗೂ ಸಿರಾಮಿಕ್ ಟೈಲ್ಸ್‌ಗಳನ್ನು ಬಳಸಲಾಗಿತ್ತು. ಆಗಿನ ಉಡುಪಿಯಲ್ಲಿ ಅವರ ಮನೆಯಷ್ಟು ಸವಲತ್ತುಗಳಿದ್ದ ಬೇರೆ ಒಂದೇ ಒಂದು ಮನೆಯೂ ಇರಲಿಲ್ಲ. ಆ ಮೆಯಲ್ಲಿ ಅವರು ಮತ್ತು ಅವರ ಹೆಂಡತಿ ಮಾತರ ಇದ್ದರು. ಅವರ ಮನೆಯಲ್ಲಿ ಎಂಟರಿಂದ ಹತ್ತು ಮಂದಿ ಮನೆ ಕೆಲಸದವರಿದ್ದರು. ಅವರು ಮನೆಗೆ ಬರುತ್ತಿದ್ದ ನೆಂಟರನ್ನು ಅತಿಥಿಗಳನ್ನು ಉಪಚರಿಸುತ್ತಿದ್ದರು. "(ಎಂ.ವಿ. ಕಾಮತ್ -Corporation Bank – A Corporate Journey', 1997). ೧೯೨೮ರಲ್ಲಿ ಅಬ್ದುಲ್ಲಾ ಸಾಹೇಬರು ಕೊಂಡುಕೊಂಡ ಫೋರ್ಡ್‌ಕಾರು ಉಡುಪಿಗೆ ಬಂದ ಮೊದಲ ಕಾರ್ ಆಗಿತ್ತು. ಹಲವು ದಿನಗಳ ಕಾಲ ಆ ಕಾರು ಉಡುಪಿಯಲ್ಲಿ ದೊಡ್ಡ ಸುದ್ದಿಯಾಗಿತ್ತು.

**ವಿದೇಶದಿಂದ ತರಿಸಿದ ಸಿರಾಮಿಕ್ ಟೈಲ್ಸ್‌ಗಳು**


ಮಾದರಿ ೧


ಮಾದರಿ ೨


ಮಾದರಿ ೩


ಮಾದರಿ ೪

ಅಬ್ದುಲ್ಲಾ ಸಾಹೇಬರ ಮನೆ ಉಡುಪಿಯ ರಥಬೀದಿಯಿಂದ ಕೂಗಳತೆಯ ದೂರದಲ್ಲಿತ್ತು. ಅಲ್ಲಿಂದ ಬಡಗುಪೇಟೆ ಮಾರ್ಗವಾಗಿ ರಥಬೀದಿಗೆ ಬಂದು ಅಲ್ಲಿ ಸುತ್ತಾಡುವುದೆಂದರೆ ಸಾಹೇಬರಿಗೆ ತುಂಬ ಇಷ್ಟ. ಬಡಗುಪೇಟೆಯ ಜವುಳಿ ವ್ಯಾಪಾರಿ ಶ್ರೀ ನಾನಾಲಾಲ್ ಶೇಟ್, ವರ್ತಕ ಶ್ರೀ ಯು. ರಾಮಪ್ಪ (ಈಗಿನ ಉಡುಪಿಯ ಸಮಾಜ ಸೇವಕ ಶ್ರೀ ಯು. ಆರ್. ಜಯವಂತ, ಮಾಜಿ ಶಾಸಕ ಶ್ರೀ ಯು. ಆರ್. ಸಭಾಪತಿ ಅವರ ತಂದೆ) ಅಬ್ದುಲ್ಲಾ ಸಾಹೇಬರ ಗೆಳೆಯರು. ದಾರಿಯಲ್ಲಿ "ನಾವು ಸಲಾಮ್ ಕೊಡುವುದನ್ನು ಮರೆತರೆ ಅವರೇ ಸಲಾಮ್ ಕೊಡುತ್ತಿದ್ದರು." ಎನ್ನುತ್ತಾರೆ ನಜೀಬ್ ಸಾಹೇಬರು. ಈಗ ಉಡುಪಿಯ ಸರಕಾರಿ ಮಹಿಳಾ ಆಸ್ಪತ್ರೆ (ಹಾಜಿ ಬುಡಾನ್ ಸ್ಮಾರಕ ಆಸ್ಪತ್ರೆ) ಇರುವ ಜಾಗದಲ್ಲಿ ಅಬ್ದುಲ್ಲಾ ಸಾಹೇಬರು ಟೆನ್ನಿಸ್ ಆಡುತ್ತಿದ್ದರು.

ಶ್ರೀ ಸಂತೋಷಕುಮಾರ್ ಗುಲ್ವಾಡಿ ಅವರು ಹೇಳುವಂತೆ, 'ಉಡುಪಿಯಲ್ಲಿದ್ದ ನಮ್ಮ ಮನೆಯ ಮುಂದಿನ ರಸ್ತೆಯಲ್ಲಿ ಹಾಜಿ ಅಬ್ದುಲ್ಲಾ ಸಾಹೇಬರು ನಡೆದುಕೊಂಡು ಹೋಗುತ್ತಿದ್ದಾಗ ನನ್ನ ಅಜ್ಜಿ ತನ್ನ ಮಗನನ್ನು ಕರೆದು, "ಅಬ್ದುಲ್ಲಾ ಸಾಹೇಬರು ಬಿಸಿಲಲ್ಲಿ ನಡೆಯುತ್ತಿದ್ದಾರೆ. ಓಡಿ ಹೋಗಿ ಅವರಿಗೆ ಕೊಡೆ ಹಿಡಿ" ಅಂದಿದ್ದರು. "(ಮುರುಳೀಧರ ಉಪಾಧ್ಯ, ಎಚ್. ಡುಂಡಿರಾಜ್ (ಸಂ.) ೨೦೦೧) ಅಬ್ದುಲ್ಲಾ ಸಾಹೇಬರ ಪತ್ನಿ ಮಂಗಳೂರಿನ ಕುದ್ರೋಳಿಯವರು. ಈ ದಂಪತಿಗಳಿಗೆ ಮಕ್ಕಳಿರಲಿಲ್ಲ. ಈಗ ಉಡುಪಿಯ ಹಿರಿಯ ನಾಗರಿಕರಲ್ಲೊಬ್ಬರಾಗಿರುವ, ಕಲ್ಪನಾ ಥಿಯೇಟರ್‌ನ ಮ್ಯಾನೇಜರ್ ಆಗಿದ್ದು ನಿವೃತ್ತರಾದ ಪಾಡಿಗಾರು ಶೀನ ಶೆಟ್ಟರು ತನ್ನ ಬಾಲ್ಯದಲ್ಲಿ ತಾಯಿಯ ಜೊತೆ ಅಬ್ದುಲ್ಲಾ ಸಾಹೇಬರ ಮನೆಗೆ ಹೋಗಿದ್ದರಂತೆ. ಅವರು ಅಬ್ದುಲ್ಲಾ ಸಾಹೇಬರ ಮನೆಯ ಒಂದು ದನವನ್ನು ಹದಿನಾರು ರೂಪಾಯಿ ಕೊಟ್ಟುಕೊಂಡು ಕೊಂಡರು. ಅಬ್ದುಲ್ಲಾ ಸಾಹೇಬರ ಹೆಂಡತಿ 'ಅಮ್ಮ ಇವನಿಗೇನಾದರೂ ತೆಗೆಸಿಕೊಡಿ' ಎಂದು ನಾಲ್ಕು ರೂಪಾಯಿಯನ್ನು ಶೀನಶೆಟ್ಟರ ತಾಯಿಗೆ ವಾಪಸು ಕೊಟ್ಟರು! ಎಸ್.ಎಸ್.ಎಲ್.ಸಿ. ಪಾಸು ಮಾಡಿದ ಶೀನ ಶೆಟ್ಟರು ಬೀದಿ ತಿರುಗುತ್ತಿದ್ದಾಗ ಅವರನ್ನು ದಾರಿಯಲ್ಲಿ ನಿಲ್ಲಿಸಿ ಮಾತನಾಡಿಸಿದ ಅಬ್ದುಲ್ಲಾ ಸಾಹೇಬರು, "ಏನು ಮಾಡುತ್ತಿದ್ದಿ? ಮನೆಗೆ ಬಾ. ಟೈಪ್‌ರೈಟರ್ ಇದೆ. ಸ್ವಲ್ಪ ಹೊತ್ತು ಕಲಿ". ಎಂದು ಆಹ್ವಾನಿಸಿದರು. (ಕು.ಶಿ. ಹರಿದಾಸ ಭಟ್, ೧೯೮೫)



ಸರಸ್ವತಿ ಬಾಯಿ ರಾಜವಾಡೆ (೧೯೧೩-೧೯೯೪) ಕನ್ನಡದ ಪ್ರಸಿದ್ಧ ಕತೆಗಾರ್ತಿ. ಇವರು ಹುಟ್ಟಿಬೆಳೆದದ್ದು ಉಡುಪಿ ತಾಲೂಕಿನ ಕಟ್ಟಿಂಗೇರಿ ಬಳಿಯ ಬಳಂಜಾಲ ಎಂಬ ಹಳ್ಳಿಯಲ್ಲಿ. ಬಾಲಕಿ ಸರಸ್ವತಿಯನ್ನು ದತ್ತುಪುತ್ರಿಯಾಗಿ ಸ್ವೀಕರಿಸಲು ಅಬ್ದುಲ್ಲಾ ಸಾಹೇಬ ದಂಪತಿಗಳು ಬಯಸಿದ್ದರಂತೆ. ಬಹುಶಃ ಈ ಘಟನೆ ೧೯೨೦ರ ವೇಳೆಗೆ ನಡೆದಿರಬೇಕು. ಮುಂದೆ ೧೯೨೮ರಲ್ಲಿ ೧೫ ವರ್ಷ ಪ್ರಾಯದ ಚೆಲುವೆ ಸರಸ್ವತಿಯ ಮದುವೆ ಅವಳಿಗಿಂತ ಮೂವತ್ತೇಳು ವರ್ಷ ಹಿರಿಯರಾಗಿದ್ದ, ತಂಜಾವೂರಿನ ಡೆಪ್ಯೂಟಿ ಕಲೆಕ್ಟರ್ ಸಿ.ಟಿ. ಎ. ರಾಯಶಾಸ್ತ್ರಿ ರಾಜವಾಡೆಯವರೊಂದಿಗೆ ನಡೆಯಿತು. ಸರಸ್ವತಿ ಬಾಯಿ ರಾಜವಾಡೆಯವರು ಕನ್ನಡದ ಮಹತ್ವದ ಲೇಖಕಿ ವೈದೇಹಿಯವರಿಗೆ ನೀಡಿದ ಸಂದರ್ಶನದಲ್ಲಿ ತಿಳಿಸಿರುವಂತೆ, "ಉಡುಪಿಯ ಒಬ್ಬರು ಮುಸ್ಲಿಮರ ಮನೆಯಲ್ಲಿ ನನ್ನನ್ನು ದತ್ತಕ್ಕೆ ಕೇಳಿದ್ದರಂತೆ. ಅವರು ಅಬ್ದುಲ್ ಸಾಹೇಬರು ಅಂತ. ಭಾರೀ ದೊಡ್ಡ ಶ್ರೀಮಂತರು. ಬಹಳ ಹೆಸರುವಾಸಿ, ಉದಾರಿಗಳು, ದೈವಭಕ್ತರು, ಪರೋಪಕಾರಿ ಬಹಳ ಬಹಳ ಹಿಂದೊಮ್ಮೆ ಉಡುಪಿಯ ಲಕ್ಷ ದೀಪೋತ್ಸವ ನಡೆಯುವಾಗ ಮಳೆ ಬಂದು ಹಣತೆಯೊಳಗಿನಿಂದ ಎಣ್ಣೆಯೆಲ್ಲಾ ಬಳಿದು ಹೋಗಿ ದೀಪ ಆರಿ ಗೌಜಿಯೆದ್ದಾಗ ಈ ಸಾಹೇಬರು ಸ್ವಂತ ಭಂಡಾರದಿಂದಲೇ ಕರ್ಪೂರ ಒದಗಿಸಿ ಲಕ್ಷ ದೀಪ ನಡೆಯುವಂತೆ ಮಾಡಿದರಂತೆ. ಅವರು ದಿನಾ ಬೆಳಿಗ್ಗೆ ಬಂದು ದೇವಸ್ಥಾನದ ಹೊರಗಿನಿಂದಲೇ ಕೃಷ್ಣ ದೇವರಿಗೆ ನಮಸ್ಕಾರ ಮಾಡಿ ಹೋಗುತ್ತಿದ್ದುದನ್ನು ದೊಡ್ಡವಳಾದ ಮೇಲೆ ನಾನು ನೋಡಿದ್ದೇನೆ. ಅವರು ಸತ್ತಾಗ ಇಲ್ಲಿನ ಕಟ್ಟಾ ಮಡಿವಂತ ಬ್ರಾಹ್ಮಣರೂ ಸಹ ತಮ್ಮ ಬಂಧುವೊಬ್ಬ ಸತ್ತರೆ ಹೇಗೊ ಹಾಗೆ ದುಃಖಿಸಿದರು. ಅವರ ಚಟ್ಟಕ್ಕೆ ಕೈ ಕೊಟ್ಟಿದ್ದರು. ದೇವತಾ ಮನುಷ್ಯರಾಗಿದ್ದ ಅವರಿಗೆ ಮಕ್ಕಳಿರಲಿಲ್ಲ. ನಿರ್ಗತಿಕ ಮಗುವಾಗಿದ್ದರೂ ನನ್ನನ್ನು ದತ್ತಕ್ಕೆ ಕೇಳಿದರು. ಕೇಳಿದರೆ ಈ ನನ್ನ ತಾಯಿ ಕೊಡಬೇಕೆ? ಆಕೆ ಒಪ್ಪಲೇ ಇಲ್ಲ. ಕಷ್ಟ ಬರುವಾಗ, ಅವಳು ಮುಖ ಮೈ ಕಾಣದೆ ನನಗೆ ಹೊಡೆಯುವಾಗ ನಾನು ಗೋಳಿನ ಬದಲು ಅವರ ಮನೆಗೆ ದತ್ತಕ್ಕಾದರೂ ಹೋಗಿದ್ದರೆ ಎಷ್ಟು ಒಳ್ಳೆಯದಿತ್ತು ಅಂತ ಎಣಿಸಿದ್ದು ಎಷ್ಟು ಎಷ್ಟು ಸಲವೋ. ಒಮ್ಮೊಮ್ಮೆ ತಾಯಿಗೆ ಹಾಗೆಯೇ ಎದುರುತ್ತರ ಕೊಡುತ್ತಿದ್ದೆ. ಹಾಗೆ ಹೇಳಿ ಇನ್ನೂ ನಾಲ್ಕು ಪೆಟ್ಟು ಜಾಸ್ತಿ ತಿನ್ನುತ್ತಿದ್ದೆ ಅಷ್ಟೆ." (ವೈದೇಹಿ – 'ದೇಶಕಾಲ', ಅಕ್ಟೋಬರ್-ಡಿಸೆಂಬರ್ ೨೦೦೫)

ಪೇಜಾವರ ಮಠದ ಶ್ರೀ ವಿಶ್ವೇಶತೀರ್ಥ ಶ್ರೀಪಾದರು ಸಂಸ್ಥಾನ ಸ್ವೀಕರಿಸಿದ್ದು ೧೯೩೮ರಲ್ಲಿ ಅವರ ಗುರುಗಳು ಶ್ರೀ ವಿಶ್ವಮಾನ್ಯ ತೀರ್ಥರು. ಶ್ರೀ ವಿಶ್ವಮಾನ್ಯರ ಗುರುಗಳಾದ ಶ್ರೀ ವಿಶ್ವಜ್ಞ ತೀರ್ಥರಿಗೆ ಹಾಜಿ ಅಬ್ದುಲ್ಲಾ ಸಾಹೇಬರ ಬಗ್ಗೆ ತುಂಬ ಅಭಿಮಾನ. ೧೯೦೪ರಲ್ಲಿ ಅವರು ತನ್ನ ಪರ್ಯಾಯ ಆರಂಭಿಸುವ ಮೊದಲೊಂದು ದಿನ ಅಬ್ದುಲ್ಲಾ ಸಾಹೇಬರ ಮನೆಗೆ ಭೇಟಿ ನೀಡಿದರು. 'ನಿಂತ ನೀರಿನ ವಾಸ ಸುತ್ತಲೆಲ್ಲ' ತುಂಬಿದ್ದ ಆಗಿನ ಉಡುಪಿಯ ಮಡಿವಂತರು. ಇದನ್ನು ಖಂಡಿಸಿ, ಸಾಕಷ್ಟು ವಾದ- ವಿವಾದಗಳು ನಡೆದವು. (ಮುರಳೀಧರ ಉಪಾಧ್ಯ, ಎಚ್.ಡುಂಡಿರಾಜ್(ಸಂ.) ೨೦೦೧). ಕಾರ್ಪೊರೇಶನ್ ಬ್ಯಾಂಕಿನ ಶತಮಾನೋತ್ಸವದ ಸಂದರ್ಭದಲ್ಲಿ, ಜನವರಿ ೧೪, ೨೦೦೬ರಂದು ಬ್ಯಾಂಕಿನ ಅಧಿಕಾರಿಗಳ ಸಂಘ, ಬ್ಯಾಂಕಿನ ಸ್ಥಾಪಕ ಅಧ್ಯಕ್ಷ ಹಾಜಿ ಅಬ್ದುಲ್ಲಾ ಸಾಹೇಬರ ಸ್ಮರಣೆಯ ಸಮಾರಂಭವೊಂದನ್ನು ಏರ್ಪಡಿಸಿತ್ತು. ಅಂದಿನ ಕಾರ್ಯಕ್ರಮವನ್ನು ಉದ್ಘಾಟಿಸಿದ ಶ್ರೀ ವಿಶ್ವೇಶತೀರ್ಥರು ಮಠದ ಇತಿಹಾಸದ ಈ ಘಟನೆಯನ್ನು ವಿವರಿಸಿದರು.

* * *

## ಅಧ್ಯಾಯ ૩. ಉಡುಪಿಯಲ್ಲೊಂದು ಸ್ವದೇಶಿ ಬ್ಯಾಂಕ್

ಇಪ್ಪತ್ತನೆಯ ಶತಮಾನದ ಆರಂಭದ ದಶಕದ ಉಡುಪಿಗೆ ಬ್ಯಾಂಕ್ ಒಂದು ಕನಸಾಗಿತ್ತು. ಈಸ್ಟ್ ಇಂಡಿಯಾ ಕಂಪೆನಿ 'ಬ್ಯಾಂಕ್ ಆಫ್ ಮದ್ರಾಸ್'ನ್ನು ಆರಂಭಿಸಿದ್ದು ೧೮೪೩ರಲ್ಲಿ. ಮೂವತ್ತು ಲಕ್ಷ ರೂಪಾಯಿ ಬಂಡವಾಳದೊಂದಿಗೆ ಈ ಬ್ಯಾಂಕ್ ಆರಂಭವಾಯಿತು. ಈ ಬ್ಯಾಂಕ್‌ನ ಮಂಗಳೂರು ಶಾಖೆ ೧೮೬೮ರಲ್ಲಿ ಆರಂಭಗೊಂಡಿತು. ಉಡುಪಿಯ ವ್ಯಾಪಾರಿಗಳು, ಶ್ರೀಮಂತರು ಮಂಗಳೂರಿಗೆ ಹೋಗಿ ಬರುವುದು ಸುಲಭದ ಕೆಲಸವಾಗಿರಲಿಲ್ಲ. 'ಜಟ್ಕಾ' (ಕುದುರೆಗಾಡಿ), ಎತ್ತಿನ ಗಾಡಿಗಳಲ್ಲಿ ಪ್ರಯಾಣಿಸಬೇಕಿತ್ತು. ಕರಾವಳಿ ಮಾರ್ಗದಲ್ಲಿ ನಾಲ್ಕು ಹೊಳೆಗಳನ್ನು ದಾಟಬೇಕಿತ್ತು. ಮದ್ರಾಸ್ ಬ್ಯಾಂಕಿನ ಏಜೆಂಟನೊಬ್ಬ ಹದಿನೈದು ದಿನಕ್ಕೊಮ್ಮೆ ಉಡುಪಿಗೆ ಬಂದು ಹೋಗುತ್ತಿದ್ದ. ಬಡ್ಡಿಯ ದರ ಶೇಕಡ ಹನ್ನೆರಡರಷ್ಟಿತ್ತು. ಆದರೆ ಮದ್ರಾಸ್ ಬ್ಯಾಂಕ್ ಹದಿನೈದರಿಂದ ಹದಿನೆಂಟು ಶೇಕಡ ಬಟ್ಟಿ ವಸೂಲು ಮಾಡುತ್ತಿತ್ತು.

ಮದ್ರಾಸ್ ಬ್ಯಾಂಕ್ ಸಾವಿರಗಟ್ಟಲೆ ಸಾಲ ಪಡೆಯುತ್ತಿದ್ದ ಶ್ರೀಮಂತ ವ್ಯಾಪಾರಿಗಳಿಗೆ ಮಾತ್ರ ಸಾಲ ಕೊಡುತ್ತಿತ್ತು. ಸಣ್ಣ ವ್ಯಾಪಾರಿಗಲು ದುಬಾರ ಬಡ್ಡಿ ವಿಧಿಸುತ್ತಿದ್ದ ಲೇವಾದೇವಿಯವರನ್ನು ಆಶ್ರಯಿಸಬೇಕಾಗಿತ್ತು.

ಕಾರ್ಪೊರೇಶನ್ ಬ್ಯಾಂಕಿನ ಸ್ಥಾಪಕರು 'ಸ್ವದೇಶಿ' ಮಂತ್ರ ಉಚ್ಚರಿಸಿದ್ದರು. ಇದಕ್ಕೆ ಹಿನ್ನೆಲೆಯಾಗಿದ್ದ ಆ ಕಾಲದ ಸ್ವಾತಂತ್ರ್ಯ ಚಳುವಳಿಯನ್ನು ಗಮನಿಸಬೇಕು. ೧೮೮೫ರಲ್ಲಿ ರಾಷ್ಟ್ರೀಯ ಕಾಂಗ್ರೆಸಿನ ಮೊದಲ ಅಧಿವೇಶನ ನಡೆದಿತ್ತು. ಲೋಕಮಾನ್ಯ ಬಾಲ ಗಂಗಾಧರ ತಿಲಕರು ಕ್ರಾಂತಿಕಾರಿಯಾಗಿದ್ದ 'ಕೇಸರಿ' ಪತ್ರಿಕೆಯನ್ನು ೧೮೮೯ರಲ್ಲಿ ಆರಂಭಿಸಿದರು, ಸ್ವದೇಶಿ ಚಳುವಳಿಗೆ, ವಿದೇಶಿ ವಸ್ತುಗಳ ಬಹಿಷ್ಕಾರಕ್ಕೆ ಕರೆ ನೀಡಿದರು. ತಿಲಕರನ್ನು ಬಂಧಿಸಿದ ಬ್ರಿಟಿಷ್ ಸರಕಾರ ಅವರಿಗೆ ಹದಿನೆಂಟು ತಿಂಗಳ ಜೈಲು ಶಿಕ್ಷೆ ವಿಧಿಸಿತು. ೧೮೯೬ರಲ್ಲಿ ಮಹಾರಾಷ್ಟ್ರದ ವಿದ್ಯಾರ್ಥಿಗಳು ಸ್ವದೇಶಿ ಚಳಿವಳಿಯನ್ನು ಮುನ್ನಡೆಸಿದರು. ೧೮೯೯ರಲ್ಲಿ ಗವರ್ನರ್ ಜನರಲ್ ಮತ್ತು ವೈಸ್‌ರಾಯ್ ಆಗಿ ನೇಮಕಗೊಂಡ ಲಾರ್ಡ್ ಕರ್ಜನ್ ೧೯೦೫ರಲ್ಲಿ ಬಂಗಾಳದ ವಿಭಜನೆಯನ್ನು ಘೋಷಿಸಿದ. ಬಂಗಾಳದಲ್ಲಿ ಆರಂಭಗೊಂಡ ವಿಭಜನೆ ವಿರೋಧಿ ಚಳುವಳಿ ಸ್ವದೇಶಿ ಚಳುವಳಿಯಾಗಿ ರೂಪಾಂತರಗೊಂಡಿತು. "ನಮ್ಮ ರಾಷ್ಟ್ರ ಒಂದು ವೃಕ್ಷ. ಇದರ ಮುಖ್ಯ ಭಾಗ ಸ್ವರಾಜ್ಯ. ಕಾಂಡಗಳು ಸ್ವದೇಶಿ ಮತ್ತು ಬಹಿಷ್ಕಾರ." ಎಂದು ತಿಲಕರು 'ಕೇಸರಿ'ಯಲ್ಲಿ ಬರೆದರು. ಆಚಾರ್ಯ ಪಿ.ಸಿ.ರೇ ಅವರು 'ಬೆಂಗಾಲ್ ಕೆಮಿಕಲ್ ಫ್ಯಾಕ್ಟರಿ'ಯನ್ನು ಆರಂಭಿಸಿದರು. ರವೀಂದ್ರನಾಥ ಠಾಗೋರರ 'ಸ್ವದೇಶಿ ಸ್ಟೋರ್' ಕಾರ್ಯಾರಂಭ ಮಾಡಿತು. 'ಟಾಟಾ ಐರನ್ ಅಂಡ್ ಸ್ಟೀಲ್ ಕಂಪೆನಿ'ಗೆ ಅಪಾರ ಜನಬೆಂಬಲ ಸಿಕ್ಕಿತು. ೧೯೦೬ರಲ್ಲಿ ಸ್ಥಾಪನೆಗೊಂಡ ಬಂಗಾಲ್ ನ್ಯಾಷನಲ್ ಕಾಲೇಜಿಗೆ ಪ್ರಿನ್ಸಿಪಾಲರಾಗಿ ಅರವಿಂದ ಘೋಷರ ನೇಮಕವಾಯಿತು. ಬ್ರಿಟಿಷರಿಂದ ನಡೆಯುತ್ತಿದ್ದ ಭಾರತದ ಆರ್ಥಿಕ ಶೋಷಣೆಯ ಕುರಿತು ಸಂಶೋಧನ ಗ್ರಂಥ ಬರೆದಿದ್ದ ದಾದಾಬಾಯ್ ನವರೋಜಿ ಅವರು ೧೯೦೬ರ ಕಲ್ಕತ್ತಾ ಕಾಂಗ್ರೆಸ್ ಅಧಿವೇಶನದಲ್ಲಿ 'ಸ್ವರಾಜ್ಯ ಕಾಂಗ್ರೆಸ್‌ನ ಗುರಿ' ಎಂದು ಘೋಷಿಸಿದರು. ಹೌದು. ಉಡುಪಿಯಲ್ಲಿ ಅದೇ ವರ್ಷ (೧೯೦೬) ಕಾರ್ಪೊರೇಶನ್ ಬ್ಯಾಂಕ್ ಆರಂಭಗೊಂಡಿತು.

ಆ ಕಾಲದ ಉಡುಪಿಯಲ್ಲಿದ್ದ ತಿಲಕರ ಅಭಿಮಾನಿ ಯುವಕವಕೀಲರೊಬ್ಬರು ಸ್ವದೇಶಿ ಬ್ಯಾಂಕೊಂದರ ಸ್ಥಾಪನೆಗೆ ಹಾಜಿ ಅಬ್ದುಲ್ಲಾರಿಗೆ ಪ್ರೇರಣೆ ನೀಡಿರಬಹುದೆಂದು 'ಕಾರ್ಪೊರೇಶನ್ ಬ್ಯಾಂಕ್' ಗ್ರಂಥದ ಲೇಖಕ ಶ್ರೀ ಎಂ.ವಿ. ಕಾಮತ್ ಅಭಿಪ್ರಾಯ ಪಟ್ಟಿದ್ದಾರೆ. ಆ ಯುವ ವಕೀಲರ ಹೆಸರು ಎಂ. ವಿಠಲ ಕಾಮತ್. ಹಾಜಿ ಅಬ್ದುಲ್ಲಾ ಮತ್ತು ಕಾಮತ್ ಗೆಳೆಯರಾಗಿದ್ದರು. ಈ ವಿಠಲ ಕಾಮತರು ಮುಂದೆ ಕಾರ್ಪೊರೇಶನ್ ಬ್ಯಾಂಕ್‌ನ ಮೊದಲ ಕಾನೂನು ಸಲಹೆಗಾರರಾಗಿ ನೇಮಕಗೊಂಡರು.

'ಕೆನರಾ ಬ್ಯಾಂಕಿಂಗ್ ಕಾರ್ಪೊರೇಶನ್ ಉಡುಪಿ ಲಿಮಿಟೆಡ್'ನ್ನು ಸ್ಥಾಪಿಸುವ ಕುರಿತು ಹಾಜಿ ಅಬ್ದುಲ್ಲಾ ಖಾಸಿಮ್ ಸಾಹೇಬರು ೧೯೦೬ರ ಫೆಬ್ರವರಿ ೧೯ರಂದು ನೀಡಿದ ಸಾರ್ವಜನಿಕ ಪ್ರಕಟಣೆ ಹೀಗಿತ್ತು-

"ಫೆ. ೧೧ ಮತ್ತು ೧೮ರಂದು ನಡೆದ ಉಡುಪಿಯ ಮುಖ್ಯ ನಾಗರೀಕರ ಸಭೆಯಲ್ಲಿ ಕೆನರಾ ಬ್ಯಾಂಕಿಂಗ್ ಕಾರ್ಪೊರೇಶನ್ (ಉಡುಪಿ) ಲಿಮಿಟೆಡ್ ಎಂಬ ಸಂಸ್ಥೆಯೊಂದನ್ನು ಸ್ಥಾಪಿಸಲು ನಿರ್ಧರಿಸಲಾಗಿದೆ ಎಂದು ಆ ಸಾರ್ವಜನಿಕರಿಗೆ ಈ ಮೂಲಕ ತಿಳಿಸುತ್ತಿದ್ದೇವೆ.

**ಉದ್ದೇಶ:** ಒಬ್ಬ ಮನೆಕೆಲಸದವನಿಂದ ಆರಂಭಿಸಿ ಪ್ರತಿಯೊಬ್ಬರಲ್ಲೂ ಮಿತವ್ಯಯವನ್ನು ಪ್ರೋತ್ಸಾಹಿಸುವುದು ಈ ಸಂಸ್ಥೆಯ ಉದ್ದೇಶವಾಗಿದೆ. ಪ್ರತಿಯೊಬ್ಬರೂ ತಮ್ಮ ಆದಾಯದಿಂದ ಪ್ರತಿ ತಿಂಗಳೂ ಒಂದು ರೂಪಾಯಿ ಅಥವಾ ಹೆಚ್ಚು ಮೊತ್ತವನ್ನು ಮೂರು ಮುಕ್ಕಾಲು ವರ್ಷದವರೆಗೆ ತಮ್ಮ ಪ್ರಯೋಜನಕ್ಕಾಗಿ, ಕಾರ್ಪೊರೇಶನ್ ನಿಧಿಗೆ ಕೊಡುಗೆಯಾಗಿ ನೀಡಬೇಕು. ಈ ಅವಧಿಯಲ್ಲಿ ಅವರಿಗೆ ಸಣ್ಣ ಮೊತ್ತದ ಸಾಲವನ್ನು, ಬೇರೆ ಕಡೆಗಿಂತ ಕಡಿಮೆ ಬಡ್ಡಿದರಲ್ಲಿ ನೀಡಲಾಗುವುದು. ಮೂರು ಮುಕ್ಕಾಲು ವರ್ಷದ ಅಂತ್ಯದಲ್ಲಿ ಅವರು ಪ್ರತಿಯೊಂದು 'ಶೇರ್'ಗೆ ರೂ. ೫೦ನ್ನು ಪಡೆಯುತ್ತಾರೆ. ಈ ಮೊತ್ತವನ್ನು ಅವರು ದುಬಾರಿ ಬಡ್ಡಿಯಲ್ಲಿ ಸಾಲ ಮಾಡದೆ ಸ್ವತಂತ್ರ ವ್ಯಾಪರ ಮಾಡಲು, ಅಥವಾ ಮದುವೆ ಖರ್ಚಿಗೆ ಬಳಸಬಹುದಾಗಿದೆ.

**ಪ್ರಯೋಜನಗಳು:** ಕಾರ್ಪೊರೇಶನ್ ನಿಧಿಯ ಸದಸ್ಯರು ಪಡೆಯಬಹುದಾದ ಸವಲತ್ತುಗಳ (೧) ಯಾವುದೇ ಭದ್ರತೆಯಿಲ್ಲದೆ ಅವರು ಪಾವತಿ ಮಾಡಿದಷ್ಟು ಮೊತ್ತದ ಸಾಲ. (೨) ಇಬ್ಬರು ಸದಸ್ಯರ ಭದ್ರತೆಯೊಂದಿಗೆ ಹೆಚ್ಚಿಗೆ ಮೊತ್ತದ ಸಾಲ (೩) ಆಭರಣಗಳನ್ನು ಅಡವಾಗಿಟ್ಟು ಇನ್ನೂ ಹೆಚ್ಚಿನ ಮೊತ್ತದ ಸಾಲ. (ಈ ಸಾಲವನ್ನು) ೬.೨೫% ಬಡ್ಡಿದರದಲ್ಲಿ ನೀಡಲಾಗುವುದು, ಪ್ರತಿ ಮೂರು ತಿಂಗಳಿಗೊಮ್ಮೆ ಈ ಸಾಲದ ಕಂತನ್ನು ಮರುಪಾವತಿಸಬೇಕು.) ೪) ಸದಸ್ಯರು 'ಕಾರ್ಪೊರೇಶನ್'ನ ನಿಯಮಗಳ ಪ್ರಕಾರ 'ಶೇರ್'ಗಳನ್ನು ಹೆಚ್ಚಿಸಲು, ಕಡಿಮೆ ಮಾಡಲು, ವರ್ಗಾಯಿಸಲು, ಮಾರಾಟ ಮಾಡಲು ಅಥವಾ ಹಣ ವಾಪಸು ಪಡೆಯಲು ಅನುಮತಿ ನೀಡಲಾಗುವುದು. (೫) ಅವರ ನಿಧನಾನಂತರ 'ಶೇರು'ಗಳನ್ನು ಅವರ ವಾರಸುದಾರರಿಗೆ ವರ್ಗಾಯಿಸಲಾಗುವುದು.


ಮೇಲೆ ಪ್ರಸ್ತಾವಿಸಿದ ಪ್ರಯೋಜನಗಳಲ್ಲದೆ 'ಕಾರ್ಪೊರೇಶನ್' ರೂ. ೫ ಅಥವಾ ಅದಕ್ಕಿಂತ ಹೆಚ್ಚಿನ ಮೊತ್ತವನ್ನು ಠೇವಣಿಯಾಗಿ ಪಡೆದು, ೫ ಶೇಕಡಾ ಬಡ್ಡಿಯೊಂದಿಗೆ ಹಿಂತಿರುಗಿಸುತ್ತದೆ. ನಿಧಿಯ ನಿರ್ವಹಣೆಯನ್ನು ಆಡಳಿತ ಮಂಡಳಿಯವರು ಮಾಡುತ್ತಾರೆ. ಆಡಳಿತ ಮಂಡಳಿಯ ಮೂವರು ನಿಧಿಯ ರಕ್ಷಣೆಗೆ ಜವಾಬ್ದಾರರಾಗಿರುತ್ತಾರೆ.

ಜಾತಿ ಮತ್ತು ಧರ್ಮಗಳನ್ನು ಪರಿಗಣಿಸದೆ ಎಲ್ಲ ವರ್ಗಗಳ ಜನರಲ್ಲೂ ಮಿತವ್ಯಯ ಮತ್ತು ಸಹಕಾರವನ್ನು ಬೆಳೆಸುವುದು ಈ ಸಂಸ್ಥೆಯ ಪ್ರಾಥಮಿಕ ಉದ್ದೇಶವಾಗಿದೆ. ಇದು ಶುದ್ಧ ಮತ್ತು ಸ್ವದೇಶಿ ನಿಲುವಾಗಿರುವುದರಿಂದ ದೇಶಪ್ರೇಮಿ ನಾಗರಿಕರೆಲ್ಲರೂ ಈ ಉದ್ದೇಶ ಈಡೇರಲು ಸಹಕರಿಸಬೇಕು. ನಿಧಿಯ ಭದ್ರತೆಯ ಬಗ್ಗೆ ಭರವಸೆ ನೀಡುವ ನಿಯಮಾವಳಿ ಇದೆ.

ಮಾರ್ಚ್ ೧೬, ೧೯೦೬ರಂದು ವ್ಯವಹಾರ ಆರಂಭವಾಗಲಿದೆ. ಸಂಸ್ಥೆ ನೀಡುವ ಸೌಲಭ್ಯಗಳಲ್ಲಿ ಪಾಲ್ಗೊಳ್ಳಬಯಸುವವರು ಆ ತಾರೀಕಿಗಿಂತ ಮುನ್ನ, ತಾವು ಖರೀದಿಸಬಯಸುವ 'ಶೇರ್'ಗಳ ಸಂಖ್ಯೆಯನ್ನು ಈ ಕೆಳಗೆ ರುಜು ಹಾಕಿದವರಿಗೆ ತಿಳಿಸಬೇಕು ಮತ್ತು ಅವರಿಂದ ಬೇಕಾದ ಯಾವುದೇ ಮಾಹಿತಿಯನ್ನು ಪಡೆಯಬಹುದು."

ಹಾಜಿ ಅಬ್ದುಲ್ಲಾ ಸಾಹೇಬರು ಬಾಡಿಗೆ ರಹಿತವಾಗಿ ನೀಡಿದ್ದ ಅವರ ಸ್ವಂತ ಮನೆಯ ಒಂದು ಕೋಣೆಯಲ್ಲಿ ೧೯೦೬ರ ಮಾರ್ಚ್ ೧೬ರಂದು 'ಕಾರ್ಪೊರೇಶನ್ ಬ್ಯಾಂಕ್' ಕಾರ್ಯಾರಂಭ ಮಾಡಿತು. ಆಗ ಅಬ್ದುಲ್ಲಾ ಸಾಹೇಬರು ಕಾರ್ಪೊರೇಟ ಕನಸುಗಳನ್ನು ಕಾಣುತ್ತಿದ್ದ ಇಪ್ಪತ್ತನಾಲ್ಕು ವರ್ಷದ ಯುವಕ. ಬ್ಯಾಂಕಿನ ಮೊದಲ ಆಡಳಿತ ಮಂಡಳಿ ಹೀಗಿತ್ತು –

೧. ಹಾಜಿ ಅಬ್ದುಲ್ಲಾ ಹಾಜಿ ಖಾಸಿಮ್ ಸಾಹೇಬ್(ಅಧ್ಯಕ್ಷ) – ವರ್ತಕ
೨. ಬಿ. ನಾರಾಯಣ ರಾವ್ – ವಕೀಲರು
೩. ಎನ್. ರಾಘವೇಂದ್ರ ರಾವ್(ಉಪಾಧ್ಯಕ್ಷರು) – ಜಮೀನ್ದಾರರು
೪. ಎಸ್. ಆನಂದರಾವ್(ಕಾರ್ಯದರ್ಶಿ) – ನಿವೃತ್ತ ಸಬ್ ಮಾಜಿಸ್ಟ್ರೇಟ್
೫. ಯು. ರಾಮಕೃಷ್ಣ ಶ್ಯಾನುಭೋಗ(ಖಜಾಂಚಿ) – ವರ್ತಕ
೬. ಎನ್. ಶಿವರಾವ್ – ವಕೀಲರು
೭. ಪಿ.ಕಾಳಿಂಗ ರಾವ್ – ಜಮೀನ್ದಾರ
೮. ಎಸ್. ವೆಂಕಟಸುಬ್ಬ ರಾವ್ – ಜಮೀನ್ದಾರ
೯. ಅಂಡಾರ್ ಸೈಯದ್ ಅಬ್ಬಾಸ್ ಸಾಹೇಬ್ – ಜಮೀನ್ದಾರ
೧೦. ಬಿ. ವ್ಯಾಸಚಾರ್ಯ – ಜಮೀನ್ದಾರ
೧೧. ಬಿ. ಸುಬ್ಬಯ್ಯ ಶೆಟ್ಟಿ -ಜಮೀನ್ದಾರ
೧೨. ಕೇಶವ ಉಪೇಂದ್ರ ಕುಡ್ವ – ವರ್ತಕ



ಅಬ್ದುಲ್ಲಾ ಸಾಹೇಬರ ಸಹಿ

೧೯೦೬ರ ಮೇ ೧೨ರಂದು ನೋಂದಣಿಗಾಗಿ ಕಳುಹಿಸಿದ ಬ್ಯಾಂಕಿನ ಮೆಮೋರಾಂಡಮ್ ಆಫ್ ಎಸೋಸಿಯೇಷನ್'ಗೆ ರುಜು ಹಾಕಿದವರು –

೧. ಹಾಜಿ ಅಬ್ದುಲ್ಲಾ ಹಾಜಿ ಖಾಸಿಮ್ ಸಾಹೇಬ್ (ಅಧ್ಯಕ್ಷರು) – ವರ್ತಕ, ಉಡುಪಿ

೨. ಬಿ. ನಾರಾಯಣ ರಾವ್ (ವಕೀಲ, ಉಡುಪಿ)

೩. ಯು. ರಾಮಕೃಷ್ಣ ಶಾನುಭೋಗ (ವರ್ತಕ, ಉಡುಪಿ)

೪. ಎನ್. ಶಿವರಾವ್ (ವಕೀಲರು, ಉಡುಪಿ)

೫. ಎಸ್. ಆನಂದರಾವ್ (ನಿವೃತ್ತ ಸಬ್ ಮ್ಯಾಜಿಸ್ಟ್ರೇಟ್, ಉಡುಪಿ)

೬. ಕೆ.ಬಿ. ಅನಂತಯ್ಯ (ಸುಪರ್‌ವೈಸರ್ ಆಫ್ ಸ್ಕೂಲ್ಸ್, ಉಡುಪಿ)

೭. ಎನ್. ಆನಂದ ರಾವ್ (ಜಮೀನ್ದಾರರು, ಉಡುಪಿ)

೮. ಬಿ.ವ್ಯಾಸಾಚಾರ್ಯ (ಏಜೆಂಟ್, ಅದಮಾರು ಮಠ, ಉಡುಪಿ)

೯. ಕೇಶವ ಉಪೇಂದ್ರ ಕುಡ್ವ (ವ್ಯಾಪಾರಿ, ಉಡುಪಿ)

೧೦. ಎಸ್. ವೆಂಕಟಸುಬ್ಬಾ ಭಟ್ (ಏಜೆಂಟ್, ಕೃಷ್ಣಾಪುರ ಮಠ, ಉಡುಪಿ)

ಉಡುಪಿಯ ಅಷ್ಟಮಠಗಳಿಗೂ ಹಾಜಿ ಅಬ್ದುಲ್ಲಾ ಸಾಹೇಬರಿಗೂ ಪ್ರೀತಿ – ವಿಶ್ವಾಸ – ನಂಬಿಕೆಗಳ ಸಂಬಂಧವಿತ್ತು. ಈ ಬಗ್ಗೆ ಉಡುಪಿಯಲ್ಲಿ ಹಲವಾರು ದಂತಕತೆಗಳಿವೆ. ಕಾರ್ಪೊರೇಶನ್ ಬ್ಯಾಂಕಿನ 'ಮೆಮೊರಾಂಡಮ್ ಆಫ್ ಎಸೋಶಿಯೇಷನ್'ಗೆ ಸಹಿ ಹಾಕಿದವರಲ್ಲಿ ಉಡುಪಿಯ ಅದಮಾರು ಮಠ ಹಾಗೂ ಕೃಷ್ಣಾಪುರ ಮಠದ ಏಜೆಂಟರು (ದಿವಾನರು) ಇದ್ದರು ಎಂಬುದು ಗಮನಾರ್ಹ.

ಕಾರ್ಪೊರೇಶನ್ ಬ್ಯಾಂಕಿನ 'ಬೆಳ್ಳಿ ಹಬ್ಬದ ಸಂಚಿಕೆ'(೧೯೩೧) ಯಲ್ಲಿ ದಾಖಲಾಗಿರುವಂತೆ, "ಕಾರ್ಪೊರೇಶನ್ ಬ್ಯಾಂಕು ಆರಂಭದಿಂದಲೂ ಜಾತ್ಯತೀತವಾಗಿತ್ತು. ಜಾತಿ ಧರ್ಮಗಳನ್ನು ಪರಿಗಣಿಸದೆ ಎಲ್ಲ ವರ್ಗಗಳ ಜನರಿಗೂ ಶೇರುಗಳನ್ನು ನೀಡಲಾಯಿತು.

ಉಡುಪಿಯಲ್ಲಿ ೧೬-೩-೧೩೦೬ ರಂದು ಈ ವಿನೂತನ ಸಂಸ್ಥೆ ಕಾರ್ಯಾರಂಭ ಮಾಡಿತು. ಈ ಸಂಸ್ಥೆಗೆ ನಾಗರಿಕ ಪ್ರತಿಕ್ರಿಯೆ ಉತ್ತೇಜನಕಾರಿಯಾಗಿತ್ತು. ವ್ಯವಹಾರ ಆರಂಭವಾಗಿ ಒಂಬತ್ತು ತಿಂಗಳೊಳಗೆ ೨೫೮ ಮಂದಿ ಶೇರುದಾರರು ೧೦೧೭ ಶೇರುಗಳನ್ನು ಕೊಂಡರು. ಈ ಬ್ಯಾಂಕು ಎಚ್ಚರದಿಂದ ಆಡಂಬರವಿಲ್ಲದೆ ಕಾರ್ಯಾರಂಭ ಮಾಡಿತು. ಬ್ಯಾಂಕಿನ ಅಧ್ಯಕ್ಷ ಶ್ರೀ ಅಬ್ದುಲ್ಲಾ ಹಾಜಿ ಕಾಸಿಮ್ ಸಾಹೇಬರು ಬಾಡಿಗೆ ಇಲ್ಲದೆ ನೀಡಿದ್ದ ಒಂದು ಕೋಣೆಯಲ್ಲಿ ಬ್ಯಾಂಕಿನ ಕಛೇರಿ ಇತ್ತು. ಆರಂಭದಲ್ಲಿ ಈ ಸಂಸ್ಥೆ ಒಂದು 'ನಿಧಿ'ಯ ರೂಪದಲ್ಲಿ ವ್ಯವಹಾರ ಮಾಡಿತು. ಪ್ರತಿ ತಿಂಗಳೂ ಒಂದು ರೂಪಾಯಿಯಂತೆ ೪೫ ತಿಂಗಳು ಪಾವತಿ ಮಾಡಿದವರಿಗೆ ೪೬ನೆಯ ತಿಂಗಳ ಅಂತ್ಯದಲ್ಲಿ ರೂ. ೫೦/- ಸಿಗುತ್ತಿತ್ತು. ಈ ರೀತಿ ಬ್ಯಾಂಕಿನ ನಿಧಿಯ ಸದಸ್ಯರಾದವರು ಶೇರುದಾರರು ಪಡೆಯುವ ಎಲ್ಲ ಸೌಲಭ್ಯಗಳನ್ನು ಪಡೆದರು."

ಮಾರ್ಚ್ ೧೮, ೧೯೦೬ರಂದು 'ಕಾರ್ಪೊರೇಶನ್ ನಿಧಿ'ಯ ಸದಸ್ಯರಾದ ಮೊದಲಿಗರಲ್ಲಿ ವಿ.ಲಕ್ಷ್ಮಣರಾವ್ ಎಂಬ ಪ್ರಾಥಮಿಕ ಶಾಲಾ ಮುಖ್ಯೋಪಾಧ್ಯಾಯರಿದ್ದರು. ಬ್ಯಾಂಕು ಮೊದಲು ಸಾಲ ನೀಡಿದ್ದು ಜನಾಬ್ ಶಿಡಿ ಬಾಪು ಸಾಹೇಬರಿಗೆ. ಅವರು ೧೯೦೬ ಏಪ್ರಿಲ್ ೫ ರಂದು ನೂರು ರೂ. ಸಾಲ ಪಡೆದರು. ೧೯೦೬, ಅಕ್ಟೋಬರ್ ೧೩ರಂದು ಬಿ. ನಾರಾಯಣರಾಯರು ನೀಡಿದ ನೂರು ರೂಪಾಯಿಗಳು ಬ್ಯಾಂಕಿಗೆ ಬಂದ ಮೊದಲ ಠೇವಣಿಯಾಗಿತ್ತು.

ಕಾರ್ಪೊರೇಶನ್ ಬ್ಯಾಂಕ್ ಸ್ಥಾಪನೆಯಾಗಿ ಎರಡು ವರ್ಷಗಳಲ್ಲಿ – ೧೯೦೮ರಲ್ಲಿ ಬ್ಯಾಂಕಿನಲ್ಲಿ ಶೇರುದಾರರ ಜಾತಿವಾರು ವರ್ಗೀಕರಣ ಆ ಕಾಲ ಆರ್ಥಿಕ ಸ್ಥಿತಿಗತಿ, ಹಾಗೂ ಸಾಮಾಜಿಕ ಅಧ್ಯಯನ ದೃಷ್ಟಿಯಿಂದ ಕುತೂಹಲಕಾರಿಯಾಗಿದೆ – ೧. ಸಾರಸ್ವತರು (೮೫೦ ಮಂದಿ), ೨. ಗೌಡ ಸಾರಸ್ವತರು (೩೭೬ ಮಂದಿ), ೩. ಶಿವಳ್ಳಿ ಬ್ರಾಹ್ಮಣರು (೨೯೯), ೪. ಕೊಂಕಣಿಗರು (೧೦೨) ೫. ದೇವಾಂಗ (೮೭), ೬.ಚಿನ್ನದ ಕೆಲಸದವರು ೨೬, ೭. ನಾಡವರು (೧೪೫), ೮. ಬಿಲ್ಲವರು – ೨೯, ೯. ಕೋಟಿ ಬ್ರಾಹ್ಮಣರು (೭೯), ೧೦. ಕರ್ನಾಟಕ (೨೦), ೧೧. ಜೈನ (೫೧), ೧೨. ವೈಶ್ಯ (೭೭), ೧೩. ಮುಸ್ಲಿಮರು (೨೫೧), ೧೪. ಕೆಥೊಲಿಕರು (೬೬), ೧೫. ಪ್ರೊಟೆಸ್ಟೆಂಟರು (೩೩), ೧೬. ಫರಾರಿ (೦೩), ೧೭. ವಾನಿ (೩೨), ೧೮.ದರ್ಜಿ (೬), ೧೯. ರಾಜಾಪುರಿ (೮), ೨೦. ಬಳೆಗಾರ (೧೧), ೨೧. ಕಂದಾವರ (೩೦), ಇಲ್ಲಿರುವ ದೇವಾಂಗ, ಬಿಲ್ಲವ, ಅಕ್ಕಸಾಲಿಗ, ದರ್ಜಿ, ರಾಜಾಪುರಿ, ಬಳೆಗಾರ ಹಾಗೂ ಮುಸ್ಲಿಮರ ಸಂಖ್ಯೆ ಸಾಮಾಜಿಕ ನ್ಯಾಯದ ದೃಷ್ಟಿಯಿಂದ ಅಭಿನಂದನಾರ್ಹ.

ಕಾರ್ಪೊರೇಶನ್ ಬ್ಯಾಂಕು ನಿಧಾನವಾಗಿ 'ಒಂದು ಹೆಜ್ಜೆ ಮುಂದೆ ಇಷ್ಟು ಸಾಕು ನನಗೆ ಎಂಬ ಗಾಂಧೀಜಿಯ ನಂಬಿಕೆಯಂತೆ ಎಚ್ಚರದಿಂದ ಹೆಜ್ಜೆ ಇಡುತ್ತಾ ಮುಂದೆ ಸಾಗಿತು. ೧೯೭೨ರಲ್ಲಿ ಬ್ಯಾಂಕು ೨೦೦೦ ಶೇರುಗಳನ್ನು ವಿತರಿಸಹೊರಟಾಗ ೨೫೦೦ ಶೇರುಗಳಿಗೆ ಬೇಡಿಕೆ ಬಂತು. ೧೯೨೯ ರಿಂದ ಬ್ಯಾಂಕು ತನ್ನ ನೌಕರಿಗೆ 'ಪ್ರೊವಿಡೆಂಟ್ ಫಂಡ್' ನೀಡಲಾರಂಭಿಸಿತು. ೧೯೦೬ ರಿಂದ ೧೯೦೯ರ ವರೆಗೆ ಬ್ಯಾಂಕಿನ ಅಧ್ಯಕ್ಷ ಹಾಜಿ ಅಬ್ದುಲ್ಲಾ ಅವರ ಮನೆಯ ಒಂದು ಕೋಣೆಯಲ್ಲಿದ್ದ ಕಾರ್ಪೊರೇಶನ್ ಬ್ಯಾಂಕ್‌ನ ಕಛೇರಿ ೧೯೦೯ರಿಂದ ೧೯೧೪ರವರೆಗೆ ಬಿ. ನಾರಾಯಣರಾಯರ ಮನೆಯ ಉಪ್ಪರಿಗೆಯಲ್ಲಿತ್ತು. ೧೯೧೪ರಲ್ಲಿ ಬ್ಯಾಂಕ್ ಸ್ವಂತ ಕಾರ್ಯಾಲಯಕ್ಕೆ ಸ್ಥಳಾಂತರಗೊಂಡಿತು.

ಕಾರ್ಪೊರೇಶನ್ ಬ್ಯಾಂಕ್ ಆರಂಭಗೊಂಡು ಹದಿನೇಳು ವರ್ಷಗಳ ಅನಂತರ ಮೇ ೧೮, ೧೯೨೩ರಂದು ಅದರ ಕುಂದಾಪುರ ಶಾಖೆ ಆರಂಭಗೊಂಡಿತು. ಅದು ಕರಾವಳಿಯ ಯಾವುದೇ ಬ್ಯಾಂಕಿನ ಮೊದಲ ಶಾಖೆಯಾಗಿತ್ತು. ಬ್ಯಾಂಕಿನ ಕುಂದಾಪುರ ಶಾಖೆಯ ಏಜೆಂಟ್‌ನ ಹುದ್ದೆಗೆ ನೀಡಿದ ಜಾಹೀರಾತಿನಲ್ಲಿ ರೂ.೫೦ ಸಂಬಳ ನೀಡುವುದಾಗಿ, ಎರಡು ಸಾವಿರ ರೂಪಾಯಿ ಭದ್ರತಾ ಠೇವಣಿ ನೀಡಬೇಕೆಂದು ಪ್ರಕಟಿಸಲಾಗಿತ್ತು. ಬ್ಯಾಂಕಿನ ಮಂಗಳೂರು ಶಾಖೆ ಆರಂಭಗೊಂಡದ್ದು ೧೯೨೬ ಆಗಸ್ಟ್ ೧೩ರಂದು. ಈ ಶಾಖೆ ೧೯೩೧ರಲ್ಲಿ ಸ್ವಂತ ಕಟ್ಟಡಕ್ಕೆ ಸ್ಥಳಾಂತರಗೊಂಡಿತು. ೧೯೩೨ರಲ್ಲಿ ಮದ್ರಾಸ್‌ನಲ್ಲಿ ಹಾಗೂ ಮಂಗಳೂರು ಬಂದರ್‌ನಲ್ಲಿ ಕಾರ್ಪೊರೇಶನ್ ಬ್ಯಾಂಕಿನ ಎರಡು ಶಾಖೆಗಳು ಆರಂಭಗೊಂಡಿವು. ಕೊಡಗಿನವರ ಬೇಡಿಕೆಯ ಮೇರೆಗೆ ಬ್ಯಾಂಕಿನ ಮಡಿಕೇರಿ ಶಾಖೆ ಆರಂಭಗೊಂಡದ್ದು ೧೯೩೪ರಲ್ಲಿ.

ಮಂಗಳೂರಿನ ರಾವ್ ಬಹದ್ದೂರ್ ಯು. ಆನಂದರಾವ್ ಕಾರ್ಪೊರೇಶನ್ ಬ್ಯಾಂಕಿನ ಪ್ರಥಮ ಕಾರ್ಯದರ್ಶಿಯಾಗಿ ನೇಮಕಗೊಂಡು, ೧೯೧೮ರವರೆಗೆ ಹನ್ನೆರಡು ವರ್ಷಗಳ ಕಾಲ ಸೇವೆ ಸಲ್ಲಿಸಿದರು. 'ಬ್ಯಾಂಕ್ ಆಫ್ ಮದ್ರಾಸ್'ನ ಮಂಗಳೂರು ಶಾಖೆಯಲ್ಲಿ ಅಧಿಕಾರಿಯಾಗಿದ್ದ ಅವರು ನಿವೃತ್ತ ಸಬ್-ಮ್ಯಾಜಿಸ್ಟ್ರೇಟ್ ಆಗಿದ್ದರು.

ಬೈಂದೂರು ನಾರಾಯಣರಾಯರು ಬ್ಯಾಂಕಿನ ಆರಂಭಕಾಲದಿಂದ ಹದಿನೈದು ವರ್ಷಗಳ ಕಾಲ ನಿರ್ದೇಶಕರಾಗಿದ್ದರು. ೧೯೧೨ರಲ್ಲಿ ಅಬ್ದುಲ್ಲಾ ಸಾಹೇಬರು ಹಜ್ ಯಾತ್ರೆಗೆ ಹೋದಾಗ ಬೈಂದೂರು ನಾರಾಯಣರಾಯರು ಪ್ರಭಾರ ಅಧ್ಯಕ್ಷರಾಗಿದ್ದರು.

ಆ ಕಾಲದಲ್ಲಿ ಬ್ಯಾಂಕಿಗೆ ಲೆಕ್ಕ ಪರಿಶೋಧಕರನ್ನು ನೇಮಿಸುವುದು ಕಷ್ಟದ ಕೆಲಸವಾಗಿತ್ತು. ಕಾರ್ಪೊರೇಶನ್ ಬ್ಯಾಂಕಿನ ಆರಂಭದ ವರ್ಷಗಳ ಲೆಕ್ಕ ಪರಿಶೋಧಕರಾಗಿದ್ದವರು – ಡಾ. ಯು. ಆನಂದರಾವ್, ಮಂಗಳೂರು -(೧೯೦೬-೦೮), ಎ.ಎಮ್. ಫೆರ್ನಾಂಡಿಸ್ ಉಡುಪಿ

(೧೯೦೯-೧೦), ೩. ಯು. ಶಿವ ರಾವ್, ವಕೀಲರು, ಉಡುಪಿ (೧೯೧೧). ೪. ಕೆ.ವಿ. ಗೋವಿಂದನ್ ನಾಯರ್, ಜಿಲ್ಲಾಧಿಕಾರಿ, ಮಂಗಳೂರು (೧೯೧೨-೧೫). ೫. ಎಂ.ಎನ್. ಕೃಷ್ಣರಾವ್ ಮಂಗಳೂರು(೧೯೧೬-೨೪). ೬. ಪಿ.ವೆಂಕಟಾದ್ರಿ ಅಯ್ಯರ್, ಜಿಲ್ಲಾಧಿಕಾರಿ, ಪಾಲ್ಘಾಟ್ (೧೯೨೫), ೭. ಕಲ್ಮಾಡಿ ಮತ್ತು ಏಕಾಂಬರಮ್, ಮದ್ರಾಸು (೧೯೨೬-೩೦)

ಉಡುಪಿಯಲ್ಲಿ ಕಾರ್ಪೊರೇಶನ್ ಬ್ಯಾಂಕ್ ಸ್ಥಾಪನೆಯಾದ ಮೂವತ್ತ ಮೂರು ದಿನಗಳ ಅನಂತರ ಮಂಗಳೂರಿನಲ್ಲಿ ಕೆನರಾ ಹಿಂದೂ ಪರ್ಮನೆಂಟ್ ಫಂಡ್‌ನ ಉದಯವಾಯಿತು. (೧೯೦೬).; ಮುಂದೆ ಇದು ಕೆನರಾ ಬ್ಯಾಂಕ್ ಎಂಬ ಹೆಸರು ಪಡೆಯಿತು. ೧೯೧೪-೧೮ರ ಮೊದಲ ಮಹಾಯುದ್ಧದ ಕಷ್ಟದ ದಿನಗಳು ಮುಗಿದ ಮೇಲೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹಲವು ಬ್ಯಾಂಕುಗಳು ಸ್ಥಾಪನೆಗೊಂಡವು (೧) ಕೆನರಾ ಎಂಟರ್ ಪ್ರೈಸಸ್(ಲಿ.) ಪುತ್ತೂರು, ೨) ಪಾಂಗಾಳ ನಾಯಕ್ ಬ್ಯಾಂಕ್ ಲಿ. ಉಡುಪಿ (೧೯೨೦) ೩) ಜಯಲಕ್ಷ್ಮೀ ಬ್ಯಾಂಕ್ ಲಿ. ಮಂಗಳೂರು (೧೯೨೩) ೪) ಕರ್ನಾಟಕ ಬ್ಯಾಂಕ್ ಲಿ., ಮಂಗಳೂರು (೧೯೨೪) ೫) ಉಡುಪಿ ಬ್ಯಾಂಕ್ ಲಿ. ಉಡುಪಿ (೧೯೨೫) ೬) ಕೆನರಾ ಇಂಡಸ್ಟ್ರಿಯಲ್ ಆಂಡ್ ಬ್ಯಾಂಕಿಂಗ್ ಸಿಂಡಿಕೇಟ್ ಲಿ. ಉಡುಪಿ (೧೯೨೫) ೭) ಕೆಥೋಲಿಕ್ ಬ್ಯಾಂಕ್ (ಲಿ.) ಮಂಗಳೂರು (೧೯೨೫), ೮) ಮುಲ್ಕಿ ಬ್ಯಾಂಕ್, ಮುಲ್ಕಿ (೧೯೨೯), ೯) ವಿಜಯಾ ಬ್ಯಾಂಕು, ಮಂಗಳೂರು (೧೯೩೧) ೧೦) ಬ್ಯಾಂಕ್ ಆಫ್ ಮಂಗಳೂರು, (೧೯೩೧), ೧೧) ನಗರ್‌ಕರ್ಸ್ ಬ್ಯಾಂಕ್, ಮಂಗಳೂರು (೧೯೩೪), ೧೨) ಕುಂದಾಪುರ ಬ್ಯಾಂಕ್ (೧೯೩೨), ೧೩) ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬ್ಯಾಂಕು – ಕುಂದಾಪುರ, (೧೯೩೪), ೧೪) ತುಳುನಾಡು ಬ್ಯಾಂಕ್ ಆಫ್ ಸಪ್ಲೈ ಏಜೆನ್ಸಿ, ಉಡುಪಿ(೧೯೩೩), ೧೫) ಪೈ – ಮನಿ ಬ್ಯಾಂಕ್, ಮಂಗಳೂರು (೧೯೩೪), ೧೬) ಅತ್ತೂರ ಎಂಡ್ ಜವಾಹರ ಬ್ಯಾಂಕ್ ಲಿಮಿಟೆಡ್, ಮಂಗಳೂರು, (೧೯೩೩). ೧೭) ಸದರ್ನ್ ಇಂಡಿಯಾ ಅಪೆಕ್ಸ್ ಬ್ಯಾಂಕ್ ಲಿ. ಉಡುಪಿ(೧೯೪೩), ೧೮) ಮಹಾರಾಷ್ಟ್ರ ಅಪೆಕ್ಸ್ ಲಿ. (೧೯೪೩) ೧೯) ಪ್ರಭಾಕರ ಬ್ಯಾಂಕ್ ಲಿ. ಮೂಡುಬಿದ್ರಿ (೧೯೪೫).

ಸಹಕಾರಿ ಕಾನೂನು ಅನುಷ್ಠಾನಗೊಂಡದ್ದು ೧೯೦೪ರಲ್ಲಿ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಹಕಾರಿ ಚಳುವಳಿಯನ್ನು ಆರಂಭಿಸಿದವರು ಮೊಳಹಳ್ಳ ಶಿವರಾಯರು. ಪುತ್ತೂರಿನ ಪ್ರಸಿದ್ಧ ವಕೀಲರಾಗಿದ್ದ ಮೊಳಹಳ್ಳಿ ಶಿವರಾಯರು ೧೯೦೯ರಲ್ಲಿ ಪುತ್ತೂರಿನಲ್ಲಿ ಪುತ್ತೂರು ಸಹಕಾರಿ ರೂರಲ್ ಕ್ರೆಡಿಟ್ ಸೊಸೈಟಿ' ಎಂಬ ಸಹಕಾರಿ ಸಂಘವನ್ನು ಸ್ಥಾಪಿಸಿದರು. ಹಾಜಿ ಅಬ್ದುಲ್ಲಾ ಸಾಹೇಬರಿಗೆ ಸಹಕಾರಿ ಚಳುವಳಿಯಲ್ಲೂ ವಿಶೇಷ ಆಸಕ್ತಿ ಇತ್ತು. ಅವರ ಪ್ರೇರಣೆಯಿಂದ ಉಡುಪಿ ಕೋ – ಅಪರೇಟಿವ್ ಸೊಸೈಟಿ ೧೯೧೨ರಲ್ಲಿ ಆರಂಭಗೊಂಡಿತು. ಈಗ ಉಡುಪಿ ಕೋ – ಅಪರೇಟಿವ್ ಟೌನ್ ಬ್ಯಾಂಕ್ ಆಗಿರುವ ಈ ಸಂಸ್ಥೆ ಹಲವು ಶಾಖೆಗಳನ್ನು ಹೊಂದಿದ್ದು, ಆರ್ಥಿಕವಾಗಿ ಸುಭದ್ರ ಸ್ಥಿತಿಯಲ್ಲಿದೆ ಈ ಬ್ಯಾಂಕ್ ತನ್ನ ಸ್ಥಾಪಕ ಅಧ್ಯಕ್ಷರನ್ನು ಮರೆತಿಲ್ಲ, ಸೂಕ್ತ ಗೌರವ ಸಲ್ಲಿಸುತ್ತಿದೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬಸ್‌ಸಂಚಾರ ಆರಂಭಗೊಂಡದ್ದು ೧೯೧೪ರಲ್ಲಿ. ಆ ವರ್ಷ ನೆಲ್ಲಿಕಾಯಿ ವೆಂಕಟರಾವ್ ಹಾಗೂ ಬೋಳಾರ ವಿಠಲರಾಯರು ಕೆನರಾ ಪಬ್ಲಿಕ್ ಕನ್ವೇಯನ್ಸ್(ಸಿ.ಪಿ.ಸಿ.) ಕಂಪೆನಿ ಲಿಮಿಟೆಡ್‌ನ್ನು ಸ್ಥಾಪಿಸಿದರು. ಉಡುಪಿ – ಕಾರ್ಕಳ ಮೂಡುಬಿದ್ರೆ ಗುರುಪುರ ಮಾರ್ಗವಾಗಿ ಮಂಗಳೂರು ತಲುಪಲು ಐದು ಗಂಟೆ ಬೇಕಾಗುತ್ತಿತ್ತು. ಕಾರ್ಪೊರೇಶನ್ ಬ್ಯಾಂಕಿನ ಸ್ಥಾಪಕರು, ನಿರ್ದೇಶಕರು, ನೌಕರರು ತಮ್ಮ ವ್ಯವಹಾರದ ಸಂಚಾರಕ್ಕಾಗಿ ಎಷ್ಟೆಲ್ಲ ಕಷ್ಟಪಟ್ಟಿರಬಹುದೆಂದು ನಾವು ಕಲ್ಪಿಸಿಕೊಳ್ಳಬಹುದು.

ಹಾಜಿ ಅಬ್ದುಲ್ಲಾ ಸಾಹೇಬರು ೧೯೨೯ರಲ್ಲಿ ಕಾರ್ಪೊರೇಶನ್ ಬ್ಯಾಂಕಿನ ಅಧ್ಯಕ್ಷತೆಗೆ ರಾಜೀನಾಮೆ ನೀಡಿದರು. ಬ್ಯಾಂಕಿನ ಬೆಳ್ಳಿಹಬ್ಬದ ಸಂಚಿಕೆಯಲ್ಲಿ ದಾಖಲಾಗಿರುವಂತೆ, "ವಿಧಾನಸಭೆ ಮತ್ತು ಹಜ್ ಸಮಿತಿಗಳಿಗೆ ಸಂಬಂಧವನ್ನು ಕೆಲಸಗಳ ಒತ್ತಡದಿಂದ ಅವರು ೧೯೨೯ರಲ್ಲಿ ರಾಜೀನಾಮೆ ನೀಡಿದರು." ಅವರು ಇಪ್ಪತ್ತಮೂರು ವರ್ಷಗಳ ಹಿಂದೆ ನೆಟ್ಟ ಸಸಿ – ಕಾರ್ಪೊರೇಶನ್ ಬ್ಯಾಂಕ್ – ಕಲ್ಪವೃಕ್ಷವಾಗಿ ಬೆಳೆದು ನಿಂತು ಕಂಗೊಳಿಸುತ್ತಿತ್ತು.

ಅಬ್ದುಲ್ಲಾ ಸಾಹೇಬರು ರಾಜೀನಾಮೆ ನೀಡಿದ ಮೇಲೆ ೧೯೨೯ರಿಂದ ೧೯೩೪ರವರೆಗೆ ಕಾರ್ಪೊರೇಶನ್ ಬ್ಯಾಂಕಿನ ಅಧ್ಯಕ್ಷರಾಗಿದ್ದವರು, ಉಡುಪಿಯ ವಕೀಲ ಹಾರಾಡಿ ಕೇಶವ ಪೈ. ಕೇಶವ ಪೈ ಅವರು ಅನಾರೋಗ್ಯದಿಂದ ತನ್ನ ೪೫ನೇ ವಯಸ್ಸಿನಲ್ಲಿ ೧೯೩೪ರಲ್ಲಿ ತೀರಿಕೊಂಡರು.

ಮುಂದೆ ೧೯೩೫ರಿಂದ ೧೯೫೯ರ ಕಾರ್ಪೊರೇಶನ್ ಬ್ಯಾಂಕಿನ ಅಧ್ಯಕ್ಷರಾಗಿದ್ದವರು. ಡಾ| ಯು. ಸುಂದರ ರಾಮ್ ಪೈ. ಇವರ ತಂದೆ ಯು. ಶೇಷಗಿರಿ ಪೈ ಅವರು ೧೯೧೫ರಿಂದ ೧೯೨೨ರವರೆಗೆ ಬ್ಯಾಂಕಿನ ನಿರ್ದೇಶಕರಾಗಿ, ೧೯೨೩ರಿಂದ ೧೯೨೯ರ ವರೆಗೆ ಉಪಾಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದರು.

* * *

## ಅಧ್ಯಾಯ ೪: ‘ಉಳ್ಳಯ್ಯಾ ದಯೆಗೊಳ್ಳಯ್ಯಾ!’

ಹಾಜಿ ಅಬ್ದುಲ್ಲಾ ಸಾಹೇಬರು ಬ್ರಿಟಿಷರ ಆಡಳಿತದ ಕಾಲದ ಲೋಕಲ್ ಬೋರ್ಡ್, ತಾಲೂಕು ಬೋರ್ಡ್ ಮತ್ತು ವಿಧಾನಸಭೆಯಲ್ಲಿ ಜನಪ್ರತಿನಿಧಿಯಾಗಿ ಕೆಲಸ ಮಾಡಿದರು. ೧೯೦೪ರಲ್ಲಿ ಅವರು ಉಡುಪಿ ಲೋಕಲ್ ಬೋರ್ಡ್‌ನ ಸದಸ್ಯರಾದರು.

ಮಂಗಳೂರಿನ ದಲಿತರ ಶೈಕ್ಷಣಿಕ, ಸಾಮಾಜಿಕ ಕೆಲಸಗಳನ್ನು ಆರಂಭಿಸಿದವರು ಕುದ್ಮಲ್‌ರಂಗರಾಯರು (೧೮೫೯-೧೯೨೮). ಕಾಸರಗೋಡು ತಾಲೂಕಿನ ಕುದ್ಮಲ್‌ನಿಂದ ಹೊಟ್ಟೆಪಾಡಿಗಾಗಿ ಮಂಗಳೂರಿಗೆ ಬಂದು ವಕೀಲರಾಗಿದ್ದ ರಂಗರಾಯರು ವಕೀಲ ವೃತ್ತಿ ತ್ಯಜಿಸಿ ದಲಿತರ ಸೇವೆ ಆರಂಭಿಸಿದರು. ೧೮೯೨ರಲ್ಲಿ ಮಂಗಳೂರಿನ ಉರ್ವದ ಹತ್ತಿರದ ಚಿಲಿಂಬಿಯಲ್ಲಿ, ಮುಳಿಹುಲ್ಲಿನ ಮನೆಯೊಂದರಲ್ಲಿ ಕುದ್ಮಲ್ ಅವರ ದಲಿತರ ಶಾಲೆ ಆರಂಭವಾಯಿತು. ಸವರ್ಣೀಯರ ವಿರೋಧವನ್ನು, ಬಹಿಷ್ಕಾರವನ್ನು ಲೆಕ್ಕಿಸದೆ ಕುದ್ಮಲ್ ರಂಗರಾಯರು ಕಂಕನಾಡಿ, ಬೋಳೂರುಗಳಲ್ಲಿ ದಲಿತರಿಗಾಗಿ ಶಾಲೆಗಳನ್ನು ಸ್ಥಾಪಿಸಿದರು. ಮಂಗಳೂರಿನ ಶೇಡಿಗುಡ್ಡೆಯಲ್ಲಿ ದಲಿತರ ಶಾಲೆ, ವೃತ್ತಿಪರ ಶಿಕ್ಷಣ ತರಬೇತಿ ಶಾಲೆ, ದಲಿತರ ಹೆಣ್ಣು ಮಕ್ಕಳ ವಿದ್ಯಾರ್ಥಿನಿ ನಿಲಯ ಆರಂಭಿಸಿದ ರಂಗರಾಯರು ಅಲೆಮಾರಿಗಳಾಗಿದ್ದ ಹತ್ತು ಕೊರಗರ ಕುಟುಂಬಗಳಿಗೆ ಆಶ್ರಯ ನೀಡಿದರು. ಅವರು ‘ಡಿಪ್ರೆಸ್ಡ್ ಕ್ಲಾಸಸ್ ಮಿಷನ್’(ಡಿ.ಸಿ,ಎಂ.) ಕೊಡಿಯಾಲ್ ಬೈಲ್‌ನಲ್ಲಿ ಸ್ಥಾಪನೆಯಾದದ್ದು ೧೮೯೭ರಲ್ಲಿ. ಅವರ ಪ್ರಯತ್ನದಿಂದ ತಲಪಾಡಿ, ಉಳ್ಳಾಲ, ಪುತ್ತೂರು, ಮೂಲ್ಕಿ, ಉಡುಪಿಯಲ್ಲಿ ದಲಿತರ ಶಾಲೆಗಳು ಆರಂಭಗೊಂಡವು. “ಕುದ್ಮಲ್ ರಂಗರಾಯರು ದಲಿತರ ಸೇವೆಯಲ್ಲಿ ನನ್ನ ಗುರು” – ಎಂದಿದ್ದರು ಗಾಂಧೀಜಿ. ರಂಗರಾಯರು ಮುಂದೆ ಸಂನ್ಯಾಸ ಸ್ವೀಕರಿಸಿ ಸ್ವಾಮಿ ಈಶ್ವರಾನಂದರಾದರು.

೧೯೦೯ರ ಒಂದು ದಿನ ಹಾಜಿ ಅಬ್ದುಲ್ಲಾ ಸಾಹೇಬರು ಮಂಗಳೂರಿನ ಶೇಡಿಗುಡ್ಡೆಯಲ್ಲಿದ್ದ ಕುದ್ಮಲ್‌ರಂಗರಾಯರ ದಲಿತರ ಶಾಲೆಗೆ ಭೇಟಿ ನೀಡಿದರು. ರಂಗರಾಯರು ಕೆಲವು ಮಕ್ಕಳನ್ನು ತೋರಿಸಿ ‘ಮಂಗಳೂರಿನ ಕೇರಿಗಳಲ್ಲಿ ಉಳ್ಳವರು ಉಂಡು ಎಸೆದ ಎಂಜಲೆಲೆ ಹೆಕ್ಕಿ ಹೊಟ್ಟೆ ತುಂಬಿಸಿಕೊಳ್ಳುತ್ತಿದ್ದ ಇವರು ಈಗ ಅಕ್ಷರ ಕಲಿಯುತ್ತಿದ್ದಾರೆ’ ಎಂದರು. ಇನ್ನೊಬ್ಬ ವಿದ್ಯಾರ್ಥಿಯನ್ನು ಕರೆದು, “ಮಗೂ, ಮೊನ್ನೆ ಕಲಿಸಿದ ಪಂಜೆಯವರ ಹಾಡು ಬಾಯಿಪಾಠ ಇದೆಯಾ? ಹಾಡು” ಎಂದರು.

ಆ ಅಮಾಯಕ ಬಾಲಕ ಹಾಡಿದ –

“ಉಳ್ಳಯ್ಯಾ, ದಯೆಗೊಳ್ಳಯ್ಯಾ!
“ದಟ್ಟಿದಿಕ್ಕಾ! ಮಾರಿ, ಮುಂಡ, ಮುಂಡಾಳ!
ಹುಟ್ಟುಹೊಲೆಯ! ಪೋಲಾ! ಚಂಡ ಚಂಡಾಳ!

ಬೊಟ್ಟೆ ಬೊಗ್ಗುರೆ!'' ಎಂದು ಹೆಸರತ್ತಿ ಕೂಗಿ
ಮುಟ್ಟಲಂಜುತೆ ನಿಲ್ವೆ ದೂರಕ್ಕೆ ಹೋಗಿ!
ಕಣ್ಣು, ಮೂಗು, ಕಿವಿ, ಕೈ ಕಾಲುಗಂಟು
ಅಣ್ಣ, ನಿಮ್ಮಂತೆಯೆ ನಮಗೆಲ್ಲ ಉಂಟು
ಬಣ್ಣ ಕಪ್ಪೆಂದು ನೀ ಬಿಡುವುದೆ ನಂಟು?
ಎಣ್ಣೆಯೋಲ್ ಹಿಡಿವುದೆ ನಮ್ಮ ಮೈ ಅಂಟು?
......................................................''

ಕುದ್ಮಲ್‌ರಂಗರಾಯರ ದಲಿತಸೇವೆಯನ್ನು ಕಂಡು ಪ್ರಭಾವಿತರಾದ ಹಾಜಿ ಅಬ್ದುಲ್ಲಾ ಸಾಹೇಬರು ಉಡುಪಿಯಲ್ಲಿ ದಲಿತರಿಗಾಗಿ ಒಂದು ಶಾಲೆಯನ್ನು ಆರಂಭಿಸಲು ಅವರಲ್ಲಿ ವಿನಂತಿಸಿದರು. ತಾನು ಆ ಶಾಲೆಗೆ ಸ್ಥಳದಾನ, ಕಟ್ಟಡದಾನ ಮಾಡುವುದಾಗಿ ಆಶ್ವಾಸನೆ ನೀಡಿದರು.

ಮಂಗಳೂರಿನ 'ಸ್ವದೇಶಾಭಿಮಾನಿ' ಪತ್ರಿಕೆ ೧೯೦೯ರ ಅಕ್ಟೋಬರ್ ೮ ರಂದು ಪ್ರಕಟಿಸಿದ ಒಂದು ವರದಿ ಹೀಗಿತ್ತು – ''ಈ ಮೊದಲು ನಿಶ್ಚಯಿಸಿರುವ ಪಂಚಮರ ಶಾಲೆಯನ್ನು ಈ ತಾ. ೧ರಲ್ಲಿ ತೆರೆದರು. ಇದಕ್ಕೆ ಉಪಾಧ್ಯಾಯನಾಗಿ ಮಂಗಳೂರಿನಿಂದ ಪುದ್ದು ಎಂಬವನು ಬಂದಿರುತ್ತಾನೆ. ನಮ್ಮ ಖಾನ್ ಸಾಹೇಬ ಮ. ರಾ. ಅಬ್ದುಲ್ಲಾ ಸಾಹೇಬರು ಈ ಶಾಲೆಯ ಬಗ್ಗೆ ತಮ್ಮ ಬಾಬ್ತು ಬನ್ನಂಜೆಯಲ್ಲಿರುವ ಒಂದು ಕಟ್ಟಡವನ್ನೂ, ಅದಕ್ಕೆ ತಾಗಿದ ಒಂದು ಎಕ್ರೆ ಸ್ಥಳವನ್ನೂ ಉಚಿತವಾಗಿ ಕೊಟ್ಟಿರುವರು.''

೧೯೦೯ರಲ್ಲಿ ಬ್ರಿಟಿಷ್ ಸರಕಾರ ಅಬ್ದುಲ್ಲಾ ಸಾಹೇಬರಿಗೆ 'ಖಾನ್‌ಸಾಹೇಬ್' ಬಿರುದನ್ನು ನೀಡಿ ಗೌರವಿಸಿತು. ಇಂದಿನ ಉಡುಪಿಯ ಕವಿ ಮುದ್ದಣ ಮಾರ್ಗದಲ್ಲಿ ವಿ.ಜೆ.ಯು. ಕ್ಲಬ್ ಇದೆ. ಅಲ್ಲಿ ೧೯೦೯ರ ಜುಲೈ ೨೫ರಂದು ಹಾಜಿ ಅಬ್ದುಲ್ಲಾ ಸಾಹೇಬರನ್ನು ಅಭಿನಂದಿಸುವ ಸಮಾರಂಭವೊಂದು ನಡೆಯಿತು. ಮಂಗಳೂರಿನ 'ಸ್ವದೇಶಾಭಿಮಾನಿ' ಪತ್ರಿಕೆ ತನ್ನ ೩೦ ಜುಲೈ ೧೯೦೯ರ ನಂಬಿಕೆಯಲ್ಲಿ ಈ ಸಮಾರಂಭದ ವರದಿಯನ್ನು ಪ್ರಕಟಿಸಿತು.

'ಸ್ವದೇಶಾಭಿಮಾನಿ' ಕಳೆದ ಸಂಚಿಕೆಯಲ್ಲಿ ಸೂಚಿಸಿದಂತೆ ನಮ್ಮ ಸಾಹುಕರ್ ಮ. ರಾ. ಅಬ್ದುಲ್ಲಾ ಸಾಹೇಬರಿಗೆ ಕೊಡಲ್ಪಟ್ಟ 'ಖಾನ್ ಸಾಹೇಬ್' ಎಂಬ ಬಿರುದಿನ ಗೌರವಾರ್ಥವಾಗಿ ಈ ತಾ. ೨೫ರಲ್ಲು ಒಂದು ಸಭೆ ಸೇರಿತು. ಈ ಸಭೆಗೆ ಹೆಡ್ ಅಸಿಸ್ಟೆಂಟ್ ಕಲೆಕ್ಟರ್ ದೊರೆಗಳವರು ಮೊದಲಾಗಿ ಈ ಊರಿನ ಎಲ್ಲಾ ಹುದ್ದೆದಾರರೂ, ಕಲ್ಯಾಣಪುರದ ಇಗರ್ಜಿಯ ಗುರುಗಳೂ, ಕೆಲವರು ಸಾಹುಕಾರರೂ ಇತರ ಗೃಹಸ್ಥರೂ ದಯಮಾಡಿದ್ದರು. ಸುಮಾರೂ ಆರು ಗಂಟೆ ಸಮಯಕ್ಕೆ ಸರ್ವರೂ ವಿಕ್ಟೋರಿಯಾ ಕ್ಲಬ್ಬಿನಲ್ಲಿ ಕಲೆತು ಮುಸಲ್ಮಾನ ಕ್ರೈಸ್ತ, ಹಿಂದೂ ಮಹನೀಯರಿಗೆಲ್ಲ ಪ್ರತ್ಯಪ್ರತ್ಯೇಕವಾಗಿ ವಿಲೆವಾರಿ ಮಾಡಿಸಲ್ಪಟ್ಟ ಉಪಾಹಾರಗಳಿಂದ ಚಾ ಕಾಫಿ ಪಾನಕಗಳನ್ನು ತೆಗೆದುಕೊಂಡು ತೃಪ್ತರಾದರು. ಮಧ್ಯ ಮಧ್ಯ ಖಾನ್ ಸಾಹೇಬರ ಪ್ರೋತ್ಸಾಹದಿಂದ ಅಭ್ಯಾಸ ಮಾಡಿರುವ ಬ್ಯಾಂಡಿನವರು ತಮ್ಮ ವಾದ್ಯವನ್ನು ಬಾರಿಸಿ ಕರ್ಣಾನಂದ ಪಡಿಸುತ್ತಿದ್ದರು. ಆದಾದ ನಂತರ ಸರ್ವರು ಪ್ರೈಮರಿ ಶಾಲೆಗೆ ಹೋಗಿ ಅಲ್ಲಿ ವಾದ್ಯ ವಿಶೇಷಗಳಲ್ಲೆಲ್ಲಾ ಪ್ರಖ್ಯಾತಿ ಪಟ್ಟ ಚಂದಯ್ಯ ಶೇರಿಗಾರರು ಬಾರಿಸಿದ ಜಲತರಂಗ ವ ಕ್ಲಾರಟ್ ವಾದ್ಯಗಳನ್ನು ಕೇಳಿ ಅವನ ಹಸ್ತಲಾಘವಕ್ಕೂ, ರಾಗಜ್ಞಾನಕ್ಕೂ ವಿಸ್ಮತರಾದರು. ತರುವಾಯ ಮ| ರಾ| ವಾಸುದೇವ ಪೈ ಬಿ.ಎ. ಬಿ.ಎಲ್. ಇವರು ಸತ್ಯವಿಜಯ ಕಥೆಯ ಸಾರಾಂಶವನ್ನು ಇಂಗ್ಲಿಷಿನಲ್ಲಿ ಓದಿ ತಿಳಿಸಿದರು. ಆಮೇಲೆ ಮರಾಠಿಯಲ್ಲಿ 'ಸಂಗೀತ ಸತ್ಯ ವಿಜಯ' ನಾಟಕವನ್ನು ಇಲ್ಲಿನ ನಾಟಕ ಕಂಪೆನಿಯವರು ಬಹು ಸೊಗಸಾಗಿ ಆಡಿ ತೋರಿಸಿದರು.

ಆ ತರುವಾಯ ಪೈಗಳವರು ಆ ಹೊತ್ತಿನ ಸಭೆಯ ಉದ್ದೇಶವನ್ನು ಸೂಚಿಸಿ ಮ| ರಾ| ಅಬ್ದುಲ್ಲಾ ಸಾಹೇಬರವರ ಪರೋಪಕಾರ ಬುದ್ಧಿಯನ್ನು, ಭೂತದಯೆಯನ್ನು, ಔದಾರ್ಯವನ್ನು ಶ್ಲಾಘಿಸಿ, ಸರಕಾರದವರು ಅವರಿಗೆ ದಯಮಾಡಿದ ಈ ಗೌರವಕ್ಕೆ ತುಂಬಾ ಪಾತ್ರರೆಂತಲೂ ಇದಕ್ಕಾಗಿ ಈ ಶಹರದ ನಿವಾಸಿಕರೆಲ್ಲರೂ ಸಂತೋಷ ಪಡುತ್ತಾರಲ್ಲದೆ ಸಕರಾರಕ್ಕೆ ಕೃತಜ್ಞತೆ ಉಳ್ಳವರಾಗಿದ್ದರೆಂತಲೂ ಇಂಗ್ಲಿಷಿನಲ್ಲಿ ಸೂಚಿಸಿದರು.

ಖಾನ್ ಸಾಹೇಬರು ಆಸ್ಪತ್ರೆಯ ಉಪಯೋಗದ ಬಗ್ಗೆ ಒಂದು ಚಲೋ ಕಟ್ಟೋಣವನ್ನು ಧರ್ಮಾರ್ಥವಾಗಿ ಕಟ್ಟಿಸಿಕೊಟ್ಟು ಶಾಶ್ವತವಾದ ವೃತ್ತಿಯನ್ನು ಕಲ್ಪಿಸಿದ್ದೂ, ಒಂದು ಛತ್ರವನ್ನು ಕಟ್ಟಿಸಿಕೊಟ್ಟದ್ದೂ, ಇಲ್ಲಿ ಸ್ಥಾಪಿಸಬೇಕಾಗಿ ನಿಶ್ಚಯಿಸಿರುವ ಹೊಲೆಯರ ಶಾಲೆಗೆ ತಕ್ಕ ಕಟ್ಟೋಣವನ್ನು ಕಟ್ಟಿಸಿಕೊಟ್ಟು ಹೊಲೆಯರ ಮಕ್ಕಳಿಗೆ ಬೇಕಾದ ಬಟ್ಟೆಬರೆಗಳನ್ನು ಕೊಡುವುದಕ್ಕೆ ಸಹಾಯ ಮಾಡುವುದಾಗಿ ವಾಗ್ದಾನ ಮಾಡಿದ್ದು ಪ್ರತಿನಿತ್ಯ ಬಡವರಿಗೆ ಅಕ್ಕಿ, ರೊಕ್ಕ, ಅನ್ನ ಮೊದಲಾದವುಗಳ ದಾನ ಮಾಡಿಸುವುದೂ ಇವೇ ಮೊದಲಾದ ಅವರ ಸದ್ಗುಣಗಳನ್ನು ಪ್ರಶಂಸಿಸಿ ಮ| ರಾ| ವಕೀಲ್ ವೆಂಕಟೇಶ ಪ್ರಭು ಬಿ.ಎ. ಇವರೂ ಡಾಕ್ಟರ್ ಮುತಾಯಸರವರೂ, ಖಾನ್ ಸಾಹೇಬರ ಬಂಧುಗಳೊಬ್ಬರೂ ಮಾತನಾಡುವವರಾದರು.

ಇವರೆಲ್ಲರಿಗೆ ಉತ್ತರರೂಪವಾಗಿ ಖಾನ್‌ಸಾಹೇಬರು ವಂದನಪೂರ್ವಕವಾಗಿ ಎದ್ದು ನಿಂತು ತನಗೆ ದಯಾಳು ಸರಕಾರವು ದಯಪಾಲಿಸಿದ ಈ ಬಹುಮಾನಕ್ಕಾಗಿ ಸಂತೋಷ ಪಡುವ ಈ ಶರಹದ ನಿವಾಸಿಕರೆಲ್ಲರಿಗೂ ಈ ದಿವಸ ತೋರ್ಪಡಿಸಿದ ತಮ್ಮ ವಿಶೇಷಾದರಕ್ಕಾಗಿ ಈ ಕ್ಲಬ್ಬಿನ ಮೆಂಬರುಗಳೆಲ್ಲರಿಗೂ ತಾನು ಕೃತಜ್ಞನಾಗಿರುತ್ತೇನೆಂತಲೂ ತಾನು ಈ ವರೆಗೆ ಮಾಡಿದ ಪರೋಪಕಾರ ಕಾರ್ಯಗಳು ಅತ್ಯಲ್ಪವಾಗಿದ್ದಾಗ್ಯೂ ಸಂದರ್ಭ ಒದಗಿದಾಗ ಸರ್ವರಿಗೂ ತನ್ನ ಕೈಲಾದ ಉಪಕಾರವನ್ನು ಮಾಡುವೆರ ಸಿದ್ಧವಾಗಿರುವೆನಾಗಿಯೂ ಈ ದಿವಸ ಈ ಮಹನೀಯರೆಲ್ಲರಿಗೂ ದಯಮಾಡಿ ಸಹನೆಯಿಂದ ಈ ಸಭೆಯನ್ನು ಅಲಂಕರಿಸಿದ್ದಕ್ಕಾಗಿ ತನೂ ಸರ್ವರಿಗೂ ಪುನಃ ಪುನಃ ಮನಃಪೂರ್ವಕವಾಗಿಯೂ ವಂದಿಸುತ್ತೇನೆಂತ ಗಂಭೀರವಾದ ಇಂಗ್ಲಿಷ್‌ವಾಣಿಯಿಂದ ಉತ್ತರ ಕೊಟ್ಟರು.'' ಈ ಸನ್ಮಾನ ನಡೆದಾಗ ಅಬ್ದುಲ್ಲಾ ಸಾಹೇಬು ಇಪ್ಪತ್ತೇಳು ವರ್ಷದ ಯುವಕ. ಈ ಸಮಾರಂಭ ಇಂಗ್ಲಿಷಿನಲ್ಲಿ ನಡೆದುದನ್ನೂ, ಅಬ್ದುಲ್ಲಾ ಸಾಹೇಬರು ಇಂಗ್ಲಿಷಿನಲ್ಲಿ ಭಾಷಣ ಮಾಡಿದುದನ್ನೂ ಗಮನಿಸಬೇಕು.

ವೈಸರಾಯ್ ಸರ್ ಚಾರ್ಲ್ಸ್ ಹಾರ್ಡಿಂಜ್ ೧೯೧೧ರಲ್ಲಿ ಬಂಗಾಳದ ವಿಭಜನೆಯನ್ನು ರದ್ದುಗೊಳಿಸುವ, ರಾಜಧಾನಿಯನ್ನು ಕಲ್ಕತ್ತಾದಿಂದ ದೆಹಲಿಗೆ ಸ್ಥಳಾಂತರಿಸುವ ಪ್ರಮುಖ ನಿರ್ಧಾರಗಳನ್ನು ಕೈಕೊಂಡನು. ೧೯೧೧ರ ಡಿಸೆಂಬರ್ ೧೧ರಂದು ಡಿಲ್ಲಿ ದರ್ಬಾರ್ ನಡೆಯಿತು. ಇಂಗ್ಲೆಂಡಿನ ದೊರೆ ೫ನೇ ಜಾರ್ಜ್ ಈ ದರ್ಬಾರಿನಲ್ಲಿ ಭಾಗವಹಿಸಿದ್ದನು. ಅಬ್ದುಲ್ಲಾ ಸಾಹೇಬರಿಗೆ ದಿಲ್ಲಿ ದರ್ಬಾರಿನಲ್ಲಿ ದಿಲ್ಲಿ ದರ್ಬಾರ್ ಪದಕವನ್ನು ನೀಡಿ ಗೌರವಿಸಲಾಯಿತು. ಅಬ್ದುಲ್ಲಾ ಸಾಹೇಬರ ದಿಲ್ಲಿ ಪ್ರವಾಸ, ಅವರು ದಿಲ್ಲಿಯಿಂದ ತಂದ ದರ್ಬಾರ್ ಪದಕ ಉಡುಪಿಯಲ್ಲಿ ದೊಡ್ಡ ಸುದ್ದಿಗಳಾದುವು. ದೆಹಲಿಗೆ ಹೋದ ಅಬ್ದುಲ್ಲಾ ಸಾಹೇಬರು ಗಾಂಧೀಜಿ ದಕ್ಷಿಣ ಆಫ್ರಿಕಾದಲ್ಲಿ ಬ್ರಿಟಿಷ್ ಸರಕಾರದ ವಿರುದ್ಧ ನಡೆಸುತ್ತಿದ್ದ ಸತ್ಯಾಗ್ರಹದ ರೋಚಕ ಕತೆಗಳನ್ನು ಕೇಳಿದರು.

ಅಬ್ದುಲ್ಲಾ ಸಾಹೇಬರು ೧೯೧೨ರಲ್ಲಿ ಹಜ್‌ಯಾತ್ರೆ ಮಾಡಿದರು. ಸೌದಿ ಅರೇಬಿಯಾದ ಹೆಜಸ್‌ನ ಮುಖ್ಯ ಪಟ್ಟಣ ಮೆಕ್ಕಾ. ಇದು ಮುಹಮ್ಮದ್ ಪೈಗಂಬರರ ಜನ್ಮ ಸ್ಥಳ. ಮುಸ್ಲಿಮರ ಯಾತ್ರಾಸ್ಥಳ. ಹಜ್‌ಯಾತ್ರೆಯಿಂದ ಬರುವಾಗ ಹಾಜಿ ಅಬ್ದುಲ್ಲಾ ಸಾಹೇಬರು ಮಾರಿಷಿಯನ್ ದ್ವೀಪಕ್ಕೆ ಭೇಟಿ ನೀಡಿದರು. ಅಲ್ಲಿನ ಕಬ್ಬಿನ ತಳಿ ಅವರ ಗಮನ ಸೆಳೆಯಿತು. ಅವರು ದಕ್ಷಿಣ ಕನ್ನಡದ ರೈತರಿಗೆ ಮಾರಿಷಿಯಸ್‌ನ ಕಬ್ಬಿನ ತಳಿಯನ್ನು ಪರಿಚಯಿಸಿದರು.

೧೯೧೭ರಲ್ಲಿ ಹಾಜಿ ಅಬ್ದುಲ್ಲಾ ಸಾಹೇಬರು ಕುಂದಾಪುರ ತಾಲೂಕು ಬೋರ್ಡಿನ ಅಧ್ಯಕ್ಷರಾದರು. ಆಗ ಉಡುಪಿಯಿಂದ ಕುಂದಾಪುರಕ್ಕೆ ಹೋಗಲು ಹಲವು ಹೊಳೆಗಳನ್ನು ದಾಟಬೇಕಿತ್ತು. ಮಹಾಯುದ್ಧದ ಬೆಲೆ ಏರಿಕೆಯ ದಿನಗಳಲ್ಲಿ ಬಡವರು ಅನುಭವಿಸುತ್ತಿದ್ದ ಕಷ್ಟಗಳು, ಶಿಕ್ಷಣ ಸೌಲಭ್ಯವಿಲ್ಲದ ಹಳ್ಳಿಗಳು, ಹೆರಿಗೆ ಆಸ್ಪತ್ರೆಗಳಿಲ್ಲದೆ ನೋವು ಅನುಭವಿಸುತ್ತಿದ್ದ ಮಹಿಳೆಯರು, ಸಾಂಕ್ರಾಮಿಕ ರೋಗಗಳಿಂದ ಸಾಯುತ್ತಿದ್ದ ಎಳೆಯ ಮಕ್ಕಳು – ಇಂಥ ಮನ ಕಲಕುವ ದೃಶ್ಯಗಳನ್ನು ಕಂಡು ಅಬ್ದುಲ್ಲಾ ಸಾಹೇಬರ ಮನ ಮಿಡುಕುತ್ತಿತ್ತು. ೧೯೧೮ರಲ್ಲಿ ಅವರು ಉಡುಪಿ ತಾಲೂಕು ಬೋರ್ಡಿನ ಅಧ್ಯಕ್ಷರಾದರು.

ದಕ್ಷಿಣ ಕನ್ನಡ ಜಿಲ್ಲೆ ಸ್ವಾತಂತ್ರ್ಯ ಪೂರ್ವದಲ್ಲಿ ಮದ್ರಾಸ್‌ರಾಜ್ಯದ ಭಾಗವಾಗಿತ್ತು. ಹಾಜಿ ಅಬ್ದುಲ್ಲಾ ಸಾಹೇಬರನ್ನು ಸರಕಾರ ೧೯೧೯ರಲ್ಲಿ ಪಶ್ಚಿಮ ಕರಾವಳಿ ಮತ್ತು ನೀಲಗಿರಿಯ ಭೂಮಾಲಕರ ಪ್ರತಿನಿಧಿಯಾಗಿ ಮದ್ರಾಸ್ ಲೆಜಿಸ್ಲೇಟಿವ್ ಕೌನ್ಸಿಲ್‌ಗೆ ನೇಮಕ ಮಾಡಿತು. ಮುಂದೆ ೧೯೨೧ರಲ್ಲಿ ಪರಿಷ್ಕೃತ ಕೌನ್ಸಿಲ್‌ನಲ್ಲೂ ಅಬ್ದುಲ್ಲಾ ಸಾಹೇಬರ ನೇಮಕ ಮುಂದುವರಿಯಿತು. ೧೯೧೯ರ ಮದ್ರಾಸ್ ಕಾನೂನಿನಂತೆ ಮದ್ರಾಸ್ ಲೆಜಿಸ್ಲೇಟಿವ್ ಕೌನ್ಸಿಲ್‌ನಲ್ಲಿ ೧೩೨ ಮಂದಿ ಸದಸ್ಯರಿದ್ದರು. ಅವರಲ್ಲಿ ಮೂವತ್ತನಾಲ್ಕು ಮಂದಿಯನ್ನು ಗವರ್ನರ್ ನೇಮಿಸುತ್ತಿದ್ದರು. ಉಳಿದವರು ಈ ಚುನಾವಣೆಯಲ್ಲಿ ಆಯ್ಕೆಯಾಗುತ್ತಿದ್ದರು. ಹಾಜಿ ಅಬ್ದುಲ್ಲಾ ಸಾಹೇಬರು ೧೯೨೬ರಲ್ಲಿ ಮದ್ರಾಸ್ ಶಾಸನ ಸಭೆಗೆ ಅವಿರೋಧವಾಗಿ ಆಯ್ಕೆಯಾದರು.

ಮದ್ರಾಸ್ ಸರಕಾರ ೧೯೧೭ರಲ್ಲಿ ಕೃಷಿ-ಕೈಗಾರಿಕಾ ಪ್ರದರ್ಶನವೊಂದನ್ನು ಮಂಗಳೂರಿನಲ್ಲಿ ಏರ್ಪಡಿಸಿತು. ‘‘ಹಾಜಿ ಅಬ್ದುಲ್ಲಾ ಸಾಹೇಬರು ಈ ಪ್ರದರ್ಶನ ಸಮಿತಿಯ ಸದಸ್ಯರಾಗಿದ್ದರು.

* * *

## ಅಧ್ಯಾಯ ೫. ‘‘ಮಹಾತ್ಮಾ ಗಾಂಧೀಕಿ ಜೈ!’’

ಇಪ್ಪತ್ತನೆಯ ಶತಮಾನದ ಮೊದಲ ದಶಕಗಳಲ್ಲಿ ಸ್ವಾತಂತ್ರ್ಯ ಚಳುವಳಿಯ ಪ್ರೇರಣೆ, ಪ್ರಚಾರಕ್ಕೆ ದಕ್ಷಿಣ ಕನ್ನಡದ ಪತ್ರಿಕೆಗಳು ನೀಡಿದ ಕೊಡುಗೆ ಮಹತ್ವದ್ದು. ಆಧುನಿಕ ಜನಪ್ರಿಯವಾಗುತ್ತಿದ್ದ, ರೇಡಿಯೊ, ಟಿವಿಗಳು ಇಲ್ಲದ ಕಾಲವದು. ದ.ಕ.ದ ವಿದ್ಯಾವಂತರು ಬೇಸಿಗೆಯಲ್ಲಿ ಮಳೆಗಾಲವನ್ನು ನಿರೀಕ್ಷಿಸುವಷ್ಟು ಕುತೂಹಲದಿಂದ ಪತ್ರಿಕೆಗಳನ್ನು, ಅವುಗಳಲ್ಲಿದ್ದ ಸ್ವಾತಂತ್ರ್ಯ ಚಳುವಳಿಯ ಸುದ್ದಿಗಳನ್ನು ಕಾಯುತ್ತಿದ್ದರು. ಮಂಗಳೂರಿನ ಕವಿ, ಪತ್ರಿಕಾ ಸಂಪಾದಕ ಕಡೆಂಗೋಡ್ಲು ಶಂಕರಭಟ್ಟರು ಮದ್ರಾಸ್‌ನಿಂದ ಬರುತ್ತಿದ್ದ ‘ಹಿಂದೂ’ ಪತ್ರಿಕೆಗಾಗಿ ರೈಲ್ವೇ ಸ್ಟೇಶನ್‌ನಲ್ಲಿ ಕಾಯುತ್ತಿದ್ದರಂತೆ!

ಹರ್ಮನ್ ಮೊಗ್ಲಿಂಗ್ ೧೮೪೨ರಲ್ಲಿ ಆರಂಭಿಸಿದ ‘ಕನ್ನಡ ಸಮಾಚಾರ’ ಮತ್ತು ಕನ್ನಡದ ಮೊದಲ ಪತ್ರಿಕೆ. ಮುಂದೆ ಉಡುಪಿ ಮಂಗಳೂರುಗಳಿಂದ ಹಲವಾರು ವಾರ, ಮಾಸಪತ್ರಿಕೆಗಳು ಪ್ರಕಟವಾಗತೊಡಗಿದುವು. ‘‘ಹಾಜಿ ಅಬ್ದುಲ್ಲಾ ಸಾಹೇಬರ ಕಾಲದ ಮುಖ್ಯ ಪತ್ರಿಕೆಗಳಿವು – ೧. ಅನಂತರಾವ್ ಅವರ ‘ಕನ್ನಡ ಕೇಸರಿ’ (೧೮೮೫), ೨. ಬೋಳಾರ ವಿಠಲರಾಯರ ‘ಸುವಾಸಿನಿ’ (೧೯೦೦), ೨. ಉಡುಪಿಯ ಕಡೆಕಾರು ರಾಜಗೋಪಾಲ ಕೃಷ್ಣರಾಯರ ‘ಶ್ರೀಕೃಷ್ಣ ಸೂಕ್ತಿ’ (೧೯೦೫), ೪. ಎ. ಎಸ್. ಕಾಮತ್‌ರ(ಶ್ರೀನಿವಾಸ ಕಾಮತ್) ‘ಸ್ವದೇಶಾಭಿಮಾನಿ’ (೧೯೦೭), ೪ – ಎಂ. ಎನ್. ಕಾಮತರ ‘ಬೋಧಿನಿ’ (೧೯೧೫), ‘ಆನಂದ’ (೧೯೧೭), ೫- ಮುಳಿಯ ತಿಮ್ಮಪ್ಪಯ್ಯನವರ ‘ಕನ್ನಡ ಕೋಗಿಲೆ’ (೧೯೧೬), ೬. ಡಿ. ಕೆ. ಭಾರಧ್ವಾಜರ ‘ಕಂಠೀರವ’ (೧೯೧೬), ೭. ಮೊಳಹಳ್ಳಿ ಶಿವರಾಯರ ‘ಸಹಕಾರಿ’(೧೯೧೬), ೮. ಎ, ಬಿ. ಶೆಟ್ಟರ ‘ನವಯುಗ’ (೧೯೨೧), ೯. ಶಿವರಾಮ ಕಾರಂತರ ‘ವಸಂತ’(೧೯೨೩), ೧೦. ಹಿರಿಯಡ್ಕ ರಾಮರಾಯ ಮಲ್ಯರ ‘ಸತ್ಯಾಗ್ರಹಿ’ (೧೯೨೩), ‘ಸ್ವತಂತ್ರ ಭಾರತ’(೧೯೩೫), ೧೧. ಬಾಳ ರಾಘವೇಂದ್ರ ರಾಯರ ‘ದೇಶ ರಂಜನ’(೧೯೩೧), ಬಿ. ಬಾಬುರಾಯ ಪ್ರಭುಗಳ ‘ಸ್ವದೇಶಿ ಪ್ರಚಾರಕ’(೧೯೩೨), ೧೩. ಜಾರಪ್ಪ, ನರಸಪ್ಪರ – ‘ಬಡವರ ಬಂಧು’.

ಗಾಂಧೀಜಿ ದಕ್ಷಿಣ ಆಫ್ರಿಕಾದಿಂದ ಭಾರತಕ್ಕೆ ವಾಪಾಸು ಬಂದದ್ದು ೧೯೧೫ರ ಜನವರಿಯಲ್ಲಿ. ಗೋಪಾಲಕೃಷ್ಣ ಗೋಖಲೆಯವರ ಸಲಹೆಯಂತೆ ಗಾಂಧೀಜಿ ಪರಿಸ್ಥಿತಿಯ ಅಧ್ಯಯನಕ್ಕಾಗಿ ಭಾರತ ಸಂಚಾರ ಆರಂಭಿಸಿದರು. ೧೯೨೦ರಲ್ಲಿ ಗಾಂಧೀಜಿ ಮಂಗಳೂರಿಗೆ ಭೇಟಿ ನೀಡುವ ಸುದ್ದಿ ಬಂದಾಗ ದಕ್ಷಿಣ ಕನ್ನಡದಲ್ಲಿ ಸಂಭ್ರಮವಾದ ಸ್ವಾಗತಕ್ಕೆ ಸಿದ್ಧತೆ ಆರಂಭವಾಯಿತು. ಉಡುಪಿಯ ವರ್ತಕ ಧುರೀಣ, ಕಾರ್ಪೊರೇಶನ್ ಬ್ಯಾಂಕಿನ ಅಧ್ಯಕ್ಷ ಹಾಜಿ ಅಬ್ದುಲ್ಲಾ ಸಾಹೇಬರು ಮಹಾತ್ಮಾ ಗಾಂಧೀಜಿ ಸ್ವಾಗತ ಸಮಿತಿಯ ಅಧ್ಯಕ್ಷರಾಗಿ ಆಯ್ಕೆಯಾದರು. ಗಾಂಧೀಜಿ ೧೯೨೦ರ ಆಗಸ್ಟ್ ೧೯ರಂದು ಮಂಗಳೂರಿಗೆ ಬಂದರು. ಅವರಿಗಿಂತ ಹದಿಮೂರು ವರ್ಷ ಕಿರಿಯರಾಗಿದ್ದ, ಮೂವತ್ತೆಂಟರ

ಹರೆಯದ ಹಾಜಿ ಅಬ್ದುಲ್ಲಾ ಸಾಹೇಬರು ರೈಲ್ವೇ ನಿಲ್ದಾಣದಲ್ಲಿ ಗಾಂಧೀಜಿಯವರನ್ನು ಸ್ವಾಗತಿಸಿದರು. ಗಾಂಧೀಜಿ ಸಾರ್ವಜನಿಕ ಸಭೆ ಹಾಗೂ ಮಹಿಳೆಯರ ಸಭೆಗಳಲ್ಲಿ ಅಸಹಕಾರ ಚಳುವಳಿಯ ತನ್ನ ಕಲ್ಪನೆಯನ್ನು ವಿವರಿಸಿದರು. ಮಹಾತ್ಮನ ಸನ್ನಿಧಿಯಲ್ಲಿ ಕುಳಿತು ಅವರ 'ಸ್ಫಟಿಕದ ಶಲಾಕೆಯಂತ' ಮಾತುಗಳನ್ನು ಕೇಳುತ್ತ ಅಬ್ದುಲ್ಲಾ ಸಾಹೇಬರು 'ಇದು ಭಾಗ್ಯ ಇದು ಭಾಗ್ಯ ಇದು ಭಾಗ್ಯವಯ್ಯ' ಎಂದು ಸಂತೋಷಪಟ್ಟರು. ನೂರಾರು ಮಹಿಳೆಯರು ತಮ್ಮ ಆಭರಣಗಳನ್ನು ತೆಗೆದು ಅರ್ಪಿಸಿದ್ದನ್ನು ಕಂಡು ಗಾಂಧೀಜಿ ಆನಂದಬಾಷ್ಪ ಸುರಿಸಿದರು.



ಗಾಂಧೀಜಿಯವರೊಂದಿಗೆ ಅಬ್ದುಲ್ಲಾ ಸಾಹೇಬರು. ಚಿತ್ರ - ಶ್ರೀ ರಾಘವ ಆಚಾರ್

೧೯೨೭ರಲ್ಲಿ ಗಾಂಧೀಜಿ ಖಾದಿ ಪ್ರಚಾರ ಮಾಡಲಿಕ್ಕಾಗಿ ಮತ್ತೊಮ್ಮೆ ದಕ್ಷಿಣ ಕನ್ನಡಕ್ಕೆ ಬಂದರು. ಗಾಂಧೀಜಿಗೆ ಅರ್ಪಿಸಿದ ಒಂದು ಲಕ್ಷ ರೂಪಾಯಿಗಳ ನಿಧಿಯಲ್ಲಿ ಅಬ್ದುಲ್ಲಾ ಸಾಹೇಬರ ಕೊಡುಗೆಯೂ ಇತ್ತು. ನೀಲೇಶ್ವರ, ಕಾಸರಗೋಡು, ಬಂಟವಾಳ, ಕುಂದಾಪುರ, ಕಾರ್ಕಳ, ಉಡುಪಿಗಳಲ್ಲಿ ಗಾಂಧೀಜಿ ಭಾಷಣ ಮಾಡಿದರು. ಗಾಂಧೀಜಿಯ 'ಗುಪ್ತಭಕ್ತ'ರಾಗಿದ್ದ ಅಬ್ದುಲ್ಲ ಸಾಹೇಬರಿಗೆ ಮತ್ತೊಮ್ಮೆ ಅವರನ್ನು ಭೇಟಿಯಾಗುವ, ಅಭಿನಂದಿಸುವ ಅವಕಾಶ ಸಿಕ್ಕಿತು.

ಮಹಾತ್ಮಾ ಗಾಂಧೀಜಿಯವರು ೧೯೩೪ರಲ್ಲಿ ಫೆಬ್ರವರಿಯಲ್ಲಿ ಮೂರನೆಯ ಬಾರಿ ದಕ್ಷಿಣ ಕನ್ನಡಕ್ಕೆ ಬಂದಾಗ ಅಬ್ದುಲ್ಲಾ ಸಾಹೇಬರು ಆರ್ಥಿಕ ಸಮಸ್ಯೆಗಳಿಂದಾಗಿ ಕೊರಗುತ್ತಿದ್ದರು. ಗಾಂಧೀಜಿ ಹರಿಜನರ ಸಮಸ್ಯೆಯ ಕುರಿತು ಪ್ರಚಾರ ಮಾಡಲು ಬಂದಿದ್ದರು. ಫೆಬ್ರವರಿ ೨೪ ರಂದು ಸಂಪಾಜೆ, ಸುಳ್ಯ, ಪುತ್ತೂರು, ವಿಟ್ಲ, ಕಬಕ, ಕಲ್ಲಡ್ಕ, ಪಾಣೆ ಮಂಗಳೂರು, ಬಂಟ್ವಾಳ, ಅರ್ಕುಳ, ಅಡ್ಯಾರು, ಮಂಗಳೂರುಗಳಿಗೆ ಭೇಟಿ ನೀಡಿದರು. ಫೆಬ್ರವರಿ ೨೫ ಮತ್ತು ೨೬ ರಂದು ಗಾಂಧೀಜಿ ಗುರುಪುರ, ಬಜ್ಪೆ, ಯೆಕ್ಕಾರು, ಕಟೀಲು, ಕಿನ್ನಿಗೋಳಿ, ಮುಲ್ಕಿ, ಪಡುಬಿದ್ರಿ, ಕಟಪಾಡಿ, ಉಡುಪಿ, ಬ್ರಹ್ಮಾವರ, ಕುಂದಾಪುರಗಳಿಗೆ ಬಂದರು. ಫೆಬ್ರವರಿ ೨೭ರಂದು ಗಾಂಧೀಜಿ ಹಡಗಿನ ಮೂಲಕ ಕಾರವಾರಕ್ಕೆ ಪ್ರಯಾಣ ಮಾಡಿದರು.



ಉದ್ಯಾವರದಲ್ಲಿ ದೋಣಿಯಿಂದ ಇಳಿಯುತ್ತಿರುವ ಗಾಂಧೀಜಿ

ಕಾರ್ನಾಡ್ ಸದಾಶಿವರಾವ್, ಹಿರಿಯಡ್ಕ ರಾಮರಾಯ ಮಲ್ಯ, ಹಿರಿಯಡ್ಕ ನಾರಾಯಣರಾವ್, ತೋನ್ಸೆ ಮುಕುಂದ ಪೈ, ಕೋಟ ರಾಮಕೃಷ್ಣ ಕಾರಂತ, ಶಿವರಾಮ ಕಾರಂತ, ಡಿ.ಕೆ. ಭಾರದ್ವಜ, ಅಮಾಸೆಬೈಲು ಕೃಷ್ಣರಾವ್ ಕೊಡ್ಗಿ, ಎಂ.ಉಮೇಶ್ ರಾವ್, ಆರ್.ಕೆ. ಪ್ರಭು, ಶೇಕ್ ಯೂಸುಫ್ ಸಾಹೇಬ, ಅಬ್ದುಲ್ ಖಾದರ್ ಅಸ್ಸಾದಿ, ಎಸ್. ಯು. ಪಣಿಯಾಡಿ, ಪೊಳಲಿ ಶೀನಪ್ಪ ಹೆಗ್ಡೆ, ಖಂಡಿಗೆ ಕೃಷ್ಣಭಟ್, ಚರ್ಡಪ್ಪ ಕಾಮತ್, ಪ್ರೊ. ಎಂ. ಎಂ. ರಾಮರಾವ್, ಕಮಲಾದೇವಿ ಚಟ್ಟೋಪಾಧ್ಯಾಯ, ಎ. ಬಿ. ಶೆಟ್ಟಿ, ಎಂ. ಡಿ.ಅಧಿಕಾರಿ, ರಂಗನಾಥ ಪ್ರಭು ಕಾರ್ಕಳ, ಸಾಂತ್ಯಾರು ಅನಂತಪದ್ಮನಾಭ ಭಟ್, ಪಡ್ರೆ ವಿಷ್ಣು ಕಡಂಬಳಿತ್ತಾಯ, ಕೆ.ಕೆ. ಶೆಟ್ಟಿ, ಉಡುಪಿ ಗೋವಿಂದ ರಾವ್, ಬಸ್ರೂರು ಸೂರಪ್ಪ ಶೆಟ್ಟಿ, ಪಾಂಗಾಳ ಮಂಜುನಾಥ ನಾಯಕ್, ಯೋಗೀಶ್ವರ ಹೊಳ್ಳ, ಮಲ್ಪೆ ಶಂಕರನಾರಾಯಣ ಸಾಮಗ, ಹಾಲಠಡಿ ಮಹಾಬಲ ಶೆಟ್ಟಿ, ಡಿ.ಬಿ. ಅಂತಯ್ಯ ಶೆಟ್ಟಿ, ಕೊಳ್ಳೆಬೈಲು ಮಹಾಬಲ ಶೆಟ್ಟಿ, ಹಲ್ಯನಾಡು ಸೂರಪ್ಪಯ್ಯ, ಉಡುಪಿಯ ಅಂಬಾಬಾಯಿ ಪೈ, ಗಿರಿಜಾಬಾಯಿ... ಸ್ವಾತಂತ್ರ್ಯ ಹೋರಾಟಗಾರರ ಈ ಸಹಸ್ರನಾಮಾವಳಿಯಲ್ಲಿ ಹಾಜಿ ಅಬ್ದುಲ್ಲಾ ಸಾಹೇಬರ ಹೆಸರೂ ಇದೆ. ಅವರು ಮುಂಚೂಣಿಯಲ್ಲಿದ್ದವರಲ್ಲ, ಹಿನ್ನೆಲೆಯಲ್ಲಿದ್ದವರು; ಹತ್ತಾರು ಸ್ವಾತಂತ್ರ್ಯ ಹೋರಾಟಗಾರರಿಗೆ ಬೆಂಬಲ, ರಕ್ಷಣೆ ನೀಡಿದವರು; ಗಾಂಧೀಜಿಯ ಗುಪ್ತಭಕ್ತರಾಗಿದ್ದವರು; ವಿನೋಭಾ ಭಾವೆಯಟವರು ಭೂದಾನ ಯಜ್ಞ ಆರಂಭಿಸುವ ಮೊದಲೆ ಮಹಾದಾನಿಯಾಗಿದ್ದವರು; ಕಾರ್ನಾಡು ಸದಾಶಿವರಾಯರಂತೆ ಔದಾರ್ಯದ ಉರುಳಲ್ಲಿ ಸಿಲುಕಿದವರು.

* * *

## ಅಧ್ಯಾಯ ೬. 'ಉಡುಪಿಯ ಅಕ್ಷರ'

ಹಾಜಿ ಅಬ್ದುಲ್ಲಾ ಸಾಹೇಬರನ್ನು ಕುರಿತು ಒಂದು ಜೀವನ ಚರಿತ್ರೆಯನ್ನು ರಚಿಸಬೇಕೆಂದು ನಾನು ಮತ್ತು ನನ್ನ ಕವಿಮಿತ್ರ, ಕಾರ್ಪೊರೇಶನ್ ಬ್ಯಾಂಕ್ ಮುಖ್ಯ ಪ್ರಬಂಧಕ ಶ್ರೀ ಎಚ್. ಡುಂಡಿರಾಜರು ೨೦೦೧ರಲ್ಲಿ ಮಾಹಿತಿ ಸಂಗ್ರಹಿಸತೊಡಗಿದೆವು. ಹಲವರನ್ನು ಸಂದರ್ಶಿಸಿದಾಗ ಹಾಜಿ ಅಬ್ದುಲ್ಲಾ ಸಾಹೇಬರು ದಂತಕಥೆಗಳ ನಾಯಕನಾಗಿ, ದುರಂತವನ್ನು ಕಂಡ ದಾನಶೂರನಾಗಿ ಸಮಾಜದ ಸಮೂಹ ಸ್ಮೃತಿಯಲ್ಲಿ ಇರುವುದು ನಮಗೆ ಕಂಡುಬಂತು. ಅವರ ಕುರಿತು ಅಧಿಕೃತ ದಾಖಲೆಗಳಿಗಿಂತಲೂ ಜಾಸ್ತಿ ಐತಿಹ್ಯಗಳು ಸಿಗುತ್ತವೆ. ನಾವು ಕ್ಷೇತ್ರ ಕಾರ್ಯ ಸಂಶೋಧನೆ ಆರಂಭಿಸಿದಾಗ ಅಬ್ದುಲ್ಲಾ ಸಾಹೇಬರು ಜನಿಸಿ ೧೧೯ ವರ್ಷಗಳು, ನಿಧನರಾಗಿ ೬೬ ವರ್ಷಗಳು ಕಳೆದು ಹೋಗಿದ್ದುವು. ಅವರ ನಿಕಟವರ್ತಿಗಳ ನೆನಪುಗಳನ್ನು ದಾಖಲಿಸುವ, ಔದಾರ್ಯದ ಉರುಳಲ್ಲಿ ಸಿಲುಕಿದ ಅವರ ಸಮಗ್ರ ಜೀವನ ಚರಿತ್ರೆಯನ್ನು ಬರೆಯುವ ಅವಕಾಶವನ್ನು ನಾವು ಕಳೆದುಕೊಂಡಿದ್ದೇವೆ.

ಉಡುಪಿಯ ಕವಿ ಮುದ್ದಣ ರಸ್ತೆಯಲ್ಲಿರುವ ಸರಕರಿ ಆಸ್ಪತ್ರೆಗೆ (ಈಗಿನ ಮಹಿಳಾ ಆಸ್ಪತ್ರೆ) ಸ್ಥಳದಾನ ಮಾಡಿದವರು ಹಾಜಿ ಅಬ್ದುಲ್ಲಾ ಸಾಹೇಬರು. ಈ ಆಸ್ಪತ್ರೆ ಅಬ್ದುಲ್ಲಾ ಸಾಹೇಬರ ಅಜ್ಜ ಬುಡಾನ್ ಸಾಹೇಬರ ಹೆಸರಿನಲ್ಲಿದೆ. ಉಡುಪಿಯ ವಿ.ಜೆ.ಯು ಕ್ಲಬ್, ಅಂಜುಮಾನ್ ಉರ್ದು ಶಾಲೆ, ಅಂಜುಮಾನ್ ಅತಿಥಿ ಗೃಹಗಳು ಸ್ಥಳದಾನಕ್ಕಾಗಿ ಅಬ್ದುಲ್ಲಾ ಸಾಹೇಬರಿಗೆ ಋಣಿಯಾಗಿವೆ.

ಮದ್ರಾಸ್ ವಿಶ್ವವಿದ್ಯಾನಿಲಯಕ್ಕೆ, ಬನಾರಸ್ ಹಿಂದೂ ಕಾಲೇಜಿಗೆ ಹಾಜಿ ಅಬ್ದುಲ್ಲಾ ಸಾಹೇಬರು ದಾನ ನೀಡಿದ್ದರು. ೧೯೧೭ರಲ್ಲಿ ಮಂಗಳೂರಿನ ಮಹಿಳಾ ಆಸ್ಪತ್ರೆಗೆ ಅವರು ಆ ಕಾಲದ ದೊಡ್ಡ ಮೊತ್ತ ರೂ, ೫೦೧ ನೀಡಿದ್ದರು. ಡಾ. ಶಿವರಾಮ ಕಾರಂತರಲ್ಲಿ ನಾನು ಅಬ್ದುಲ್ಲಾ ಸಾಹೇಬರು ಕುರಿತು ವಿಚಾರಿಸಿದಾಗ ಅವರು ಮಂಗಳೂರಿನ ಸರಕಾರಿ ಕಾಲೇಜಿನಲ್ಲಿರುವ (ಈಗಿನ ವಿ.ವಿ. ಕಾಲೇಜು) ಒಂದು ದತ್ತಿನಿಧಿ ಬಹುಮಾನವನ್ನು ನೆನಪಿಸಿಕೊಂಡರು. ೧೯೦೧ ರಲ್ಲಿ ತನ್ನ ತಂದೆ ಖಾಸಿಮ್ ಸಾಹೇಬರ 'ಸ್ಮಾರಕ ದತ್ತಿನಿಧಿ'ಯೊಂದನ್ನು ಅಬ್ದುಲ್ಲಾ ಸಾಹೇಬರು ಸ್ಥಾಪಿಸಿದರು. ಬ್ರಿಟಿಷ್ ಸರಕಾರದ ತಹಶೀಲ್ದಾರ್ ರೂ. ೨೫೦ ತಿಂಗಳ ಸಂಬಳ ಪಡೆಯುತ್ತಿದ್ದ ಆ ಕಾಲದಲ್ಲಿ ಅವರು ದತ್ತಿನಿಧಿಗೆ ನೀಡಿದ ಹಣ ಒಂದು ಸಾವಿರ ರೂಪಾಯಿಗಳು! ಸಂಸ್ಕೃತ ಮತ್ತು ಇಂಗ್ಲಿಷ್‌ನಲ್ಲಿ ಅತ್ಯಧಿಕ ಅಂಕಗಳಿಸಿದ ವಿದ್ಯಾರ್ಥಿಗಳಿಗೆ ಈ ದತ್ತಿನಿಧಿ ಬಹುಮಾನ ಮೀಸಲಾಗಿತ್ತು. ಅದರ ಬಡ್ಡಿಯಿಂದ ವಿದ್ಯಾರ್ಥಿಗಳಿಗೆ ಹೊರಲು ಕಷ್ಟವಾಗುವಷ್ಟು ಪುಸ್ತಕಗಳು ಬಹುಮಾನದ ರೂಪದಲ್ಲಿ

ಸಿಗುತ್ತಿದ್ದುವಂತೆ! ಮೊದಲ ಮಹಾಯುದ್ಧದ ಬೆಲೆ ಏರಿಕೆಯ ದಿನಗಳಲ್ಲಿ (೧೯೧೪-೧೮). ಬಡವರು ಕಂಗಾಲಾದಾಗ ಅಬ್ದುಲ್ಲಾ ಸಾಹೇಬರು ರಂಗೂವಿನಿಂದ ಅಕ್ಕಿ ತರಿಸಿ ರೂಪಾಯಿಗೆ ಮೂರು ಸೇರಿನಂತೆ ವಿತರಿಸಿದರು.



ಸ್ಥಾಪಕಾಧ್ಯಕ್ಷರು ಉಡುಪಿಯ ಹೃದಯ ಭಾಗದಲ್ಲಿ ಕಟ್ಟಿಸಿದ ಆಸ್ಪತ್ರೆ



ಕಾರ್ಪೊರೇಶನ್ ಬ್ಯಾಂಕಿನಲ್ಲಿ ಉದ್ಯೋಗದಲ್ಲಿದ್ದು ನಿವೃತ್ತರಾದ ನಸೀಬ್ ಸಾಹೇಬರು (ಜನನ – ೧೯೧೫) ತಿಳಿಸಿರುವಂತೆ, "ಅಬ್ದುಲ್ಲಾ ಸಾಹೇಬರು ದಾನ- ಧರ್ಮಗಳಿಗೆ ಪ್ರಸಿದ್ಧರಾಗಿದ್ದರು. ಹಬ್ಬಗಳಂದು ತನ್ನ ಮನೆಯಲ್ಲಿ ಸಾವಿರಾರು ಜನರಿಗೆ ಊಟ ಹಾಕುತ್ತಿದ್ದರು. ಪ್ರತಿದಿನ ಒಂದು ಮುಡಿ ಅಕ್ಕಿ ದಾನ ಮಾಡುತ್ತಿದ್ದರು. ಮದುವೆ ಖರ್ಚಿಗೆ, ರೋಗಿಗಳ ಶುಶ್ರೂಷೆಗೆ ಸಹಾಯ ಕೇಳಿದವರಿಗೆ ಕನಿಷ್ಠ ೫೦ ರೂಪಾಯಿ ದಾನ ನೀಡುತ್ತಿದ್ದರು. ಇದು ಆ ಕಾಲದಲ್ಲಿ ದೊಡ್ಡ ಮೊತ್ತವಾಗಿತ್ತು. ನಾನು ಮೆಟ್ರಿಕ್‌ವರೆಗೆ  ಕಲಿಯಲು ಆರ್ಥಿಕ ಸಹಾಯ ನೀಡಿದವರು ಅಬ್ದುಲ್ಲಾ ಸಾಹೇಬರು. ಉಡುಪಿ ಲಕ್ಷ ದೀಪೋತ್ಸವಕ್ಕೆ ಮತ್ತು ಪರ್ಯಾಯಕ್ಕೆ ಅವರು ತುಪ್ಪ ಮತ್ತಿತರ ವಸ್ತುಗಳನ್ನು ದಾನವಾಗಿ ಕಳುಹಿಸುತ್ತಿದ್ದರು."

ಉಡುಪಿಯ ಅನುಪ್‌ರಾಮ್ ನಾನಾಲಾಲ್ ಪಂಡ್ಯಾ (೧೯೨೨-೧೯೯೫) ನನಗೆ ನೀಡಿದ ಸಂದರ್ಶನದಲ್ಲಿ ಅಬ್ದುಲ್ಲಾ ಸಾಹೇಬರ ಜನೋಪಕಾರಿ ವ್ಯಕ್ತಿತ್ವವನ್ನು ನೆನಪಿಸಿಕೊಂಡರು – "ಒಕ್ಕಲುಗಳಿಗೆ ಗೇಣಿ ಕೊಡಲು ಅಸಾಧ್ಯವಾದಾಗ ಸಾಹೇಬರು ಗೇಣಿ ಮಾಫಿ ಮಾಡುತ್ತಿದ್ದರು. ಬೆಳೆ ಹಾಳಾದರೆ ಒಕ್ಕಲುಗಳಿಗೆ ಖರ್ಚಿಗೆ ಹಣವನ್ನು ತಾನೇ ಕೊಡುತ್ತಿದ್ದರು. ಕಡ ಕೊಡುವಾಗ ಅವರು ಲೆಕ್ಕ

ಬರೆದಿಡುತ್ತಿರಲಿಲ್ಲ. ಕವಾಟು ತೋರಿಸಿ 'ಅಲ್ಲಿಂದ ಹಣ ತೆಗೆದುಕೊ' ಎನ್ನುತ್ತಿದ್ದರಂತೆ. ಈ ಸಲಿಗೆಯನ್ನು ದುರುಪಯೋಗಪಡಿಸಿದವರೂ ಇದ್ದರು."

ಕು.ಶಿ. ಹರಿದಾಸ ಭಟ್ಟರು ಬರೆದಿರುವಂತೆ, "ಅವರು ಸುಕೋಮಲ ವ್ಯಕ್ತಿತ್ವ, ಪ್ರಿಯಭಾಷೆ, ಮಾರ್ದವಗಳು ಜನಜನಿತವಷ್ಟೆ. ಒಮ್ಮೆ ಅವರ ದನಗಳನ್ನು ಹಟ್ಟಿಗೆ ಅಟ್ಟುವ ಆಳು ಯಾವುದೋ ಒಂದು ದನಕ್ಕೆ ಕೋಲಿಂದ ತಿವಿದನಂತೆ. ಇದನ್ನು ಮಹಡಿಯಿಂದ ನೋಡಿದ ಅಬ್ದುಲ್ಲಾ ಸಾಹೇಬರು ಆತನನ್ನು ಒಳಗೆ ಕರೆದು ಗದರಿಸಲಿಲ್ಲ. 'ನೋಡು ಅದು ಪಾಪದ ಪ್ರಾಣಿ. ಅಕದ್ಕೆ ಬಾಯಿ ಬರುತ್ತದೆಯೇ? ಹೊಡೆದರೆ ತಿಳಿಯುತ್ತದೆಯೆ? ಸ್ವಲ್ಪ ನಟನೆ, ಕರುಣೆ ಬೇಕು' ಎಂದು ಮೃದುಭಾಷಿತದಲ್ಲೇ ಹೇಳಿದರಂತೆ." (ಮುರಳೀಧರ ಉಪಾಧ್ಯ, ಎಚ್.ಡುಂಡಿರಾಜ್ (ಸಂ.), ೨೦೦೧).

ಕಾರ್ಪೊರೇಶನ್ ಬ್ಯಾಂಕಿನ ಅಧಿಕಾರಿಯಾಗಿದ್ದು ನಿವೃತ್ತರಾದ ಉಡುಪಿ ಸದಾನಂದ ಶೇಟ್ ಅವರು ತಿಳಿಸಿರುವಂತೆ, "ಉಡುಪಿ ಊರೆಲ್ಲೆ ಆಗಿನ ಕಾಲದಲ್ಲಿ ಅಬ್ದುಲ್ಲ ಸಾಹೇಬರು ಅತ್ಯಂತ ಶ್ರೀಮಂತರು. ಸಾವಿರಾರು ಮುಡಿ ಅಕ್ಕಿ ಉತ್ಪನ್ನ ಪಡೆಯುವ ಗದ್ದೆ ಹೊಲಗಳ ಒಡೆಯರು. ಅಬ್ದುಲ್ಲಾ ಸಾಹೇಬರು ಉಡುಪಿ ಪೇಟೆಯಲ್ಲಿ ಕೆಲವು ಸಾರಿ ನಡೆದುಕೊಂಡು ಬರುವಾಗ್ಯೆ ಸಮಸ್ತ ಜನರು ಅವರಿಗೆ ನಮಸ್ಕಾರ ಹಾಕುತ್ತಿದ್ದರು. ಪ್ರತಿ ನಮಸ್ಕಾರ ಹಾಕಿ ಅವರ ಕೈ ಸೋಲುತ್ತಿತ್ತಂತೆ.

ದಿ| ಅಬ್ದುಲ್ಲಾ ಸಾಹೇಬರು ಉಡುಪಿ ಶ್ರೀ ಕೃಷ್ಣದೇವರ ಅನನ್ಯ ಭಕ್ತರು. ಕೆಲವು ಸಾರಿ ಶ್ರೀ ಅಬ್ದುಲ್ಲಾ ಸಾಹೇಬರು ಉಡುಪಿಯ ರಥಬೀದಿಗೆ ಬಂದಾಗ್ಯೆ. ಸಾಯಂಕಾಲದ ಸಮಯದಲ್ಲಿ ಎಲ್ಲಾ ಕಡೆ ತಿರುಗಿ ನೋಡಿ ಅವರ ಸಮಾಜದ ಯಾರೂ ಹತ್ತಿರ ಇಲ್ಲವಂದು ತಿಳಿದ ಮೇಲೆ ಶ್ರೀ ಕೃಷ್ಣ ದೇವರಿಗೆ ನಮಸ್ಕಾರ ಮಾಡಿ, ಕಾಣಿಕೆಯನ್ನು ಡಬ್ಬಿಯೊಳಗೆ ಹಾಕಿ ಹೋಗುತ್ತಿದ್ದರಂತೆ. ಅಂದಿನ ಕಾಲದಲ್ಲಿ ಶ್ರೀ ಕೃಷ್ಣಮಠದಲ್ಲಿ ಆದಾಯ ಕಮ್ಮಿ ಇರುತ್ತಿತ್ತು. ಕೆಲವು ಸಾರಿ ಅವರು ಸ್ವತಃ ಬಂದು ಶ್ರೀ ದೇವರ ಡಬ್ಬಿಯಲ್ಲಿ ಸಾಕಷ್ಟು ಹಣ ಸುರುವುತ್ತಿದ್ದರಂತೆ. ಯಾಕೆಂದರೆ ಶ್ರೀ ದೇವರ ಸೇವೆ ನಿರಂತರ ನಡೆಯಬೇಕು, ಚ್ಯುತಿ ಬರಬಾರದು ಎಂದು ಅವರ ಆಶಯವಾಗಿತ್ತು. ಪರ್ಯಾಯ ಕಾಲದಲ್ಲಿ ಎಣ್ಣೆಯನ್ನು, ಊಟಕ್ಕೆ ಚ್ಯುತಿ ಬಾರದಂತೆ ಅಕ್ಕಿ ಸಾಂಬಾರು ಪಾದಾರ್ಥಗಳನ್ನು ಕಳುಹಿಸುವ ಪರಿಪಾಠ ಇದ್ದಿತ್ತಂತೆ.

**ಶ್ರೀ ಕೃಷ್ಣಾಪುರ ಸ್ವಾಮಿಗಳವರ ಪರ್ಯಾಯ ಕಾಲ**

ಶ್ರೀಪಾದರು ಶ್ರೀಕೃಷ್ಣದೇವರಿಗೆ ಚಿನ್ನದ ಪಾಲಕಿ ಮಾಡಬೇಕೆಂದು ಸಂಕಲ್ಪ ಮಾಡಿದ್ದರಂತೆ. (ಈಗ ಶ್ರೀ ಕೃಷ್ಣದೇವರ ಮಠದಲ್ಲಿ ನಿತ್ಯ ಸೇವೆಗೆ ಇರುವ ಚಿನ್ನದ ಪಾಲಕಿ.) ಹಾಗೆಯೇ ಶ್ರೀಪಾದರು ಮಠದ ದಿವಾರನ್ನು ಅಬ್ದುಲ್ಲಾ ಸಾಹೇಬರಲ್ಲಿ ಕಳುಹಿಸಿ ಶ್ರೀ ದೇವರಿಗೆ ಚಿನ್ನದ ಪಾಲಕಿಯನ್ನು ಮಾಡುವ ಸಂಕಲ್ಪವನ್ನು ನಿವೇದಿಸಿದರು. ಅಬ್ದುಲ್ಲಾ ಸಾಹೇಬರು ತಡ ಮಾಡದೆ ಅವರ ಮನೆಯ ಒಳಗೆ ಹೋಗಿ ಒಂದು ಸೇರು ತುಂಬಾ ಚಿನ್ನದ ಪವನುಗಳನ್ನು ಶ್ರೀ ಕೃಷ್ಣ ದೇವರಿಗೆ ಒಪ್ಪಿಸಿದರಂತೆ. ಈ ವಿಷಯವನ್ನು, ನನ್ನ ಬಾಲ್ಯದಲ್ಲಿ, ನಮ್ಮ ಮನೆಯ ಹತ್ತಿರವೇ ಇದ್ದ ವಿಶ್ವಕರ್ಮ ಶಿಲ್ಪಿ (ಅವರೇ ಶ್ರೀ ಕೃಷ್ಣ ಮಠದ ಪಾಲಕಿಯನ್ನು ಮಾಡಿದವರು)ಯ ದೊಡ್ಡ ತಾಯಿಯವರು ನಮಗೆ ತಿಳಿಸಿದ್ದರು. ಉತ್ಕೃಷ್ಟ ಶೈಲಿಯ ವಿನೂತನ ಕುಸುರಿ ಚಿನ್ನದ ಕೆಲಸದ ಪಾಲಕಿ ಬಹುಶಃ ನಮ್ಮ ದೇಶದಲ್ಲೇ ಅಪರೂಪವೆನಿಸಿರಬಹುದಾದ ಶೈಲಿಯಲ್ಲಿ ಶ್ರೀ ಕೃಷ್ಣದೇವರ ವಿಶೇಷಾನುಗ್ರಹದಿಂದ ನಿರ್ಮಾಣವಾಯಿತು. ಆ ಚಿನ್ನದ ಪಾಲಕಿಯ ದೊಡ್ಡ ದಾನಿಗಳಲ್ಲಿ ಅಬ್ದುಲ್ಲಾ ಸಾಹೇಬರೂ ಒಬ್ಬರು.

ಅಬ್ದುಲ್ಲಾ ಸಾಹೇಬರ ಅತಿಥಿ ಸತ್ಕಾರ ಪ್ರಶಂಸನೀಯ. ಸಾಹೇಬರು ಗೋಕುಲಾಷ್ಟಮಿ, ಗಣೇಶ ಚತುರ್ಥಿ, ದೀಪಾವಳಿ, ನವರಾತ್ರಿ ಇಂತಹ ಹಬ್ಬ ಹರಿದಿನಗಳಲ್ಲಿ ಅವರ ಮನೆಯಲ್ಲೇ ಬ್ರಾಹ್ಮಣ ಅಡುಗೆಯವರನ್ನು ಕರೆಸಿ ಶ್ರೀ ಕೃಷ್ಣ ಮಠ ಮತ್ತು ಇತರ ಹಿಂದೂ ಮತೀಯರ ಮನೆಯಲ್ಲಿ ಏನು ಹಬ್ಬದ ಊಟ ಮಾಡುತ್ತಾರೋ ಅದೇ ರೀತಿಯಲ್ಲಿ ಮಾಡಿಸಿ, ಅವರ ಸಂಬಂಧಿಕರಿಗೆ, ನೆಂಟರಿಷ್ಟರಿಗೆ, ಸ್ನೇಹಿತರಿಗೆ, ಹಬ್ಬದ ಊಟವನ್ನು ಉಣಬಡಿಸುತ್ತಿದ್ದರಂತೆ…

ಹೀಗೆ ಅಪಾರ ದಾನಧರ್ಮ ಜನತಾ ಜನಾರ್ಧನನ ಸೇವೆ ಮಾಡಿ ಕಡೇಕಾಲದಲ್ಲಿ ಅವರ ಕೈ ಬರಿದಾಗುತ್ತಾ ಬಂತು. ಅವರ ಅಂತಿಮ ದಿನಗಳಲ್ಲಿ ಅವರು ತುಂಬಾ ಕಷ್ಟವನ್ನು ಅನುಭವಿಸಿದ್ದರಂತೆ." (ಪತ್ರ, ೩೦-೭-೨೦೦೫).

ಕಾರ್ಪೊರೇಶನ್ ಬ್ಯಾಂಕಿನ ಉದ್ಯೋಗದಲ್ಲಿದ್ದು ನಿವೃತ್ತರಾಗಿ ಈಗ ಉಡುಪಿಯಲ್ಲಿ ನೆಲೆಸಿರುವ ಶ್ರೀ ಎಸ್.ವಿ. ನಾಯಕ್ ಅಬ್ದುಲ್ಲಾ ಸಾಹೇಬರ ಕುರಿತು ಭಾವುಕರಾಗಿ ಮಾತನಾಡುತ್ತಾರೆ – "ಒಬ್ಬನ ಶ್ರೀಮಂತಿಕೆಯ ಮಾತು ಬಂದಾಗ, "ಅವನು ನಮ್ಮ ಅಬ್ದುಲ್ಲಾ ಸಾಹೇಬನಿಗಿಂತ, ಹೆಚ್ಚು ಶ್ರೀಮಂತನೋ" ಎಂದು ಕೇಳುತ್ತಿದ್ದರು... ಕಾರ್ಪೊರೇಶನ್ ಬ್ಯಾಂಕಿನ ಕೆಲವು ಉದ್ಯೋಗಿಗಳ ಪಾಲಿಗೆ ಅಬ್ದುಲ್ಲಾ ಸಾಹೇಬರು ಕಾರಣಿಕದ ವ್ಯಕ್ತಿಯಾಗಿದ್ದಾರೆ. ಕಷ್ಟ ಪರಿಹಾರವಾದರೆ ಬ್ಯಾಂಕಿನ ಉಡುಪಿ ಶಾಖೆಯಲ್ಲಿರುವ ಅಬ್ದುಲ್ಲಾ ಸಾಹೇಬರ ಭಾವಚಿತ್ರಕ್ಕೆ ಮಾಲೆ ಹಾಕುತ್ತೇನೆ ಎಂದು ಹರಕೆ ಹೊತ್ತವರೂ ಇದ್ದಾರೆ."

ಹಾಜಿ ಅಬ್ದುಲ್ಲಾ ಸಾಹೇಬರ ಸೋದರಿ ಲತೀಫಾ ಬೀಬಿ ಅವರ ಮೊಮ್ಮಗ ಡಾ| ಎಸ್.ಎ. ಹುಸೇನ್ ಅಂತಾರಾಷ್ಟ್ರೀಯ ಖ್ಯಾತಿಯ ಪಕ್ಷಿಶಾಸ್ತ್ರಜ್ಞರು.

ಉಡುಪಿಯ ಮುನಿಸಿಪಾಲಿಟಿ ಕಾರ್ಯಾರಂಭ ಮಾಡಿದ್ದು ೧೯೩೫ರಲ್ಲಿ ಅಬ್ದುಲ್ಲಾ ಸಾಹೇಬರು ಅದರ ಪ್ರಥಮ ಅಧ್ಯಕ್ಷರಾಗಿದ್ದರು. ಈಗ ಕರ್ನಾಟಕ ಸರಕಾರದ ಸಚಿವರಾಗಿರುವ ಡಾ|ವಿ. ಎಸ್. ಆಚಾರ್ಯರು ನೀಡಿದ ಸೂಚನೆಯ ಮೇರೆಗೆ, ನಾನು ಮತ್ತು ಶ್ರೀ ಡುಂಡಿರಾಜರು ನಗರಸಭೆಗೆ ಹೋಗಿ ವಿಚಾರಿಸಿದಾಗ ಅಬ್ದುಲ್ಲಾ ಸಾಹೇಬರ ಕುರ್ಚಿ ಕಾಣಸಿಕ್ಕಿತ್ತು. ಮೊದಲ ಅಧ್ಯಕ್ಷರಾಗಿ ಅಬ್ದುಲ್ಲಾ ಸಾಹೇಬರು ಕುಳಿತುಕೊಳ್ಳುತ್ತಿದ್ದ ಕುರ್ಚಿಯಲ್ಲೇ ಈಗಿನ ಅಧ್ಯಕ್ಷರು ಕುಳಿತುಕೊಳ್ಳುತ್ತಾರೆ. ಅಬ್ದುಲ್ಲಾ ಸಾಹೇಬರ ಭಾವಚಿತ್ರ ಉಡುಪಿ ನಗರಸಭೆಯಲ್ಲಿದೆ.



ಹಾಜಿ ಅಬ್ದುಲ್ಲಾ ಸಾಹೇಬರ ಕುರ್ಚಿ (೧೯೩೫ ರಲ್ಲಿ ಉಡುಪಿ ಮುನಿಸಿಪಾಲಿಯ ಅಧ್ಯಕ್ಷರಾಗಿದ್ದಾಗ)

ಕು.ಶಿ. ಹರಿದಾಸ ಭಟ್ಟರು ತನ್ನ ಲೇಖನವೊಂದರಲ್ಲಿ ಹಾಜಿ ಅಬ್ದುಲ್ಲಾ ಸಾಹೇಬರನ್ನು 'ಉಡುಪಿಯ ಅಕ್ಬರ' ಎಂದು ಕರೆದಿದ್ದಾರೆ. 'ಈಶ್ವರ ಅಲ್ಲಾ ತೇರೇ ನಾಮ್, ಸಬ್‌ಕೋ ಸನ್ಮತಿ ದೇ ಭಗವಾನ್' ಎಂಬುದು ಅಬ್ದುಲ್ಲಾ ಸಾಹೇಬರ ಪ್ರಾರ್ಥನೆಯಾಗಿತ್ತು.

ಅಬ್ದುಲ್ಲಾ ಸಾಹೇಬರು ನಿಧನರಾಗಿ ೭೦ ವರ್ಷಗಳಾದರೂ ಅವರು ದಂತಕತೆಗಳ ರೂಪದಲ್ಲಿ ಈಗಲೂ ಜೀವಂತವಾಗಿದ್ದಾರೆ ಎಂಬುದಕ್ಕೆ ಈಚೆಗೆ ಇನ್ನೂ ಒಂದು ಪುರಾವೆ ಸಿಕ್ಕಿತು. ನಾನು ಯಾವಾಗಲೂ ಔಷಧಿ ಖರೀದಿಸುವ ಅಂಗಡಿಯ ಕಾಮತರು ಮೊನ್ನೆ -"ಏನ್ ಮಾಷ್ಟ್ರೇ? ಇವತ್ತು ಲೇಟು?" ಅಂತ ಕೇಳಿದರು. ನಾನು ಹಾಜಿ ಅಬ್ದುಲ್ಲಾರ ಜೀವನ ಚರಿತ್ರೆ ಬರೆಯುತಿರುವ ಸಂಗತಿ ಹೇಳಿದೆ. ತಕ್ಷಣ ಕಾಮತರು

“ಓಹೋ ಅಬ್ದುಲ್ಲಾ ಸಾಹೇಬರಾ! ಅವರ ವಿಷಯ ನಮ್ಮ ಅಜ್ಜ ಬೆಳುವಾಯಿ ರಾಮ ಕಾಮತರು ಯಾವಾಗಲೂ ಮಾತಾಡುತ್ತಿದ್ದರು ಎಂದು ಈ ಕೆಳಗಿನ ಪ್ರಸಂಗವನ್ನು ಹೇಳಿದರು.

ಆಗ ಉಡುಪಿಯಿಂದ ಮಂಗಳೂರಿಗೆ ವಾಹನದಲಿ ಹೋಗಬೇಕಾದರೆ ಕಾರ್ಕಳ, ಬೆಳುವಾಯಿ, ಮೂಡಬಿದ್ರೆ ಮಾರ್ಗವಾಗಿ ಪ್ರಯಾಣಿಸಬೇಕಿತ್ತು. ಉಡುಪಿಯಲ್ಲಿ ಮೊದಲ ಕಾರನ್ನು ತಂದವರು ಎಂಬ ಕೀರ್ತಿಗೆ ಭಾಜನರಾಗಿದ್ದ ಅಬ್ದುಲ್ಲಾ ಸಾಹೇಬರು ಒಮ್ಮೆ ಮಂಗಳೂರಿಗೆ ಹೋಗುತ್ತಿದ್ದಾಗ ಅವರ ಕಾರು ಬೆಳುವಾಯಿಯಲ್ಲಿ ಹೊಂಡಕ್ಕೆ ಬಿತ್ತು. ಆಗ ಬೆಳುವಾಯಿ ರಾಮ ಕಾಮತರು ಜನರನ್ನು ಒಟ್ಟುಕೂಡಿಸಿ ಕಾರನ್ನು ಮೇಲಕ್ಕೆತ್ತಲು ಸಹಾಯ ಮಾಡಿದರು. ಅಬ್ದುಲ್ಲಾ ಸಾಹೇಬರು ಅವರ ಹೆಸರನ್ನು ಕೇಳಿ ಧನ್ಯವಾದ ಹೇಳಿ ಮುಂದಕ್ಕೆ ಹೋದರು.

ಈ ಘಟನೆಯಾಗಿ ನಾಲ್ಕು ವರ್ಷಗಳ ನಂತರ ಬೆಳುವಾಯಿ ರಾಮ ಕಾಮತರು ಬಡತನದಿಂದಾಗಿ ತಮ್ಮ ಊರನ್ನು ಬಿಟ್ಟು ಉಡುಪಿಗೆ ವಲಸೆ ಬಂದರು. ಯಾವುದಾದರೂ ಉದ್ಯೋಗ ಕೈಗೊಂಡು ಜೀವನ ಸಾಗಿಸುವ ಇರಾದೆಯಿಂದ ಉಡುಪಿಗೆ ಬಂದಿದ್ದ ಕಾಮತರಿಗೆ ಅವರ ಬಂಧುಗಳ್ಯಾರೂ ನೆರವು ನೀಡಲಿಲ್ಲ. ದಿಕ್ಕೇ ತೋಚದ ಪರಿಸ್ಥಿತಿಯಲ್ಲಿ ರಾಮ ಕಾಮತರು ಹಾಜಿ ಅಬ್ದುಲ್ಲಾರ ಬಳಿಗೆ ಹೋದರು. ಇವರನ್ನು ನೋಡುತ್ತಲೇ ಅಬ್ದುಲ್ಲಾ ಸಾಹೇಬರು ನಾಲ್ಕು ವರ್ಷಗಳ ಹಿಂದೆ ಬೆಳುವಾಯಿಯಲ್ಲಿ ಕಾರು ಹೊಂಡಕ್ಕೆ ಬಿದ್ದ ಪ್ರಸಂಗವನ್ನು ನೆನಪಿಸಿಕೊಂಡರು. ನನಗೆ ಸಹಾಯ ಮಾಡಿದ ನಿಮ್ಮನ್ನು ಮರೆಯುವುದು ಹೇಗೆ?” ಅನ್ನುತ್ತ ಬಂದ ಕಾರಣವನ್ನು ಕೇಳಿದರು. ಉದ್ಯೋಗ ಶುರು ಮಾಡುವವರೆಗೆ ಅವರ ಊಟಕ್ಕೆಂದು ಎರಡು ಮುಡಿ ಅಕ್ಕಿಯನ್ನು ಕೊಟ್ಟರು. ತಾವು ಕೇಳುವ ಮೊದಲೇ ಸಹಾಯ ಮಾಡಿದ ಅಬ್ದುಲ್ಲಾ ಸಾಹೇಬರೆಂಬ ಕೊಡುಗೈ ದಾನಿಯ ವಿಶಾಲ ಹೃದಯವನ್ನು ಕಂಡು ಬೆಳುವಾಯಿ ರಾಮ ಕಾಮತರು ಮೂಕವಿಸ್ಮಿತರಾಗಿದ್ದರು.

ರಾಮ ಕಾಮತರು ಕೊನೆಯ ಉಸಿರು ಇರುವ ತನಕವೂ ಅಬ್ದುಲ್ಲಾ ಸಾಹೇಬರ ಸಹಾಯವನ್ನು ಕೃತಜ್ಞತೆಯಿಂದ ನೆನಪು ಮಾಡಿಕೊಳ್ಳುತ್ತಿದದರು. ಈಗ ಅವರ ಮೊಮ್ಮಗ ಶ್ರೀ ಗಣಪತಿ ಕಾಮತರ ನೆನಪಿನಲ್ಲೂ ಅಬ್ದುಲ್ಲಾ ಸಾಹೇಬರು ಹೆಸರು ಹಸಿರಾಗಿ ಉಳಿದಿದೆ.

ಹುಡುಕಿದರೆ ಉಡುಪಿಯ ಮನೆ ಮನೆಗಳಲ್ಲೂ ಇಂತ ಘಟನೆಗಳು ಸಿಗಬಹುದು.

* * *

## ಅಧ್ಯಾಯ ೭. ಔದಾರ್ಯದ ಉರುಳಲ್ಲಿ

ಕಾರ್ನಾಡ್ ಸದಾಶಿವರಾಯರು ಮಂಗಳೂರಿನ ಕೋಟ್ಯಾಧೀಶರಾಗಿದ್ದವರು. ಸ್ವಾತಂತ್ರ್ಯ ಚಳುವಾಳಿಗಾಗಿ, ದಾನ-ಧರ್ಮಕ್ಕಾಗಿ ಮುಕ್ತ ಹಸ್ತದಿಂದ ಕೊಡುತ್ತ ಬಂದ ಅವರು ಕೊನೆಗಾಲದಲ್ಲಿ ರಿಕ್ತಹಸ್ತರಾದರು. ಅವರ ಜೀವನದ ಹಿನ್ನೆಲೆಯಲ್ಲಿ ಶಿವರಾಮ ಕಾರಂತರು ಬರೆದ ಕಾದಂಬರಿ. ‘ಔದಾರ್ಯದ ಉರುಳಲ್ಲಿ’(೧೯೪೭). ಈ ಕಾದಂಬರಿಯ ಮೂರನೆಯ ಮುದ್ರಣ ೧೯೮೨ರಲ್ಲಿ ಪ್ರಕಟವಾದಾಗ ಕಾರಂತರು ಮುನ್ನುಡಿಯಲ್ಲಿ ಹೀಗೆ ಬರೆದಿದ್ದಾರೆ – “ನಾನು ೧೯೨೧ರ ಸುಮಾರಿಗೆ ಅಸಹಕಾರ ಚಳವಳಕ್ಕೆ ಧುಮುಕಿ, ಸ್ವಾತಂತ್ರ್ಯ ಉದಯದ ತನಕ ಸಾಗಿದ ನನ್ನ ಸ್ವಂತ ಬದುಕಿನ ಮತ್ತು ಅದನ್ನು ಸುತ್ತುವರಿದ ಸಾಮಾಜಿಕ ವ್ಯಕ್ತಿ, ಸಂಸ್ಥೆ ರೀತಿ-ನೀತಿಗಳ ಅನುಭವಗಳ ಪ್ರತೀಕ ಇದು. ಆರಂಭದಲ್ಲಿ ನನ್ನ ಜತೆ ಅಲೆದಾಡಿದ ಮೂವರು ಮಿತ್ರರ ನೆನಪು ಅದರಿಂದ ಹುಟ್ಟಿದೆ. ಕುಂದಾಪುರ ತಾಲೂಕಿನಲ್ಲಿ ಮಿಂಚಿ ಮಾಯವಾದ ಅಸಹಕಾರದ ಪ್ರತಿಬಿಂಬ ಅದರಲ್ಲಿದೆ. ನನ್ನ ಹತಾಶ ಕನಸುಗಳೂ ಅದರಲ್ಲಿ ತುಂಬಿವೆ. ಬರಮನ್ನಣೆಗೆ ಪಾತ್ರರಾದ ಕಾರ್ನಾಡು ಸದಾಶಿವರಾಯರ ಬದುಕೂ, ಅವರ ದಮನಕ್ಕೇ ಕಾರಣರಾದ ಮುಂದೆ ರಾಜಕೀಯದಲ್ಲಿ ಮೆರೆದ ವ್ಯಕ್ತಿಗಳ ಚಿತ್ರಣವೂ ಇಲ್ಲಿದೆ. “ಮಂಗಳೂರಿನಿಂದ ಕಾರ್ನಾಡ್ ಸದಾಶಿವ ರಾಯರಂತೆ ಉಡುಪಿಯ ಹಾಜಿ ಅಬ್ದುಲ್ಲಾ ಸಾಹೇಬರೂ ‘ಔದಾರ್ಯದ ಉರುಳಲ್ಲಿ’

ಸಿಲುಕಿದವರು. ಅವರ ಕೊನೆಯ ದಿನಗಳ ಕತೆ, ಜಪಾನಿನ ಅಕಿರಾ ಕುರಸೋವನ 'ರಶೋಮನ್' ಚಲನಚಿತ್ರದ ಕತೆಯಂತೆ ನಿಗೂಢಕತೆ, ಉತ್ತರ ಸಿಗದ ಒಗಟಿನ ಕತೆ.



ಮಧ್ಯದಲ್ಲಿ ಕುಳಿತಿರುವವರು ಹಾಜಿ ಅಬ್ದುಲ್ಲಾ ಸಾಹೇಬರು (೧೯೩೧)

ಎಂ.ವಿ. ಕಾಮತರು ತನ್ನ 'ಕಾರ್ಪೊರೇಶನ್ ಬ್ಯಾಂಕ್ – ಎ ಕಾರ್ಪೊರೇಟ್ ಜರ್ನಿ' ಗ್ರಂಥದಲ್ಲಿ ಹಾಜಿ ಅಬ್ದುಲ್ಲಾ ಸಾಹೇಬರ ಕೊನೆಯ ದಿನಗಳ ಕುರಿತು ಹೀಗೆ ಬರೆದಿದ್ದಾರೆ. "ಹಾಜಿ ಅಬ್ದುಲ್ಲಾ ಸಾಹೇಬರ ಕೆನರಾ ಬ್ಯಾಂಕಿಂಗ್ "ಹಾಜಿ ಅಬ್ದುಲ್ಲಾ ಸಾಹೇಬರ ಕೆನರಾ ಬ್ಯಾಂಕಿಂಗ್ ಕಾರ್ಪೊರೇಶನ್ ಲಿ.ನ ಆರಂಭಕಾಲದಿಂದ ೧೯೨೯ ರವರೆಗೆ ಅದರ ಅಧ್ಯಕ್ಷರಾಗಿದ್ದರು. ೧೯೨೯ ರಲ್ಲಿ ಅವರು ಅಧಿಕಾರ ತ್ಯಜಿಸಬೇಕಾಯಿತು. ಮುಂದೆ ಕಷ್ಟದ ದಿನಗಳು ಅವರನ್ನು ಸುತ್ತುವರಿದುವು. ಅವರು ಸಾಲದಲ್ಲಿ ಮುಳುಗಿಹೋದರು. ಅವರು ಆರ್ಥಿಕ ಸಮಸ್ಯೆಗೆ ಕಾರಣವೇನು ಎಂಬ ಪ್ರಶ್ನೆಗೆ ವಿವರಣೆಗಳು ಲಭ್ಯವಿಲ್ಲ. ಅವರ ಖಾಸಗಿ ಸಂಸ್ಥೆಯ ಉದ್ಯೋಗಿಗಳು ದುರುದ್ದೇಶದ ಬಗ್ಗೆ ಅಸ್ಪಷ್ಟ ಸೂಚನೆಗಳು ಸಿಗುತ್ತವೆ. ಆದರೆ ಅದನ್ನು ನಾವು ಗಂಭೀರವಾಗಿ ಪರಿಗಣಿಸಬೇಕೆಂದಿಲ್ಲ. ಹಾಜಿ ಅಬ್ದುಲ್ಲಾ ಅವರ ಔದಾರ್ಯ ಅವರ ವಿವೇಕವನ್ನು ಮೀರಿತು ಎಂದು ಕೆಲವರು ಅಭಿಪ್ರಾಯ ಪಡುತ್ತಾರೆ. ಅವರು ಬ್ಯಾಂಕಿನಿಂದ 'ಓವರ್‌ಡ್ರಾಫ್ಟ್' ನಡೆದಿದ್ದರು. ಒಂದು ಹಂತದಲ್ಲಿ ಅವರು ಬ್ಯಾಂಕಿಗೆ ದೊಡ್ಡ ಮೊತ್ತ ಕೊಡಲು ಬಾಕಿ ಇತ್ತು. ಅವರಿಗೆ 'ಓವರ್‌ಡ್ರಾಫ್ಟ್' ಸೌಲಭ್ಯವನ್ನು ನಿರಾಕರಿಸುವುದು ಬ್ಯಾಂಕಿನ ಆಡಳಿತ ವರ್ಗಕ್ಕೆ ಸಾಧ್ಯವಿರಲಿಲ್ಲ. ಯಾಕೆಂದರೆ ಅವರು ಬ್ಯಾಂಕಿನ ಸ್ಥಾಪಕ ಅಧ್ಯಕ್ಷರಾಗಿದ್ದರು. ಅವರ ಪ್ರಾಮಾಣಿಕತೆ, ವಿಶ್ವಾಸಾರ್ಹತೆ ಪ್ರಶ್ನಾತೀತವಾಗಿತ್ತು. ಹಾಜಿ ಅಬ್ದುಲ್ಲಾ ಅವರನ್ನು ಆರ್ಥಿಕ ದುಸ್ಥಿತಿಯಿಂದ ಮೇಲೆತ್ತುವುದು ಸಾಧ್ಯವಿಲ್ಲವೆಂದು ೧೯೩೫ ರ ಆರಂಭದಲ್ಲಿ ಸ್ಪಷ್ಟವಾಯಿತು. ಏನಾದರೊಂದು ಇತ್ಯರ್ಥಕ್ಕೆ ಬರುವುದು ಅನಿವಾರ್ಯವಾಗಿತ್ತು. ಕಠಿಣ ನಿರ್ಧಾರದಿಂದ ತಪ್ಪಿಸಿಕೊಳ್ಳುವುದು ಸಾಧ್ಯವಿರಲಿಲ್ಲ. ಬ್ಯಾಂಕಿನ ಅಧಿಕಾರಿಗಳು ಗೊಂದಲಕ್ಕೀಡಾದರು. ಒಂದೆಡೆ, ಅವರಿಗೆ ಹಾಜಿ ಅಬ್ದುಲ್ಲಾ ಅವರ ಕುರಿತು ಪೂಜ್ಯಭಾವವಿತ್ತು. ಇನ್ನೊಂದೆಡೆ, ಖಾಸಗಿ ಹಿತಾಸಕ್ತಿಗಳನ್ನು ಬದಿಗಿಟ್ಟು, ಬ್ಯಾಂಕಿನ ಆರ್ಥಿಕ ಸ್ಥಿತಿಯನ್ನು ರಕ್ಷಿಸಬೇಕಿತ್ತು. ಬ್ಯಾಂಕಿನ ಅಧಿಕಾರಿಗಳು ಹಾಗೂ ಹಾಜಿ ಅಬ್ದುಲ್ಲಾ ಸಾಹೇಬರ ನಡುವೆ ನಡೆದ ಮಾತುಕತೆಗಳ ದಾಖಲೆಗಳು ಲಭ್ಯವಿಲ್ಲ. ಆದರೆ ಅವು ಸಂತೋಷದಾಯಕವಾಗಿರಲಿಲ್ಲ ಎಂಬುದು ಸ್ಪಷ್ಟ. ಮಾತುಕತೆ ಎರಡು ಕಡೆಯವರಿಗೂ ನೋವನ್ನುಂಟು ಮಾಡಿರಬೇಕು. ಆದರೆ ಮಾತುಕತೆ ಆಗಲೇಬೇಕಿತ್ತು.



ಸ್ವದೇಶಾಭಿಮಾನಿ ಪತ್ರಿಕೆಯಲ್ಲಿ ಶ್ರದ್ಧಾಂಜಲಿ (೧೯೩೫)

ಅರಮನೆಯಂಥ ಮನೆಯಲ್ಲಿ ವಾಸ ಮಾಡುತ್ತಿದ್ದ ಕೊಡುಗೈ ದಾನಿಯಾಗಿದ್ದ ಹಾಜಿ ಅಬ್ದುಲ್ಲಾ ಅವರು ದಿವಾಳಿಯಾಗಿದ್ದರು. ತನ್ನ ಜೀವನದಲ್ಲಾದ ಇಳಿತ ಅವರಿಗೆ ಆಘಾತವನ್ನುಂಟು ಮಾಡಿರಬಹುದು. ೧೯೩೫ರ ಆಗಸ್ಟ್ ೧೨ ರಂದು ಬೆಳಿಗ್ಗೆ ಹಾಸಿಗೆಯಲ್ಲಿದ್ದ ಅಬ್ದುಲ್ಲಾ ಸಾಹೇಬರು ಪ್ರಜ್ಞಾಹೀನರಾಗಿದ್ದರು. ಡಾಕ್ಟರುಗಳನ್ನು ಕರೆಸಲಾಯಿತು. ಅವರನ್ನು ಉಳಿಸುವ ಎಲ್ಲ ಪ್ರಯತ್ನಗಳೂ ವಿಫಲವಾದವು. ಅದು ಶ್ರೇಷ್ಠ ಚೇತನವೊಂದರ ದುರಂತವಾಗಿತ್ತು. ಸಾಯುವ ಕಾಲಕ್ಕೆ ಅವರಿಗೆ ೫೩ ವರ್ಷವಾಗಿತ್ತು.'' (ಎಂ. ವಿ. ಕಾಮತ್, ೧೯೯೭)

ಹಾಜಿ ಅಬ್ದುಲ್ಲಾರ ದುರಂತಕ್ಕೆ ಅವರ ಖಾಸಗಿ ವ್ಯಾಪರ ಸಂಸ್ಥೆಯಲ್ಲಿದ್ದ ಒಬ್ಬ ವ್ಯಕ್ತಿಯ ವಿಶ್ವಾಸ ದ್ರೋಹವೂ ಮುಖ್ಯ ಕಾರಣ ಎಂದು ಶ್ರೀ ನಸೀಬ್‌ಸಾಹೇಬರು ನನಗೆ ನೀಡಿದ ಸಂದರ್ಶನದಲ್ಲಿ ತಿಳಿಸಿದರು.

ಕು.ಶಿ. ಹರಿದಾಸ ಭಟ್ಟರ ವಿವರಿಸಿರುವಂತೆ, ''ನಂಬಿ ಕೆಟ್ಟವರಿಲ್ಲವೋ'' ಎಂದು ಭಗವಂತನ ಬಗ್ಗೆ ಹೇಳಬಹುದೇ ವಿನಾ ಮನುಷ್ಯನ ಬಗ್ಗೆ ಹೇಳುವಂತಿಲ್ಲ, ಎಂಬುದನ್ನು ಅಬ್ದುಲ್ಲಾ ಸಾಹೇಬರ ಜೀವನದ ದಿನಗಳು ಸಾರುತ್ತವೆ. ಅದರಲ್ಲೂ ವ್ಯವಹಾರದಲ್ಲಿರುವ ಮನುಷ್ಯ ಇಷ್ಟೊಂದು ನಿರ್ಬೋಧ (innocent) ನಾಗಬಾರದು ಎಂತಲೂ ಅವರ ಜೀವನದ ಪಾಠ ಹೇಳುತ್ತದೆ. ನಿರ್ಬೋಧತೆಯಂಥ ಬಾಲಸ್ವಭಾವ ದೈವತ್ವಕ್ಕೆ ತೀರ ಸಮೀಪ ಎನ್ನುತ್ತಾರೆ. ಆದರೆ ಪ್ರಪಂಚ ಒಂದು ನಿಷ್ಠುರವಾದ ಸತ್ಯ; ಅಲ್ಲಿ ಪ್ರತಿಯೊಂದು ವ್ಯವಹಾರಕ್ಕೂ ಅದರದರ ವ್ಯಾವಹಾರಿಕ ಧರ್ಮಕರ್ಮಗಳುಂಟು. ಶ್ರೀಮಂತಿಕೆಯನ್ನು ಬಹು ಲಘುವಾಗಿ ಧರಿಸಿಕೊಂಡು ಅಬ್ದುಲ್ಲಾ ಸಾಹೇಬರು ಎಲ್ಲರೂ ಒಳ್ಳೇಯವರೆಂಬ ತತ್ವದ ಮೇಲೆ ವ್ಯವಹಾರ ನಡೆಸುತ್ತಿದ್ದರು. ಹಾಗೆ ಎಷ್ಟೋ ವರ್ಷ ನಡೆದೂ ನಡೆಯಿತು... ಇಂಥಾ ಕರುಣಾಹೃದಯ ವ್ಯಾಪಾರದ ಪಟ್ಟಿನಲ್ಲಿ ಅದಾವುದೋ ದುರ್ಮುಹೂರ್ತದಲ್ಲಿ ಕಷ್ಟನಷ್ಟಗಳಿಗೀಡಾದದ್ದು ಸ್ವಾಭಾವಿಕ. ನೂರಾರು ಮಂದಿಗೆ ಸಪಾತ್ರ-ಅಪಾತ್ರ ಭೇದವಿಲ್ಲದೆ ದಾನ ನೀಡಿದ ಕೊಡುಗೈ ಬರಿದಾಗಿ ತಾನೇ ಹುಟ್ಟು ಹಾಕಿದ ಬ್ಯಾಂಕಿನ ಕಂತಿನ ದೇಣಿಗೆಗೆ ಅಡಿಗೈ ಆಗುವ ದುರ್ದಿನವೂ ಒದಗಿತು. ನಟಿಸಿ ಸಹಿಸಿ ಜೀವ ಬೇಸತ್ತಾಗ ಬದುಕಿನಿಂದಲೇ ವಿಮುಖವಾಯಿತು. ತಾನು ಯಾವುದನ್ನು ಪುರುಷಾರ್ಥ ಸಾಧನೆಯೆಂದು ಮಾಡಿದೆನೋ ಆ ಮಾರ್ಗದಲ್ಲಿ ಯಃಕಶ್ಚಿತ್ ವಾಣಿಜ್ಯ ವ್ಯಾಪಾರ ಪತ್ರಗಳೇ ಗೆಲ್ಲುವುದಾದರೆ ತಾನು ಸೋಲುವುದು ವಿಶೇಷವಲ್ಲ, ಆದರೆ ಈ ಸೋಲೇ ಬದುಕಿನ ನಿಜವಾದ ಗೆಲವೆಂದು ಕೊನೆ ಗಳಿಗೆಯ ತನಕವೂ ಸಾಧಿಸಿ, ಬಹುಶಃ ಯಾವ ಪಶ್ಚಾತ್ತಾಪವೂ ಇಲ್ಲದೆ ತನ್ನ ಕೈಯಿಂದಲೇ ಅಸುನೀಗಿದ ದೇವತಾ ಮನುಷ್ಯ ಹಾಜಿ ಅಬ್ದುಲ್ಲಾ. ಊರಿನ ಸಮಸ್ತರಿಗೂ ಒಳ್ಳಿತನ್ನೇ ಹಾರೈಸಿ ದಾನಶೂರತ್ವವನ್ನು ಮೆರೆದು ಶ್ರೀಮಂತ ಜೀವನ ನಡೆಸಿದ ಇಂಥ ಉದಾರ ಚರಿತರು ಬಹಳ ಮಂದಿ ಇನ್ನು ಮುಂದೆ ಬರಲಾರರು. ''(ಮುರಳೀಧರ ಉಪಾಧ್ಯ, ಎಚ್. ಡುಂಡಿರಾಜ್ (ಸಂ) ೨೦೦೧)

‘ವಿನಾದೈನ್ಯೇನ ಜೀವನಂ, ಅನಾಯಾಸೇನ ಮರಣಂ’ ಎಂಬುದು ನಮ್ಮ ಹಿರಿಯರ ಪ್ರಾರ್ಥನೆ. ದೈನ್ಯದ ಜೀವನ ಬೇಡ ಎಂದು ನಿರ್ಧರಿಸಿದ ಕುಸುಮದಂತೆ ಮೃದು ವ್ಯಕ್ತಿತ್ವದ ಹಾಜಿ ಅಬ್ದುಲ್ಲಾ ಸಾಹೇಬರು ವಜ್ರದಂತೆ ಕಠಿಣವಾದ ನಿರ್ಧಾರ ತೆಗೆದುಕೊಂಡರು. ಹಾಜಿ ಅಬ್ದುಲ್ಲಾರ ಶವಯಾತ್ರೆ ಉಡುಪಿ ಇತಿಹಾಸದಲ್ಲಿ ದಂತಕತೆಯಾಗಿ ಉಳಿದಿದೆ. ಉಡುಪಿಯ ಬೀದಿ, ಬಯಲು, ಕಾಡುಗಳಿಂದ, ಪರ ಊರುಗಳಿಂದ ಓಡೋಡಿ ಬಂದ ಸಾವಿರಾರು ಜನ ಅಗಲಿದ ‘ದಾನಶೂರ ಕರ್ಣ’ನಿಗಾಗಿ ಕಣ್ಣೀರು ಸುರಿಸಿದರು. ‘ಇವನ ನಮ್ಮವ, ಇವ ನಮ್ಮವ’ ಎಂದು ಅಭಿಮಾನಪಟ್ಟರು, ಅಂತಿಮ ನಮನ ಸಲ್ಲಿಸಿದರು.

ಮಂಗಳೂರಿನ ‘ಸ್ವದೇಶಾಭಿಮಾನಿ’ ಪತ್ರಿಕೆ ತನ್ನ ೧೯೩೫ರ ಆಗಸ್ಟ್ ೧೬ರ ಸಂಚಿಕೆಯಲ್ಲಿ ‘ಕಾರ್ಪೊರೇಶನ್ ಬ್ಯಾಂಕಿನ ಜನಕರೂ, ಹಿತೈಷಿಗಳೂ ಕಾಲವಶರಾದರು’ ಎಂದು ಪೂರ್ಣ ಪುಟದ ಶ್ರದ್ಧಾಂಜಲಿ ಲೇಖನ ಪ್ರಕಟಿಸಿತು. ಹಾಜಿ ಅಬ್ದುಲ್ಲಾ ಸಾಹೇಬರು ಸರ್ವಧರ್ಮ ಸಮಭಾವದ, ಸಹಬಾಳ್ವೆಯ ಆದರ್ಶವನ್ನು ಕೊಂಡಾಡಿತು.

ತನ್ನ ‘ವಿಕ್ರಮಾರ್ಜುನ ವಿಜಯ’ದ ಕೊನೆಯಲ್ಲಿ ಪಂಪ ಅರ್ಜುನನ ಬದಲು ಕರ್ಣನನ್ನು ಸುತ್ತಿಸುತ್ತಾನೆ –

“ನೆನೆಯದಿರಣ್ಣ ಭಾರತದೊಳಿಂ ಪೆರರಾರುಮನ್,
ಒಂದೆ ಚಿತ್ತದಿಂ
ನೆನೆವೊಡೆ ಕರ್ಣನಂ ನೆನೆಯ, ಕರ್ಣನೊಳಾರ್ದೊರೆ! ಕರ್ಣನೇರು,
ಕರ್ಣನ ಕಡುಗನ್ನಿ ಕರ್ಣನಳವು, ಅಂಕದ ಕರ್ಣನ ಚಾಗ ಮೆಂದು
ಕರ್ಣನ ಪಡೆಮಾತಿನೊಳ್ ಪುದಿದು ಕರ್ಣರಸಾಯನಮಲ್ತೆ ಭಾರತಂ”

ಕರ್ಣನ ಹೆಸರಿನ ಬದಲು ಅಬ್ದುಲ್ಲಾ ಸಾಹೇಬರ ಹೆಸರು ಸೇರಿಸಿದರೆ ಇದು ಅವರ ಚರಮಗೀತವಾಗುತ್ತದೆ. ದೊರೆತನ, ಏರು, ನನ್ನಿ, ಅಳವು, ಜಾಗ – ಇವೆಲ್ಲಾ ಅಬ್ದುಲ್ಲಾ ಸಾಹೇಬರ ವ್ಯಕ್ತಿತ್ವವನ್ನು ಹಿಡಿದಿಡುವ
ಶಬ್ದಗಳು. **“ಒಂದೆ ಚಿತ್ತದಿಂ ನೆನವೊಡೆ ಅಬ್ದುಲ್ಲಾ ಸಾಹೇಬರಂ ನೆನೆಯ…”**

ಹಾಜಿ ಅಬ್ದುಲ್ಲಾ ಸಾಹೇಬರು ಕಾರ್ಪೊರೇಶನ್ ಬ್ಯಾಂಕ್ ಎಂಬ ನಿರುತರ ಚಿಗುರುವ ಅಶ್ವತ್ಥವನ್ನು ನೆಟ್ಟು ಚಿರಂಜೀವಿಯಾಗಿದ್ದಾರೆ. ಅವರನ್ನು ನೆನಪಿಸಿಕೊಂಡು ಮಲಗಿದಾಗ ಉಡುಪಿಯ ರಥಬೀದಿಯ ಕನಸು – ಶ್ರೀ ಮಧ್ವಾಚಾರ್ಯರು ಅನಂತೇಶ್ವರ ದೇವಸ್ಥಾನದ ಜಗಲಿಯಲ್ಲಿ ಕುಳಿತುಕೊಂಡು ‘ತಂತ್ರಸಾರ’ ಗ್ರಂಥ ಬರೆಸುತ್ತಿದ್ದಾರೆ. ಶ್ರೀ ವಾದಿರಾಜ ಸ್ವಾಮಿಗಳು ಕನಕದಾಸರಿಗೆ ಪವಾಡ ಸಾಧ್ಯವಾಗಲಿ ಎಂದು ಹಾರೈಸುತ್ತಿದ್ದಾರೆ. ಕನಕದಾಸರು ಕುಲಕುಲವೆಂದು ಹೊಡೆದಾಡುವಿರಿ ನಿಮ್ಮ ಕುಲದ ನೆಲೆಯಲೇನಾದರೂ ಬಲ್ಲಿರಾ?’ ಎಂದು ಹಾಡುತ್ತ ಕನಕಗೋಪುರವನ್ನು ನೋಡಿ ಮುಗುಳ್ನಗುತ್ತಿದ್ದಾರೆ. ಎಸ್.ಯು. ಪಣಿಯಾಡಿಯವರು. ರಥಬೀದಿಯ ‘ಅಜ್ಜ’ನಲ್ಲಿಗೆ (ಅನಂತೇಶ್ವರಕ್ಕೆ) ದಲಿತರೊಡನೆ ಹೊರಟಿದ್ದಾರೆ. ಹಾಜಿ ಅಬ್ದುಲ್ಲಾ ಸಾಹೇಬರು ಕಾರ್ಪೊರೇಶನ್ ಬ್ಯಾಂಕಿನ ಂಖಿಒ ನ್ನು ರಾಜಗಾಂಭೀರ್ಯದಿಂದ ನೋಡುತ್ತಿದ್ದಾರೆ. ಪುರಂದರದಾಸರು “ಗಿಳಿಯು ಪಂಜರದೊಳಿಲ್ಲ…” ವಿಷಾದದ ದನಿಯಲ್ಲಿ ಗುಣುಗುಣಿಸುತ್ತಿದ್ದಾರೆ.

* * *

# ಅನುಬಂಧ ೧. ಕಾರ್ಪೊರೇಶನ್ ಬ್ಯಾಂಕಿನ ಅಧ್ಯಕ್ಷರುಗಳು

೧. ಹಾಜಿ ಅಬ್ದುಲ್ಲಾ ಸಾಹೇಬ್ (೧೯೦೬-'೨೯)

೨. ಎಚ್. ಕೇಶವ ಪೈ (೧೯೨೩-'೩೪)

೩. ಡಾ.ಯು. ಸುಂದರರಾಮ್ ಪೈ (೧೯೩೪-'೫೯)

೪. ಡಾ. ಯು. ಪದ್ಮನಾಭ ಮಲ್ಯ (೧೯೫೯-೬೦)

೫. ಬಿ.ವೈಕುಂಠ ಬಾಳಿಗ (೧೯೬೦-೬೧)

೬. ಯು. ಗೋಪಾಲ ಕೃಷ್ಣ ನಾಯಕ್ (೧೯೬೧-'೭೧)

೭. ಎಂ.ಆರ್. ಕಾಮತ್ (೧೯೭೧-'೭೫)

೮. ಎನ್. ಎನ್. ಪೈ (೧೯೭೫-'೮೧)

೯. ಜೆ. ಬಿ. ಕಾಮತ್ (೧೯೮೧- '೮೭)

೧೦. ವೈ. ಎಸ್. ಹೆಗ್ಡೆ (೧೯೮೩-'೯೦)

೧೧. ಕೆ. ಆರ್. ರಾಮಮೂರ್ತಿ (೧೯೯೨-'೯೭)

೧೨. ಆರ್.ಎಸ್. ಹೂಗಾರ್ (೧೯೯೭-೨೦೦೦)

೧೩. ಕೆ. ಚೆರಿಯನ್ ವರ್ಗೀಸ್ (೨೦೦೦-'೦೪)

೧೪. ವಿ ಕೆ. ಚೋಪ್ರಾ (೨೦೦೪-)

* * *

# ಅನುಬಂಧ ೨. ಕಾರ್ಪೊರೇಶನ್ ಬ್ಯಾಂಕ್ ನೂರು ವರ್ಷದ ಇತಿಹಾಸದಲ್ಲಿ ಕೆಲವು ಮಹತ್ತ್ವದ ಘಟನೆಗಳು

೧೧ ಫೆಬ್ರವರಿ ೧೯೦೬; ೧೮ ಫೆಬ್ರವರಿ ೧೯೦೬; ೧೯ ಫೆಬ್ರವರಿ ೧೯೦೬ : ಬ್ಯಾಂಕಿಂಗ್ ಸಂಸ್ಥೆಯೊಂದನ್ನು ಸ್ಥಾಪಿಸುವ ಕುರಿತು ಉಡುಪಿಯ ಪುರ ಪ್ರಮುಖರ ಸಭೆ; ದ ಕೆನರಾ ಬ್ಯಾಂಕಿಂಗ್ ಕಾರ್ಪೊರೇಶನ್ (ಉಡುಪಿ) ಲಿಮಿಟೆಡ್ ಎಂಬ ಹೆಸರಿನಲ್ಲಿ ಹಾಜಿ ಅಬ್ದುಲ್ಲಾ ಹಾಜಿ ಖಾಸಿಂ ಸಾಹೇಬ್ (ಸ್ಥಾಪಕಾಧ್ಯಕ್ಷರ ಆಗಿನ ಹೆಸರು) ಅವರಿಂದ ಸಾರ್ವಜನಿಕರಿಗೆ ನೋಟೀಸ್ ಬಿಡುಗಡೆ.

೧೨ ಮಾರ್ಚ್ ೧೯೦೬ : ದ ಕೆನರಾ ಬ್ಯಾಂಕಿಂಗ್ ಕಾರ್ಪೊರೇಶನ್ ಉಡುಪಿ ಲಿಮಿಟೆಡ್ ಎಂಬ ಹೆಸರಿನಲ್ಲಿ ಬ್ಯಾಂಕಿನ ಜನನ

೫ ಏಪ್ರಿಲ್ ೧೯೦೬: ಮೊದಲ ಸಾಲ ನೀಡಿಕೆ ಜನಾಬ್ ಶಿದ್ದಿ ಬಾಪು ಸಾಹೇಬ್ ಅವರಿಗೆ ರೂ ೧೦೦ ಮೊದಲ ಸಾಲ ನೀಡಿಕೆ.

೧೩ ಅಕ್ಟೋಬರ್ ೧೯೦೬ : ಮೊದಲ ಠೇವಣಿ ರೂ. ೧೦೦ – ಶ್ರೀ ಬಿ. ನಾರಾಯಣ ರಾವ್ ಅವರಿಂದ

೧೮ ಮೇ ೧೯೨೩ : ಕುಂದಾಪುರದಲ್ಲಿ ಬ್ಯಾಂಕಿನ ಮೊದಲ ಶಾಖೆಯ ಆರಂಭ



ಬ್ಯಾಂಕಿನ ಬೆಳ್ಳಿ ಹಬ್ಬ. ಬಲದಿಂದ ನಾಲ್ಕನೆಯವರಾಗಿ ಹಾಜಿ ಅಬ್ದುಲ್ಲಾ ಸಾಹೇಬರು (೨೪.೫.೧೯೩೧)

೨೪ ಮೇ ೧೯೩೧ : ಬ್ಯಾಂಕಿನ ಬೆಳ್ಳಿ ಹಬ್ಬದ ಆಚರಣೆ

೧೪ ನವೆಂಬರ್ ೧೯೩೪ : ಬ್ಯಾಂಕಿಂಗ್ ಸೌಲಭ್ಯವಿಲ್ಲದ ಅಂದಿನ ಕೂರ್ಗ್ ಜಿಲ್ಲೆಯಲ್ಲಿ ಬ್ಯಾಂಕಿನ ಮಡಿಕೇರಿ ಶಾಖೆಯ ಪ್ರಾರಂಭ

೩ ಜೂನ್ ೧೯೩೭ : ಆರ್.ಬಿ.ಐ. ಕಾಯಿದೆ ೧೯೩೪ರ ಎರಡನೇ ಶೆಡ್ಯೂಲಿನಲ್ಲಿ ಬ್ಯಾಂಕಿನ ಸೇರ್ಪಡೆ

೫ ಅಕ್ಟೋಬರ್ ೧೯೩೭ : ಮದ್ರಾಸ್ ಸರಕಾರದ ಮಾನ್ಯ ಸಚಿವ ವಿ.ವಿ.ಗಿರಿಯವರಿಂದ ಮಂಗಳೂರಿನಲ್ಲಿ ಭದ್ರತಾ ಕೋಶಗಳ ಉದ್ಘಾಟನೆ

ಏಪ್ರಿಲ್ ೧೯೩೯ : ಬ್ಯಾಂಕಿನ ಹೆಸರಿನಿಂದ ಉಡಿಪಿ ಎಂಬುದನ್ನು ಕೈಬಿಟ್ಟು ದಿ ಕೆನರಾ ಬ್ಯಾಂಕಿಂಗ್ ಕಾರ್ಪೊರೇಶನ್ ಲಿಮಿಟೆಡ್ ಎಂಬುದಾಗಿ ಹೆಸರು ಬದಲಾವಣೆ

೮ ಮೇ ೧೯೫೩ : ಮೈಸೂರಿನ ಮಾನ್ಯ ಮುಖ್ಯ ಮಂತ್ರಿ ಕೆಂಗಲ್ ಹನುಮಂತಯ್ಯನವರು ಬ್ಯಾಂಕಿಗ್ ಭೇಟಿ ನೀಡಿದರು.

೨೩ ಜನವರಿ ೧೯೫೪ : ಉಡುಪಿಯ ಎಂ.ಜಿ. ಎಂ. ಕಾಲೇಜಿಗೆ ಬ್ಯಾಂಕ್ ದಾನವಾಗಿ ನೀಡಿದ ಕೆನರಾ ಬ್ಯಾಂಕಿಂಗ್ ಕಾರ್ಪೊರೇಶನ್ ಗ್ರಂಥಾಲಯದ ಉದ್ಘಾಟಮೆ – ಪೇಜಾವರ ಮಠದ ಶ್ರೀ ವಿಶ್ವೇಶ್ವತೀರ್ಥ ಸ್ವಾ,ಮೀಜಿಗಳವರಿಂದ

೧೨ ಮಾರ್ಚ್ ೧೯೫೭ ರಿಸರ್ವ್ ಬ್ಯಾಂಕ್ ಗವರ್ನರ್ ಸರ್ ಬೆನಗಲ್ ರಾಮರಾವ್ ಅವರ ಅಧ್ಯಕ್ಷತೆಯಲ್ಲಿ ಬ್ಯಾಂಕಿನ ಸುವರ್ಣ ಮಹೋತ್ಸವ

೧೯೬೧ : ರಿಸರ್ವ್ ಬ್ಯಾಂಕಿನ ಆದೇಶದ ಅನುಸಾರವಾಗಿ ಕೆನರಾ ಬ್ಯಾಂಕಿನ ಕಾರ್ಪೊರೇಶನ್ ಲಿಮಿಟೆಡ್‌ನೊಳಗೆ ಬ್ಯಾಂಕ್ ಆಫ್ ಸಿಟಿಜನ್ಸ್ ಲಿಮಿಟೆಡ್, ಬೆಳಗಾಂ ಇದರ ವಿಲೀನ; ಉಡುಪಿಯಿಂದ ಮಂಗಳೂರಿಗೆ ಬ್ಯಾಂಕಿನ ಆಡಳಿತ ಕಚೇರಿಯ ವರ್ಗಾವಣೆ

೧೯೭೨ : ಎರಡನೆಯ ಸಲ ಬ್ಯಾಂಕಿನ ಹೆಸರು ಬದಲಾವಣೆ ದಿ ಕೆನರಾ ಬ್ಯಾಂಕಿಂಗ್ ಕಾರ್ಪೊರೇಶನ್ ಲಿಮಿಟೆಡ್ ಎಂಬುದು ಕಾರ್ಪೊರೇಶನ್ ಬ್ಯಾಂಕ್ ಲಿಮಿಟೆಡ್ ಎಂದು ಬದಲಾಯಿತು.

೧೭ ಏಪ್ರಿಲ್ ೧೯೭೬ ; ಬ್ಯಾಂಕಿನ ಪ್ಲಾಟಿನಂ ಜುಬಿಲಿ ಆಚರಣೆ, ಉಪರಾಷ್ಟ್ರಪತಿ ಶ್ರೀ ಬಿ.ಡಿ.ಜತ್ತಿಯವರಿಂದ ಬ್ಯಾಂಕಿನ ನೂತನ ಆಡಳಿತ ಕಚೇರಿಯ ಕಟ್ಟಡದ ಉದ್ಘಾಟನೆ; ಕೆನರಾ ಬ್ಯಾಂಕಿನ ಅಧ್ಯಕ್ಷ ಹಾಗೂ ಆಡಳಿತ ನಿರ್ದೇಶಕ ಶ್ರೀ ಸಿ. ಇ. ಕಾಮತ್ ಅವರಿಂದ ಬ್ಯಾಂಕಿನ ಗೃಹ ಪತ್ರಿಕೆ 'ಕ್ಷೇಮ'ದ ಪ್ರಥಮ ಸಂಚಿಕೆಯ ಬಿಡುಗಡೆ

೧೮ ಏಪ್ರಿಲ್ ೧೯೭೬ : ರಿಸರ್ವ್ ಬ್ಯಾಂಕ್ ಗವರ್ನರ್ ಶ್ರೀ ಕೆ.ಆರ್. ಪುರಿ ಅವರಿಂದ ಬ್ಯಾಂಕಿನ ಸಿಬ್ಬಂದಿ ತರಬೇತಿ ಕಾಲೇಜಿನ ಉದ್ಘಾಟನೆ

೧೯೭೮ : ಅತ್ಯುತ್ತಮ ರಫ್ತು ಉತ್ತೇಜನಕ್ಕಾಗಿ ಭಾರತ ಸರಕಾರದ ಅರ್ಹತಾ ಪತ್ರ

೧೫ ಏಪ್ರಿಲ್ ೧೯೮೦ : ಬ್ಯಾಂಕಿನ ರಾಷ್ಟ್ರೀಕರಣ

೧೯೮೧ : ಜೆಮ್ ಎಂಡ್ ಜ್ಯುವೆಲ್ಲರಿ ಎಕ್ಸ್‌ಪೋರ್ಟ್ ಕಮಿಶನ್‌ನಿಂದ ಪ್ರಶಸ್ತಿ. ಮುಂದೆ ನಾಲ್ಕು ವರ್ಷಗಳ ಕಾಲ ಸತತವಾಗಿ ಈ ಪ್ರಶಸ್ತಿ ಬ್ಯಾಂಕಿಗೆ ಲಭಿಸಿತು.

೨೮ ಏಪ್ರಿಲ್ ೧೯೮೪ : ಚಿಕ್ಕಮಗಳೂರು ಕೊಡಗು ಗ್ರಾಮೀಣ ಬ್ಯಾಂಕ್ ಪ್ರವರ್ತ

೧೯೮೫ : ಬ್ಯಾಂಕಿನ ಅಧ್ಯಕ್ಷ ಶ್ರೀ ವೈ. ಎಸ್. ಹೆಗ್ಡೆಯವರಿಗೆ ಐ.ಎಂ.ಎಚ್.ಗುಡ್ ಇಯರ್ ಮಾರ್ಕೆಟಿಂಗ್ ಮ್ಯಾನ್ ಆಫ್ ದ ಇಯರ್ ಪ್ರಶಸ್ತಿ; ಸತತ ಐದನೆ ಬಾರಿ ಬ್ಯಾಂಕಿಗೆ ಜೆಮ್ ಎಂಡ್ ಜೆವೆಲ್ಲರಿ ಎಕ್ಸ್‌ಪೋಟ್ ಕೌನ್ಸಿಲ್ ಪ್ರಶಸ್ತಿ.

೯ ನವೆಂಬರ್ ೧೯೮೯: ನೆಹರೂ ಜನ್ಮಶತಾಬ್ದಿ ಅಂಗವಾಗಿ ಮುಖ್ಯ ಕಚೇರಿಯ ಸಮೀಪ ನೆಹರೂರವರ ಕಂಚಿನ ಪ್ರತಿಮೆಯ ಅನಾವರಣ – ಮುಖ್ಯ ನ್ಯಾಯಾಧೀಶ ಇ.ಎಸ್. ವೆಂಕಟರಾಮಯ್ಯ ಅವರಿಂದ

೧೩ ನವೆಂಬರ್ ೧೯೮೯ – ಶ್ರೀ ಸಿ. ರಂಗರಾಜನ್, ಡೆಪ್ಯುಟಿ ಗವರ್ನರ್, ರಿಸರ್ವ್ ಬ್ಯಾಂಕ್ ಇವರಿಂದ ಲೋಕಲ್ ಏರಿಯಾ ನೆಟ್‌ವರ್ಕ್ (LAN) ಉದ್ಘಾಟನೆ.

೪ ಮಾರ್ಚ್ ೧೯೯೨ : ಬ್ಯಾಂಕಿನ ೮೫ನೇ ಜನ್ಮದಿಂದ ಸಮಾರಂಭದ ಮುಖ್ಯ ಅತಿಥಿಯಾಗಿ ರಾಷ್ಟ್ರಪತಿ ಆರ್. ವೆಂಕಟರಾಮನ್, ಅಂದಿನ ಮುಖ್ಯಮಂತ್ರಿ ಶ್ರೀ ವೀರಪ್ಪಮೊಯಿಲಿ ಹಾಗೂ ನಿವೃತ್ತ ಮುಖ್ಯ ನ್ಯಾಯಮೂರ್ತಿ ಆರ್ಥಿಕ ಅಭಿವೃದ್ಧಿ ಪ್ರತಿಷ್ಠಾನದ ಉದ್ಘಾಟನೆ

೧೯೯೩, ೧೨ ಮಾರ್ಚ್ ೧೯೯೫ : ಸ್ಥಾಪಕರ ಶಾಖೆಯೆಂದು ಉಡುಪಿ ಶಾಖೆಯ ಪುನರ್ ನಾಮಕರಣ. ಶ್ರೀ ಕೆ. ಆರ್. ರಾಮಮೂರ್ತಿ ಅಧ್ಯಕ್ಷರು ಹಾಗೂ ಆಡಳಿತ ನಿರ್ದೇಶಕರು ಇವರಿಂದ ಉಡುಪಿಯಲ್ಲಿ ನೂತನ ಕಾರ್ಪೊರೇಶನ್ ಬ್ಯಾಂಕ್ ಹೌಸ್ ಕಟ್ಟಡದ ಉದ್ಘಾಟನೆ

೬ ಏಪ್ರಿಲ್ ೧೯೯೬ : ಬ್ಯಾಂಕಿನ ೯೦ನೇ ವರ್ಷದ ಆಚರಣೆ. ಮುಖ್ಯ ಅತಿಥಿ: ಸುಪ್ರೀಂ ಕೋರ್ಟಿನ ಮುಖ್ಯ ನ್ಯಾಯಾಧೀಶ ಶ್ರೀ ಎ. ಎಂ. ಅಹಮದಿ. ಅಧ್ಯಕ್ಷತೆ : ರಾಜರ್ಷಿ ಡಿ. ವೀರೇಂದ್ರ ಹೆಗ್ಗಡೆ, ಧರ್ಮಾಧಿಕಾರಿ

೧೯೯೫ : ಭಾರತೀಯ ರಿಸರ್ವ್ ಬ್ಯಾಂಕ್ ಗವರ್ನರ್ ಡಾ.ಸಿ. ರಂಗರಾಜನ್ ಅವರು ಬೆಂಗಳೂರಿನಿಂದ CAPS ಗೆ ಭೇಟಿ ನೀಡಿದರು; ಮಂಗಳೂರಿನ ರಥಭೀದಿ ಶಾಖೆಯ ಸ್ವಂತ ಕಟ್ಟಡ ಕಾರ್ಪೊರೇಶನ್ ಬ್ಯಾಂಕ್ ಹೌಸ್ ಉದ್ಘಾಟನೆ – ಆಗಿನ ಕೇಂದ್ರವಿತ್ತ ಸಚಿವ ಶ್ರೀ ಡಾ. ಮನಮೋಹನ್ ಸಿಂಗ್ ಅವರಿಂದ

೧೯೯೭-೯೮ : ಸಾರ್ವಜನಿಕರಿಗೆ ಬ್ಯಾಂಕಿನ ಶೇರಿಗಳ ನೀಡಿಕೆ – ಅತ್ಯಂತ ಯಶಸ್ವಿಯಾಯಿತು.

೨೦೦೦ : ಬ್ಯಾಂಕಿನ ಹೊಸ ಮಿಲೆನಿಯಂ ಕಟ್ಟಡದ ಉದ್ಘಾಟನೆ. ಅಂದಿನ ಕೇಂದ್ರ ಹಣಕಾಸು ರಾಜ್ಯ ಸಚಿವ ಮಾನ್ಯ ಶ್ರೀ ಬಾಬಾಸಾಹೇಬ್ ವಿಖೆ ಪಾಟೀಲ್ ಅವರಿಂದ ಕೇಂದರ ವಿತ್ತ ಸಚಿವ ಸನ್ಮಾನ್ಯ ಶ್ರೀ ಯಶವಂತ ಸಿನ್ಹಾ ಅವರಿಂದ ಮಂಗಳೂರಿನ ಮುಖ್ಯ ಕಚೇರಿಯಲ್ಲಿ 'ಕಾರ್ಪ್ ಫಾಸ್ಟ್' ಎಂಬ ನೂತನ ಯೋಜನೆಯ ಉದ್ಘಾಟನೆ.

೬.೬.೨೦೦೧ : ಜೀವ ವಿಮಾನ ನಿಗಮದ ಜತೆ ಬ್ಯಾಂಕಿನ ಒಡಂಬಡಿಕೆ (MOU)-

೨೦.೧೨.೨೦೦೧ : ನ್ಯೂ ಇಂಡಿಯಾ ಅಶ್ಯೂರೆನ್ಸ್ ಕಂಪೆನಿಯೊಂದಿಗೆ ಒಡಂಬಡಿಕೆ(MOU) ಮಂಗಳೂರು ತಾಲೂಕಿನ ಕಿನ್ನಿಗೋಳಿಯಲ್ಲಿ

೨೦೦೪ : ಕೇಂದ್ರ ವಿತ್ತ ಸಚಿವರಾದ ಸನ್ಮಾನ್ಯ ಶ್ರೀ ಪಿ. ಚಿದಂಬರಂ ಅವರಿಂದ ಕಾರ್ಪೊರೇಶನ್ ಬ್ಯಾಂಕ್ ಸಾಲ ನೀಡಿದ ೧೦೫೪ ಸ್ವಸಹಾಯ ಗುಂಪುಗಳ ಉದ್ಘಾಟನೆ.

೨೭-೦೨-೨೦೦೨ : ೨೪ನೇ ಬ್ಯಾಂಕ್ ಅರ್ಥಶಾಸ್ತ್ರಜ್ಞರ ಸಮ್ಮೇಳನ(೨೦೦೨) (BECON) ಇದರ ಅತಿಥ್ಯವನ್ನು ಐ.ಬಿ.ಎ. ಪರವಾಗಿ ಕಾರ್ಪೊರೇಶನ್ ಬ್ಯಾಂಕ್ ವಹಿಸಿಕೊಂಡಿತ್ತು.

೦೨.೩.೨೦೦೫ : ಭಾರತೀಯ ರಿಸರ್ವ್ ಬ್ಯಾಂಕಿನ ಡೆಪ್ಯುಟಿ ಗವರ್ನರ್ ಶ್ರೀ ವಿಠಲದಾಸ್ ಲೀಲಾಧರ್ ಅವರಿಂದ ಶತಮಾನೋತ್ಸವ ಕಾರ್ಯಕ್ರಮಗಳಿಗೆ ಚಾಲನೆ.

* * *

## ಅನುಬಂಧ ೩. ಶತಮಾನದ ಹೆಜ್ಜೆ ಗುರುತು

ಇದೀಗ ಶತಮಾನೋತ್ಸವದ ಸಂಭ್ರದಲ್ಲಿರುವ ಕಾರ್ಪೊರೇಶನ್ ಬ್ಯಾಂಕ್ ಜನ್ಮ ತಾಳಿದ್ದು ೭,೦೦೦ ಕ್ಕಿಂತಲೂ ಕಡಿಮೆ ಜನಸಂಖ್ಯೆಯಿದ್ದ ಉಡುಪಿ ಎಂಬ ಸಣ್ಣ ಊರಿನಲ್ಲಿ ಆಗ ಅದು ಸೌತ್‌ಕೆನರಾ ಜಿಲ್ಲೆಗೆ ಸೇರಿತ್ತು. ರಾಜ್ಯದಲ್ಲಿ ಹುಟ್ಟಿದ ೭೫ ಬ್ಯಾಂಕುಗಳಲ್ಲಿ ೨೨ ಬ್ಯಾಂಕುಗಳು ಆಗಿನ ಸೌತ್ ಕೆನರಾ ಜಿಲ್ಲೆಯಲ್ಲಿ ಜನ್ಮ ತಾಳಿದವು. ಹೀಗಾಗಿ ಸೌತ್ ಕೆನರಾ ಜಿಲ್ಲೆಯನ್ನು 'ಬ್ಯಾಂಕುಗಳ ತೊಟ್ಟಿಲು' ಎಂದು ವರ್ಣಿಸುತ್ತಾರೆ. ಡಾ. ನವೀನಚಂದ್ರ ತಿಂಗಳಾಯರು 'ದಕ್ಷಿಣ ಕನ್ನಡದ ಬ್ಯಾಂಕುಗಳು' ಎಂಬ ಲೇಖನದಲ್ಲಿ ಹೀಗೆ ಬರೆದಿದ್ದಾರೆ: 'ಭಾರತದಲ್ಲಿ ಅತಿ ಹೆಚ್ಚು ಸಂಖ್ಯೆಯಲ್ಲಿ ಬ್ಯಾಂಕುಗಳಿಗೆ ಜನ್ಮ ವಿತ್ತ ಮೂರು ಜಿಲ್ಲೆಗಳೆಂದರೆ ತಮಿಳುನಾಡಿನ ಕೊಯಮತ್ತೂರು, ಕೇರಳದ ತ್ರಿಚೂರು ಹಾಗೂ ಕರ್ನಾಟಕದ ದಕ್ಷಿಣ ಕನ್ನಡ ಕೊಯಮೂತ್ತೂರಿನಲ್ಲಿ ಸುಮಾರು ೩೮ ಬ್ಯಾಂಕುಗಳು ಹುಟ್ಟಿದ್ದವು. ಇವುಗಳಲ್ಲಿ ಹೆಚ್ಚಿನವು 'ಪರೋಪಕಾರಿ ನಿಧಿಗಳು'. ಇಷ್ಟು ಬ್ಯಾಂಕುಗಳಲ್ಲಿ ಈಗ ಒಂದೇ ಒಂದು ಬ್ಯಾಂಕೂ ಉಳಿದಿಲ್ಲ. ತ್ರಿಚೂರು ಜಿಲ್ಲೆಯಲ್ಲಿ ೩೭ ಬ್ಯಾಂಕುಗಳು ತಲೆ ಎತ್ತಿದುವು. ಇವುಗಳಲ್ಲಿ ಇಂದಿನ ತನಕ ಬಾಳಿ ಬದುಕಿದವು ಕೇವಲ ನಾಲ್ಕು ಬ್ಯಾಂಕುಗಳು. ಆದರೆ ದಕ್ಷಿಣ ಕನ್ನಡದ ಬಸಿರಿನಿಂದ ಬಂದ ೨೨ ಬ್ಯಾಂಕುಗಳಲ್ಲಿ ಐದು ಬ್ಯಾಂಕುಗಳು ಪಂಚ ಪಾಂಡವರಂತೆ ಜಯಶೀಲವಾಗಿವೆ." ಆ ಐದು ಬ್ಯಾಂಕುಗಳೆಂದರೆ ಕಾರ್ಪೊರೇಶನ್ ಬ್ಯಾಂಕ್, ಕೆನರಾ ಬ್ಯಾಂಕ್, ಕರ್ನಾಟಕ ಬ್ಯಾಂಕ್, ಸಿಂಡಿಕೇಟ್ ಬ್ಯಾಂಕ್ ಮತ್ತು ವಿಜಯಾ ಬ್ಯಾಂಕ್. ಇವುಗಳಲ್ಲಿ ೦೨ ಮಾರ್ಚ್ ೧೯೦೬ರಂದು ಉಡುಪಿಯಲ್ಲಿ ಹುಟ್ಟಿದ ಕಾರ್ಪೊರೇಶನ್ ಬ್ಯಾಂಕ್ ಅತ್ಯಂತ ಹಳೆಯದು.

ಬ್ಯಾಂಕಿನ ಸ್ಥಾಪಕಾಧ್ಯಕ್ಷರಾದ ಖಾನ್ ಬಹಾದ್ದೂರ್ ಹಾಜಿ ಅಬ್ದುಲ್ಲಾ ಹಾಜಿ ಕಾಸಿಂ ಸಾಹೇಬ್ ಬಹಾದ್ದೂರ್ ಹಾಗೂ ಅವರ ಸಂಗಡಿಗರು ಉಡುಪಿಯಂಥ ಪುಟ್ಟ ಊರಿನಲ್ಲಿ ಬ್ಯಾಂಕ್ ಸ್ಥಾಪಿಸಲು ನಿರ್ಧರಿಸಿದ್ದು ಏಕೆ? ಎಂಬ ಪ್ರಶ್ನೆ ಏಳುವುದು ಸಹಜ. ಬ್ಯಾಂಕ್ ಒಂದನ್ನು ಆರಂಭಿಸುವ ನಿರ್ಧಾರವನ್ನು ಯಾರೇ ಆಗಲಿ ಇದ್ದಕ್ಕಿದ್ದಂತೆ ಕೈಗೊಳ್ಳುವುದಿಲ್ಲ. ಅದರ ಹಿಂದೆ ಬಲವಾದ ಪ್ರೇರಣೆಗಳು ಇದ್ದಿರಲೇಬೇಕು. ಅವು

ಯಾವುವು? ಎಂಬುದನ್ನು ತಿಳಿದುಕೊಳ್ಳಲು ೧೯೦೬ರ ಸೌತ್‌ಕೆನರಾ ಜಿಲ್ಲೆಯ ಭೌಗೋಳಿಕ ಸಾಮಾಜಿಕ ಹಾಗೂ ಆರ್ಥಿಕ ಪರಿಸ್ಥಿತಿ ಹೇಗಿತ್ತು ಎಂಬುದನ್ನು ಅಭ್ಯಾಸ ಮಾಡಬೇಕಾಗುತ್ತದೆ.

ಈಗ ಉಡುಪಿಯಿಂದ ಮಂಗಳೂರಿಗೆ ಒಂದೇ ಗಂಟೆಯಲ್ಲಿ ತಲುಪಬಹುದು. ಐದು ನಿಮಿಷಕ್ಕೊಂದರಂತೆ ಬಸ್ಸುಗಳು ಓಡಾಡುತ್ತವೆ. ರೈಲು ಸಂಪರ್ಕವೂ ಇದೆ. ಆದರೆ ಆ ಕಾಲದಲ್ಲಿ ಉಡುಪಿಯಿಂದ ಮಂಗಳೂರಿಗೆ ಹೋಗಲು ನಾಲ್ಕು ಹೊಳೆಗಳನ್ನು ದೋಣಿಯಲ್ಲಿ ದಾಟಬೇಕಿತ್ತು. ಕರಾವಳಿಯ ಸುಧೀರ್ಘ ಮಳೆಗಾಲದ ದಿನಗಳಲ್ಲಿ ದೋಣಿಯಲ್ಲಿ ಹೊಳೆ ದಾಟುವ ಕಷ್ಟ ಏನೆಂಬುದು ಪ್ರಯಾಣಿಸಿದವರಿಗಷ್ಟೆ ಗೊತ್ತು. ಆದರೂ ಬ್ಯಾಂಕ್ ಸೌಲಭ್ಯ ಬೇಕಾಗಿದ್ದರೆ ಉಡುಪಿಯ ವ್ಯವಹಾರಸ್ಥರು ಮಂಗಳೂರಿಗೆ ಹೋಗಬೇಕಾಗಿತ್ತು. ಇಲ್ಲದಿದ್ದರೆ ೧೫ ದಿನಗಳಿಗೊಮ್ಮೆ ಮಂಗಳೂರಿನಿಂದ ಉಡುಪಿಗೆ ಬರುತ್ತಿದ್ದ ಬ್ಯಾಂಕ್ ಆಫ್ ಮದರಾಸ್‌ನ ಏಜಂಟರ ಹಾದಿ ಕಾಯಬೇಕಿತ್ತು.

೧೮೬೮ರಲ್ಲಿ ಮಂಗಳೂರಿನಲ್ಲಿ ಆರಂಭವಾಗಿದ್ದ ಬ್ಯಾಂಕ್ ಆಫ್ ಮದರಾಸ್‌ನ ಶಾಖೆಯೊಂದನ್ನು ಬಿಟ್ಟರೆ ಆಗ ಬರೇ ಸೌತ್ ಕೆನರಾ ಜಿಲ್ಲೆಯಲ್ಲಿ ಬೇರಾವುದೇ ಬ್ಯಾಂಕುಗಳಿರಲಿಲ್ಲ. ಬ್ಯಾಂಕ್ ಆಫ್ ಮದರಾಸ್ ದೊಡ್ಡ ಮಟ್ಟದ ಆಂಗ್ಲ ವ್ಯವಹಾರಸ್ಥರಿಗಷ್ಟೇ ಸೂಕ್ತವಾಗಿತ್ತು. ಅದು ವಿಧಿಸುತ್ತಿದ್ದ ಬಡ್ಡಿದರ ಸಾಮಾನ್ಯರಿಗೆ ಭರಿಸಲು ಸಾಧ್ಯವಾಗುತ್ತಿರಲಿಲ್ಲ. ಬ್ಯಾಂಕ್ ಆಫ್ ಮದ್ರಾಸ್ ದೊಡ್ಡ ಪ್ರಮಾಣದಲ್ಲಿ ಮಾತ್ರ ಸಾಲ ನೀಡುತ್ತಿದ್ದುದರಿಂದ ಸಣ್ಣ ಪುಟ್ಟ ವ್ಯಾಪರ ಮಾಡುತ್ತಿದ್ದವರು ಖಾಸಗಿಯಾಗಿ ಸಾಲ ನೀಡುತ್ತಿದ್ದ ಶ್ರೀಮಂತ ಲೇವಾದೇವಿದಾರರ ಕಪಿಮುಷ್ಠಿಯಲ್ಲಿ ಸಿಲುಕಿಕೊಳ್ಳುವುದು ಅನಿವಾರ್ಯವಾಗಿತ್ತು. ಜಿಲ್ಲೆಯಲ್ಲಿ ಗೇರು ಕಾರ್ಖಾನೆ, ಹಂಚು ತಯಾರಿ, ಕಾಫಿ ಸಂಸ್ಕರಣೆ, ತೆಂಗು, ಅಡಿಕೆ, ಒಣ ಮೀನು ವ್ಯಾಪಾರ ಮುಂತಾದ ವಾಣಿಜ್ಯ ವ್ಯವಹಾರಗಳಿಗೆ ಉತ್ತಮ ಅವಕಾಶವಿತ್ತು. ಆದರೆ ಅವುಗಳನ್ನು ನಡೆಸಲು ಯೋಗ್ಯ ಬಡ್ಡಿದರದಲ್ಲಿ ಸಾಲ ಹಾಗೂ ಇನ್ನಿತರ ಬ್ಯಾಂಕಿಂಗ್ ಸೌಲಭ್ಯ ನೀಡುವ ವ್ಯವಸ್ಥೆ ಇರಲಿಲ್ಲ. ಹೀಗಾಗಿ ಉಡುಪಿಯಲ್ಲಿ ನಮ್ಮದೇ ಆದ ಒಂದು ಒಳ್ಳೆಯ ಬ್ಯಾಂಕ್ ಇರಬೇಕೆಂದು ಕೆಲವು ಸ್ಥಳೀಯ ವರ್ತಕರು ಯೋಚಿಸುತ್ತಿದ್ದರು.

ಆಗ ಬಾಲಗಂಗಾಧರ ತಿಲಕರ ಸ್ವದೇಶಿ ಆಂದೋಲನ ಮಹಾರಾಷ್ಟ್ರದಲ್ಲಿ ಜನಪ್ರಿಯವಾಗಿ ಅದರ ಪ್ರಭಾವ ಕರಾವಳಿ ಜಿಲ್ಲೆಯಲ್ಲೂ ವ್ಯಾಪಿಸುತ್ತಿತ್ತು. ಆಂಗ್ಲ ವ್ಯವಹಾರಸ್ಥರಿಗಾಗಿದ್ದ ಈಸ್ಟ್ ಇಂಡಿಯಾ ಕಂಪೆನಿಯಾ 'ಬ್ಯಾಂಕ್ ಆಫ್ ಮದರಾಸ್' ಅನ್ನು ಬಿಟ್ಟು ಬೇರೊಂದು ಬ್ಯಾಂಕ್ ಸ್ಥಾಪಿಸಿಕೊಳ್ಳಲು ತಿಲಕರ ಸ್ವದೇಶಿ ಮಂತ್ರವೂ ಹಾಜಿ ಅಬ್ದುಲ್ಲಾ ಹಾಗೂ ಅವರ ಸಂಗಡಿಗರಿಗೆ ಪ್ರೇರಣೆ ನೀಡಿತು. ೧೯೦೬ ಫೆಬ್ರವರಿ ೧೯ರಂದು ಅಬ್ದುಲ್ಲಾ ಎಚ್. ಕಾಸಿಂ ಎಂಬ ಹೆಸರಿನಲ್ಲಿ ಹಾಜಿ ಅಬ್ದುಲ್ಲಾ ಅವರು ನೀಡಿದ ಸಾರ್ವಜನಿಕ ಪ್ರಕಟಣೆಯಲ್ಲ – "ಕಾರ್ಪೊರೇಶನ್ನಿನ ಪ್ರಾಥಮಿಕ ಉದ್ದೇಶ ಜಾತಿ ಮತದ ಭೇದವಿಲ್ಲದೆ ಎಲ್ಲಾ ವರ್ಗದ ಜನರಲ್ಲಿ ಉಳಿತಾಯದ ಅಭ್ಯಾಸವನ್ನು ಬೆಳೆಸುವುದು. ಇದ್ದು ಶುದ್ಧಾದ ಮತ್ತು ಸರಳವಾದ 'ಸ್ವದೇಶಿ ತತ್ವ". ಪ್ರತಿಯೊಬ್ಬ ದೇಶಪ್ರೇಮಿಯೂ ಈ ಉದ್ದೇಶವನ್ನು ಈಡೇರಿಸಲು ಮುಂದೆ ಬಂದು ಸಹಕರಿಸುವರೆಂದು ನಿರೀಕ್ಷಿಸಲಾಗಿದೆ" ಎಂದು ಹೇಳಿರುವುದನ್ನು ಗಮನಿಸಿದಾಗ ಬ್ಯಾಂಕಿನ ಸ್ಥಾಪನೆಯ ಹಿಂದೆ ಸ್ವದೇಶಿ ಚಳವಳಿಯ ಪ್ರಭಾವವೂ ಇತ್ತೆಂಬುದು ಸ್ಪಷ್ಟವಾಗುತ್ತದೆ.

೧೯೦೬ ಫೆಬ್ರವರಿ ೧೧ ಹಾಗೂ ೧೮ರಂದು ಅಂದಿನ ಉಡುಪಿಯ ಪುರ ಪ್ರಮುಖರ ನಡೆಸಿದ ಸಭೆಯಲ್ಲಿ 'ದಿ ಕೆನರಾ ಬ್ಯಾಕಿಂಗ್ ಕಾರ್ಪೊರೇಶನ್ (ಉಡಿಪಿ) ಲಿಮಿಟೆಡ್' ಎಂಬ ಹೆಸರಿನಲ್ಲಿ ಸಂಸ್ಥೆಯೊಂದನ್ನು ಸ್ಥಾಪಿಸಲು ನಿರ್ಧರಿಸಿದ್ದಾಗಿ ಅದೇ ಪ್ರಕಟಣೆ ಯಲ್ಲಿ ತಿಳಿಸಲಾಗಿತ್ತು. ಆಗ ಪ್ರಚಲಿತವಾಗಿದ್ದ ನಿಧಿ ಮಾದರಿಯಲ್ಲಿ ಆರಂಭವಾದ 'ದಿ ಕೆನರಾ ಬ್ಯಾಂಕಿಂಗ್ ಕಾರ್ಪೊರೇಶನ್(ಉಡಿಪಿ) ಲಿಮಿಟೆಡ್ ಎಂಬ ಸಂಸ್ಥೆ ಮುಂದೆ ಕಾರ್ಪೊರೇಶನ್ ಬ್ಯಾಂಕ್ ಎಂಬ ಹೆಸರಿನಲ್ಲಿ ದೇಶದ ಪ್ರಮುಖ ಬ್ಯಾಂಕ್‌ಗಳಲ್ಲಿ ಒಂದೆನಿಸಿಕೊಳ್ಳುತ್ತವೆ ಎಂದು ಯಾರೂ ಊಹಿಸಿರಲಾರರು. ಬ್ಯಾಂಕಿನ ಮೊದಲ ಶೇರುದಾರರು ಹಾಜಿ ಅಬ್ದುಲ್ಲಾ ಅವರೇ. ಮೊದಲ ಠೇವಣಿಯಾಗಿ ಬ್ಯಾಂಕಿನ ನಿರ್ದೇಶಕರಲ್ಲಿ ಒಬ್ಬರಾಗಿದ್ದ ಶ್ರೀ ಬಿ. ನಾರಾಯಣರಾಯರು ೧೩.೧೧.೧೯೦೬ ರಂದು ರೂ. ೧೦೦ನ್ನು ನೀಡಿದರೆ, ೫ ಎಪ್ರಿಲ್ ೧೯೦೬ ರಂದು ರೂ. ೧೦೦ ಸಾಲ ಪಡೆಯುವ ಮೂಲಕ ಜನಾಬ್ ಶಿದ್ದಿ ಬಾಪು ಸಾಹೇಬ್ ಅನ್ನುವವರು ಕಾರ್ಪೊರೇಶನ್ ಬ್ಯಾಂಕಿನ ಪ್ರಥಮ ಸಾಲಗಾರರಾಗಿ ಇತಿಹಾಸದಲ್ಲಿ ದಾಖಲಾಗಿದ್ದಾರೆ.

ಜಾತಿ ವ್ಯವಸ್ಥೆ ಪ್ರಬಲವಾಗಿದ್ದ ಅಂದಿನ ದಿನಗಳಲ್ಲಿ ಬ್ಯಾಂಕನ್ನು ಹುಟ್ಟು ಹಾಕಿದ ೧೨ ಮಂದಿ ನಿರ್ದೇಶಕರಲ್ಲಿ ಅಧ್ಯಕ್ಷರೂ ಸೇರಿದಂತೆ ಇಬ್ಬರು ಮುಸ್ಲಿಮರಾಗಿದ್ದರೆ ಉಳಿದ ೧೦ ಮಂದಿ ಹಿಂದುಗಳಾಗಿದ್ದರು. ಆರಂಭದಿಂದಲೆ ಈ ರೀತಿಯಾದ 'ಕಾಸ್ಮೋಪಾಲಿಟನ್ ಸ್ವರೂಪವನ್ನು ಪಡೆದುಕೊಂಡದ್ದು ಕಾರ್ಪೊರೇಶನ್ ಬ್ಯಾಂಕಿನ ವೈಶಿಷ್ಟ್ಯ ಅನ್ನಬಹುದು. ಬ್ಯಾಂಕಿನ ಬೆಳ್ಳಿಹಬ್ಬದ ಸ್ಮರಣ ಸಂಖ್ಯೆಯಲ್ಲಿ ೧೯೦೮ರಲ್ಲಿ ಬ್ಯಾಂಕಿನ ಶೇರುದಾರರಲ್ಲಿ ಯಾವ ಯಾವ ಜಾತಿಯವರು ಎಷ್ಟು ಶೇರು ಹೊಂದಿದ್ದರು ಎಂಬ ಪಟ್ಟಿ ಪ್ರಕಟವಾಗಿದ್ದು, ಅದನ್ನು ನೋಡಿದರೆ ಪ್ರಾರಂಭದಿಂದಲೂ ಬ್ಯಾಂಕು ಜಾತಿ, ಮತ ಎಂಬ ಭೇದ ಭಾವ ತೋರದೆ ಸರ್ವರಿಗೂ ಮುಕ್ತವಾಗಿತ್ತು ಎಂಬುದು ಸ್ಪಷ್ಟವಾಗುತ್ತದೆ.

'ಹನಿಗೂಡಿ ಹಳ್ಳ – ತೆಗೆಗೂಡಿ ಕಣಜ' ಎಂಬ ಗಾದೆ ಮಾತು ಕಾರ್ಪೊರೇಶನ್ ಬ್ಯಾಂಕಿಗೆ ಚೆನ್ನಾಗಿ ಒಪ್ಪುತ್ತದೆ. ೧೯೦೬ರಲ್ಲಿ ಬ್ಯಾಂಕು ಆರಂಭವಾದಾಗ ಇದ್ದ ಬಂಡವಾಳ ರೂ. ೫೦೦೦/- ಮೊದಲ ದಿನದ ಅಂತ್ಯದಲ್ಲಿ ಬ್ಯಾಂಕಿನ ಸಂಪನ್ಮೂಲ ೩೮ ರೂಪಾಯಿ ೧೩ ಆಣೆ ಮತ್ತು ಎರಡು ಪೈ ಹೀಗೆ ಆರಂಭವಾದ 'ದಿ ಕೆನರಾ ಬ್ಯಾಂಕಿಂಗ್ ಕಾರ್ಪೊರೇಶನ್(ಉಡುಪಿ) ಲಿಮಿಟೆಡ್ ಎಂಬ ಸಂಸ್ಥೆ ಈಗ ಅಂದರೆ ೩೧.೧೨.೨೦೦೫ರಲ್ಲಿ ಕಾರ್ಪೊರೇಶನ್ ಬ್ಯಾಂಕ್ ಎಂಬ ಹೆಸರಿನಲ್ಲಿ ೫೧,೯೭೬ ಕೋಟಿ ರೂಪಾಯಿಗಳ ಒಟ್ಟು ವ್ಯವಹಾರವನ್ನು ನಡೆಸುತ್ತಿದೆ. ದೇಶದಾದ್ಯಂತ ೮೦೨ ಶಾಖೆಗಳು, ೭೭ ವಿಸ್ತರಣಾ ಕೌಂಟರ್‌ಗಳು ಹಾಗೂ ೮೩೭ ಎ.ಟಿ.ಎಂ. ಗಳನ್ನು ಹೊಂದಿದೆ. ೧೧,೦೦೦ಕ್ಕೂ ಹೆಚ್ಚು ಉದ್ಯೋಗಿಗಳು ಇಂದು ಕಾರ್ಪೊರೇಶನ್ ಬ್ಯಾಂಕಿನಲ್ಲಿ ಸೇವೆ ಸಲ್ಲಿಸುತ್ತಿದ್ದು, ಅವರೆಲ್ಲರೂ ನೂರು ವರ್ಷಗಳ ಹಿಂದೆ ಬ್ಯಾಂಕನ್ನು ಸ್ಥಾಪಿಸಿದ ಹಾಜಿ ಅಬ್ದುಲ್ಲಾ ಹಾಗೂ ಅವರ ಸಂಗಡಿಗರನ್ನು ಕೃತಜ್ಞತೆಯಿಂದ ಹಾಗೂ ಹೆಮ್ಮೆಯಿಂದ ಸ್ಮರಿಸಿಕೊಳ್ಳುತ್ತಿದ್ದಾರೆ.

ಬ್ಯಾಂಕು ಈ ಎತ್ತರವನ್ನು ಮುಟ್ಟಲು ಸಾಗಿ ಬಂದ ಹಾದಿಯಲ್ಲಿ ಹೂವಿನ ಹಾಸಿಗೆ ಹಾಸಿರಲಿಲ್ಲ. ಅದು ಕಲ್ಲು ಮುಳ್ಳುಗಳಿಂದ ಕೂಡಿದ ದಾರಿಯಾಗಿತ್ತು. ನೂರು ವರ್ಷಗಳ ಬ್ಯಾಂಕಿನ ಇತಿಹಾಸ ಅತ್ಯಂತ ರೋಚಕವಾಗಿದೆ. ಬ್ಯಾಂಕಿನ ಬೀಜ ಬಿತ್ತಿ, ನೀರೆರೆದು ಪೋಷಿಸಿ ಅದನ್ನು ಈ ಹಂತಕ್ಕೆ ಬೆಳೆಸಿದವರ ಪಟ್ಟಿ ಸಾಕಷ್ಟು ದೊಡ್ಡದು. ಬಹಳಷ್ಟು ಜನರ ಕೊಡುಗೆ ಇತಿಹಾಸದಲ್ಲಿ ದಾಖಲಾಗದೆ ಹೋಗಿರಬಹುದು. ಸ್ಥಾಪಕಾಧ್ಯಕ್ಷರಾದ ಹಾಜಿ ಅಬ್ದುಲ್ಲಾ ಅವರು ಕೊಡುಗೈ ದಾನಿಗಳಾಗಿದ್ದು ಅತ್ಯಂತ ಜನಪ್ರಿಯರಾಗಿದ್ದರು. ಜೀವಿತ ಕಾಲದಲ್ಲೇ ಅವರು ದಂತಕಥೆಯಾಗಿದ್ದರು. ಅವರ ವ್ಯಕ್ತಿತ್ವದ ವರ್ಚಸ್ಸು ಆರಂಭದ ದಿನಗಳಲ್ಲಿ ಬ್ಯಾಂಕಿನ ಬೆಳವಣಿಗೆಗೆ ನೆರವಾಯಿತು. ತಮ್ಮ ಮನೆಯ ಒಂದು ಕೋಣೆಯನ್ನು ಬ್ಯಾಂಕಿನ ಕಚೇರಿಗೆಂದು ಬಿಟ್ಟುಕೊಟ್ಟಿದ್ದ ಹಾಜಿ ಅಬ್ದುಲ್ಲಾ ಅವರು ೧೯೦೬ರಿಂದ ೧೯೨೯ರವರೆಗೆ ಬ್ಯಾಂಕಿನ ಅಧ್ಯಕ್ಷರಾಗಿ ಮಾರ್ಗದರ್ಶನ ನೀಡಿದರು.

ಎರಡು ಮಹಾಯುದ್ಧಗಳು, ಬರಗಾಲ, ಆರ್ಥಿಕ ಕುಸಿತ, ತೀವ್ರವಾದ ಸ್ಪರ್ಧೆ ಮುಂತಾದ ಸವಾಲುಗಳನ್ನು ಎದುರಿಸಲಾಗದೆ ಕಾರ್ಪೊರೇಶನ್ ಬ್ಯಾಂಕಿನ ನಂತರ ಆರಂಭವಾದ ಅದೆಷ್ಟೋ ಬ್ಯಾಂಕುಗಳು, ಸಹಕಾರ ಸಂಘಗಳು ದಿವಾಳಿಯಾದವು. ಕೆಲವು ಬ್ಯಾಂಕುಗಳು ಇತರ ಬ್ಯಾಂಕುಗಳ ಜೊತೆಗೆ ವಿಲೀನಗೊಂಡವು. ಆದರೆ ಕಾರ್ಪೊರೇಶನ್ ಬ್ಯಾಂಕ್ ಎಚ್ಚರಿಕೆಯ ಹೆಜ್ಜೆಗಳನ್ನಿಡುತ್ತಾ ನಡೆದದ್ದರಿಂದ ಎಂದೂ ಎಡವಲಿಲ್ಲ. ಆರಂಭದ ದಿನಗಳಲ್ಲಿ ಬ್ಯಾಂಕಿನ ಧೋರಣೆ ತುಂಬಾ 'ಕನ್ಸರ್ವೇಟಿವ್' ಅನ್ನಿಸಿದರೂ ಅಂದಿನ ಪರಿಸ್ಥಿತಿಯಲ್ಲಿ ಅದು ಅನಿವಾರ್ಯವಾಗಿತ್ತು. ಅದರಿಂದಾಗಿಯೇ ಕಳೆದ ೧೦೦ ವರ್ಷಗಳಲ್ಲಿ ಸತತವಾಗಿ ಲಾಭ ಗಳಿಸಿದ ಬ್ಯಾಂಕ್ ಎಂಬ ಹೆಗ್ಗಳಿಕೆ ಕಾರ್ಪೊರೇಶನ್ ಬ್ಯಾಂಕಿಗೆ ಪ್ರಾಪ್ತವಾಗಿದೆ.

ಕಾರ್ಪೊರೇಶನ್ ಬ್ಯಾಂಕ್ ೧೯೦೬ರಲ್ಲಿ ಸ್ಥಾಪನೆಗೊಂಡರೂ ಅದರ ಮೊದಲ ಶಾಖೆ ಆರಂಭವಾದದ್ದು ೧೯೨೩ರಲ್ಲಿ. ಜಿಲ್ಲೆಯ ಪ್ರಮುಖ ವ್ಯವಹಾರ ಕೇಂದ್ರಗಳಲ್ಲಿ ಒಂದಾಗಿದ್ದ ಕುಂದಾಪುರದಲ್ಲಿ ೧೮.೫.೨೩ ರಂದು ಶಾಖೆಯನ್ನು ಆರಂಭಿಸುವ ಮೂಲಕ. ಅಂದಿನ ಸೌತ್‌ಕೆನರಾ ಜಿಲ್ಲೆಯಲ್ಲಿ ಬ್ಯಾಂಕೊಂದು ತನ್ನ ಶಾಖೆಯನ್ನು ತೆರೆದದ್ದು ಅದೇ ಪ್ರಥಮ.

ಮೊದಲ ದಶಕದಲ್ಲಿ ಬ್ಯಾಂಕಿನ ಪ್ರಗತಿ ಅತ್ಯಂತ ನಿಧಾನ ಗತಿಯಲ್ಲಿತ್ತು. ಆರಂಭದ 'ನಿಧಿ' ಮಾದರಿಯಲ್ಲಿ ಸಮಸ್ಯೆಗಳು ಕಾಣಿಸಿಕೊಂಡವು. ಹೀಗಾಗಿ ಸಂಸ್ಥೆಯ ನಿಯಮಾವಳಿಗಳಲ್ಲಿ ಸೂಕ್ತ ಬದಲಾವಣೆಗಳನ್ನು ಮಾಡಿ ಬಂಡವಾಳವನ್ನು ಹೆಚ್ಚಿಸುವ ಅಗತ್ಯ ತಲೆದೋರಿತು. ಆಗ

ಬ್ಯಾಂಕಿನ ಸ್ಥಾಪಕ ನಿರ್ದೇಶಕರುಗಳಾಗಿದ್ದ ಸುಜೀರ್ ಆನಂದರಾವ್ ಮತ್ತು ಬೈಂದೂರು ನಾರಾಯಣರಾವ್ ಎನ್ನುವವರು ಬ್ಯಾಂಕಿನ ಬಂಡವಾಳವನ್ನು ಏರಿಸುವ ಜವಾಬ್ದಾರಿಯನ್ನು ವಹಿಸಿಕೊಂಡರು. ಸರಿಯಾದ ಸಾರಿಗೆ ವ್ಯವಸ್ಥೆ ಇಲ್ಲದಿದ್ದರೂ ಜಿಲ್ಲೆಯಾದ್ಯಂತ ಓಡಾಡಿ ಬ್ಯಾಂಕಿಗೆ ಶೇರು ಬಂಡವಾಳವನ್ನು ಸಂಗ್ರಹಿಸಿದರು. ಅವರು ಪಟ್ಟ ಶ್ರಮದಿಂದಾಗಿ ಬ್ಯಾಂಕಿನ ಶೇರು ಬಂಡವಾಳ ೧೫ ಜೂನ್ ೧೯೧೭ ರಂದು ರೂ. ೧೬, ೭೧೫ ಕ್ಕೆ ಏರಿತು. ೧೯೩೦ರಲ್ಲಿ ಬ್ಯಾಂಕು ಬೆಳ್ಳಿಹಬ್ಬವನ್ನು ಆಚರಿಸುವಾಗ ಬಂಡವಾಳ ರೂ. ೨,೨೫,೦೦೦ ಆಗಿತ್ತು.

೧೪ ನವೆಂಬರ್ ೧೯೩೪ ರಂದು 'ದಿ ಕೆನರಾ ಬ್ಯಾಂಕಿಂಗ್ ಕಾರ್ಪೊರೇಶನ್ ಮರ್ಕೆರಾ(ಇಂದಿನ ಮಡಿಕೇರಿ) ದಲ್ಲಿ ತನ್ನ ಶಾಖೆಯನ್ನು ತೆರೆದದ್ದು ಕೂಡಾ ಐತಿಹಾಸಿಕವಾಗಿ ಮಹತ್ವದ ಸಂಗತಿಯಾಗಿದೆ. ಅಲ್ಲಿಯವರೆಗೆ ಕೂರ್ಗ್ (ಇಂದಿನ ಕೊಡಗು) ಜಿಲ್ಲೆಯಲ್ಲಿ ಸಾಕಷ್ಟು ಶ್ರೀಮಂತ ಕಾಫಿ ಬೆಳೆಗಾರರು ಇದ್ದಿದ್ದರೂ, ಬ್ಯಾಂಕಿಂಗ್ ಸೌಲಭ್ಯ ಇರಲಿಲ್ಲ. ಅದಕ್ಕಾಗಿ ವರು ಮಂಗಳೂರು, ಮೈಸೂರು ಅಥವಾ ಬೆಂಗಳೂರಿಗೆ ಹೋಗಬೇಕಾಗಿತ್ತು. ಮಲೇರಿಯಾ ಕಾಯಿಲೆಯ ಭೀತಿಯಿಂದಾಗಿ ಅಲ್ಲಿಗೆ ಕಾಲಿಡಲು ಪರವೂರಿನವರು ಅಂಜುತ್ತಿದ್ದರು. ಆದರೆ ಕೆನರಾ ಬ್ಯಾಂಕಿಂಗ್ ಕಾರ್ಪೊರೇಶನ್ ಮರ್ಕೆರಾದಲ್ಲಿ ಶಾಖೆಯನ್ನು ತೆರೆಯುವ ಮೂಲಕ ಕೂರ್ಗ್ ಜಿಲ್ಲೆಗೆ ಬ್ಯಾಂಕಿಂಗ್ ಸೌಲಭ್ಯ ಒದಗಿಸಿದ ಮೊದಲ ಬ್ಯಾಂಕ್ ಎಂಬ ಕೀರ್ತಿಗೆ ಪಾತ್ರವಾಯಿತು.

'ದಿ ಕೆನರಾ ಬ್ಯಾಂಕಿಂಗ್ ಕಾರ್ಪೊರೇಶನ್ (ಉಡಿಪಿ) ಲಿಮಿಟೆಡ್' ಎಂಬ ಹೆಸರಿನಲ್ಲಿ ಪ್ರಾರಂಭವಾದ ಸಂಸ್ಥೆಯ ಹೆಸರು 'ಕಾರ್ಪೊರೇಶನ್ ಬ್ಯಾಂಕ್' ಎಂದು ಬದಲಾದ ವೃತ್ತಾಂತವೂ ಸ್ವಾರಸ್ಯಕರವಾಗಿದೆ. ಆಗಿನ ಸೌತ್ ಕೆನರಾ ಜಿಲ್ಲೆಯಲ್ಲಿ ಹುಟ್ಟಿದ 'ಕೆನರಾ ಹಿಂದೂ ಪರ್ಮನೆಂಟ್ ಫಂಡ್' ನಿಯಮಿತ (ಈಗಿನ ಕೆನರಾ ಬ್ಯಾಂಕ್) ಮತ್ತು 'ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್(ನಿ)' (ಈಗಿನ ಸಿಂಡಿಕೇಟ್ ಬ್ಯಾಂಕ್)ಗಳ ಹೆಸರಿನಲ್ಲೂ ಕೆನರಾ ಇದ್ದದ್ದು ಜಿಲ್ಲೆಯ ಹೊರಗಿನ ಜನರಲ್ಲಿ ಗೊಂದಲಕ್ಕೆ ಕಾರಣವಾಗಿತ್ತು. 'ದಿನ ಕೆನರಾ ಬ್ಯಾಂಕಿಂಗ್ ಕಾರ್ಪೊರೇಶನ್(ಉಡಿಪಿ) ಲಿಮಿಟೆಡ್' ಉಡುಪಿಯಿಂದ ಹೊರಗೂ ಶಾಖೆಗಳನ್ನು ತೆರೆದಿದ್ದರಿಂದ ೧೯೩೯ರಲ್ಲಿ ತನ್ನ ಹೆಸರಲ್ಲಿದ್ದ 'ಉಡುಪಿ'ಯನ್ನು ಬಿಟ್ಟು 'ದಿ ಕೆನರಾ ಬ್ಯಾಂಕಿಂಗ್ ಕಾರ್ಪೊರೇಶನ್ ಲಿಮಿಟೆಡ್' ಎಂದು ಹೆಸರು ಬದಲಿಸಿಕೊಂಡಿತು. ಚಿಕ್ಕದಾದ ಹೆಸರುಗಳನ್ನಿಟ್ಟುಕೊಳ್ಳುವುದು. ಹೊಸಕಾಲದ ಫ್ಯಾಶನ್. ವ್ಯವಹಾರದಲ್ಲಿ ಬಳಸುವುದಕ್ಕೂ ಅದು ಸುಲಭ. ಹೀಗಾಗಿ ೧೯೭೨ರಲ್ಲಿ ಎರಡನೆಯ ಸಲ ಬ್ಯಾಂಕು ಹೆಸರು ಬದಲಿಸಿಕೊಂಡು 'ಕಾರ್ಪೊರೇಶನ್ ಬ್ಯಾಂಕ್ ಲಿಮಿಟೆಡ್ ಎಂದಾಯಿತು. ೧೯೮೦ರ ಏಪ್ರಿಲ್ ೧೫ ರಂದು ಬ್ಯಾಂಕು ರಾಷ್ಟ್ರೀಕರಣಗೊಂಡದ್ದರಿಂದ ಅದರ ಹೆಸರಿನಲ್ಲಿದ್ದ ಲಿಮಿಟೆಡ್ ಹೊರಟುಹೋಗಿ ಇಂದಿನ 'ಕಾರ್ಪೊರೇಶನ್ ಬ್ಯಾಂಕ್' ಎಂಬ ಹೆಸರು ಬಂತು.

ಹೆಸರು ಬದಲಾದರೂ ಬ್ಯಾಂಕಿನ ಸ್ಥಾಪಕರು ಹೇರಿದ್ದ ಉದಾತ್ತ ಧ್ಯೇಯ ಧೋರಣೆಗಳಲ್ಲಿ ಬದಲಾವಣೆ ಆಗಲಿಲ್ಲ. ಬ್ಯಾಂಕು ಈಗಲೂ 'ಸರ್ವೇ ಜನಾಃ ಸುಖಿನೋ ಭವಂತು' ಎಂಬ ತನ್ನ ಸ್ಥಾಪಕರ ಧ್ಯೆಯವಾಕ್ಯವನ್ನು ಉಳಿಸಿಕೊಂಡು ಆ ಆಶಯವನ್ನು ಈಡೇರಿಸುತ್ತಾ ಬಂದಿದೆ. ಬ್ಯಾಂಕಿನ 'ಲಾಂಛನ' ಕೂಡಾ ಬದಲಾಗಿಲ್ಲ. ಎಲ್ಲರಿಗೂ ನ್ಯಾಯ ಒದಗಿಸುವುದರ ಸಂಕೇತವಾದ ತಕ್ಕಡಿ, ಬೇಡಿದ್ದನ್ನು ನೀಡುವ ಕಲ್ಪವೃಕ್ಷ, ಕಾಮಧೇನು ಹಾಗೂ ಕೈಗಾರಿಕೆ ಮತ್ತು ಕೃಷಿರಂಗವನ್ನು ಸಂಕೇತಿಸುವ ಚಕ್ರ ಮತ್ತು ತೆನೆಗಳನ್ನು ಹೊಂದಿದ ಬ್ಯಾಂಕಿನ ಲಾಂಛನ ಅತ್ಯಂತ ಅರ್ಥಪೂರ್ಣವಾಗಿದೆ.

೩೦೦ ಕೋಟಿ ರೂ.ಗಳ ಠೇವಣಿ ಗುರಿಯನ್ನು ದಾಟಲು ೭೫ ವರ್ಷಗಳಷ್ಟು ಸಮಯವನ್ನು ತೆಗೆದುಕೊಂಡ ಕಾರ್ಪೊರೇಶನ್ ಬ್ಯಾಂಕ್ ೧೯೮೦ರಲ್ಲಿ ರಾಷ್ಟ್ರೀಕರಣಗೊಂಡ ನಂತರ ತ್ವರಿತ ಗತಿಯಲ್ಲಿ ಅಭಿವೃದ್ಧಿ ಹೊಂದತೊಡಗಿತು. ಬ್ಯಾಂಕಿಂಗ್ ಕ್ಷೇತ್ರದಲ್ಲಿ ಉತ್ತಮ ಸಾಧನೆಗಾಗಿ ಹಲವು ಪ್ರಶಸ್ತಿಗಳು ಕಾರ್ಪೊರೇಶನ್ ಬ್ಯಾಂಕಿಗೆ ಹಾಗೂ ಬ್ಯಾಂಕಿನ ಅಧ್ಯಕ್ಷರಾಗಿದ್ದವರಿಗೆ ಲಭಿಸಿದವು. ಗಣಕೀಕರಣ ಹಾಗೂ ಕಾರ್ಯಕ್ರಮ ನಿರ್ವಹಣೆಯ ಆಧುನೀಕರಣದಲ್ಲಿ ಬ್ಯಾಂಕ್ ಮುಂಚೂಣಿಯಲ್ಲಿತ್ತು. ೧೯೯೪-೯೫ರ ಆರ್ಥಿಕ ವರ್ಷದಲ್ಲಿ ಭಾರತೀಯ ಬ್ಯಾಂಕುಗಳ ಸಂಘ (IBA) ನಡೆಸಿದ ಸಮೀಕ್ಷೆಯಲ್ಲಿ ೨೭ ಸಾರ್ವಜನಿಕ ರಂಗದ ಬ್ಯಾಂಕುಗಳಲ್ಲಿ ಲಾಭ ಗಳಿಕೆಗೆ ಸಂಬಂಧಿಸಿದ ಅಂಶಗಳಲ್ಲಿ ಕಾರ್ಪೊರೇಶನ್ ಬ್ಯಾಂಕ್ ಮೊದಲಸ್ಥಾನ ಗಳಿಸುವ ಮೂಲಕ ಇಡೀ ದೇಶದ ಗಮನ ಸೆಳೆಯಿತು. ನಂತರದ ದಿನಗಳಲ್ಲಿ ಇನ್ನೂ ಹಲವು ಹತ್ತು

ಪ್ರಶಸ್ತಿಗಳು ಕಾರ್ಪೊರೇಶನ್ ಬ್ಯಾಂಕನ್ನು ಅರಸಿಕೊಂಡು ಬಂದವು. ಕಳೆದ ಐದು ವರ್ಷಗಳಲ್ಲಿ ಕಾರ್ಪೊರೇಶನ್ ಬ್ಯಾಂಕ್ ಗಳಿಸಿದ ಮುಖ್ಯ ಪ್ರಶಸ್ತಿಗಳ ವಿವರ ಹೀಗಿದೆ;

- ೨೦೦೧-೨೦೦೩ರ ವರೆಗೆ ಸತತವಾಗಿ ಮೂರು ವರ್ಷ ಭಾರತೀಯ ರಿಸರ್ವ್ ಬ್ಯಾಂಕಿನಿಂದ ಪ್ರವರ್ತನೆಗೊಂಡ IDRBT ಬ್ಯಾಂಕಿಂಗ್ ತಂತ್ರಜ್ಞಾನದ ಅನುಷ್ಠಾನಕ್ಕಾಗಿ ನೀಡುವ ಪ್ರಶಸ್ತಿ ಕಾರ್ಪೊರೇಶನ್ ಬ್ಯಾಂಕಿಗೆ ಲಭಿಸಿದೆ.
- ೨೦೦೩ – ಸಿಂಗಪೂರಿನ 'ದಿ ಏಶಿಯನ್ ಬ್ಯಾಂಕರ್' ನಡೆಸಿದ ಸಮೀಕ್ಷೆಯಲ್ಲಿ ಕಾರ್ಪೊರೇಶನ್ ಬ್ಯಾಂಕ್ ಭಾರತದ ಅತ್ಯಂತ ಬಲಷ್ಠ ಮತ್ತು ಏಶ್ಯಾದ ಎರಡನೆ ಅತ್ಯಂತ ಬಲಿಷ್ಠ ಬ್ಯಾಂಕ್ ಅನ್ನಿಸಿಕೊಂಡಿದೆ.
- ೨೦೦೪- ಗೆ ಹಾಂಕಾಂಗಿನ 'ಫೋರ್ಟ್ ಗ್ಲೋಬಲ್' ನಡೆಸಿದ ಸಮೀಕ್ಷೆಯಲ್ಲಿ ಒಂದು ಬಿಲಿಯನ್ ಡಾಲರ್ ಒಳಗಿನ ಒಟ್ಟು ವ್ಯವಹಾರವುಳ್ಳ ಏಶ್ಯಾದ ಅತ್ಯುತ್ತಮ ೨೦೦ ಕಂಪೆನಿಗಳಲ್ಲಿ ಒಂದು ಎಂದು ಕಾರ್ಪೊರೇಶನ್ ಬ್ಯಾಂಕ್ ಉಲ್ಲೇಖಗೊಂಡಿದೆ.
- ೨೦೦೪- ಔಟ್‌ಲುಕ್ ಪತ್ರಿಕೆಯ ಸಮೀಕ್ಷೆಯಲ್ಲಿ ಕಾರ್ಪೊರೇಶನ್ ಬ್ಯಾಂಕ್ ಭಾರತದ ಸಾರ್ವಜನಿಕ ರಂಗದ ಬ್ಯಾಂಕುಗಳಲ್ಲಿ ಮೊದಲ ಸ್ಥಾನ ಪಡೆದುಕೊಂಡಿದೆ.
- ೨೦೦೫ – ಬಿಸಿನೆಸ್ ಟುಡೆ' ಪತ್ರಿಕೆಯ ಸಮೀಕ್ಷೆಯಲ್ಲಿ ಐದು ಹೂಡಿಕೆದಾರ ಸ್ನೇಹಿ ಕಂಪೆನಿಗಳಲ್ಲಿ ಒಂದು ಎಂಬ ಗಮನಾರ್ಹ ಸ್ಥಾನ.

'ಮೂರ್ತಿ ಚಿಕ್ಕದಾದರೂ ಕೀರ್ತಿ ದೊಡ್ಡದು' ಎಂಬ ನಾಣ್ಣುಡಿಯಂತೆ ಕಾರ್ಪೊರೇಶನ್ ಬ್ಯಾಂಕ್ ಗಾತ್ರದಲ್ಲಿ ಚಿಕ್ಕದಾದರೂ ಜನಪ್ರಿಯತೆಯಲ್ಲಿ ಹಿಂದೆ ಬಿದ್ದಿಲ್ಲ. ನಾಡಿನ ಅನೇಕ ಗಣ್ಯ ವ್ಯಕ್ತಿಗಳು ಬ್ಯಾಂಕಿಗೆ ಭೇಟಿ ನೀಡುವ ಮೂಲಕ ಕಾರ್ಪೊರೇಶನ್ ಬ್ಯಾಂಕಿನ ಕೀರ್ತಿ ಪತಾಕೆ ಮುಗಿಲೆತ್ತರದಲ್ಲಿ ನಲಿದಾಡುವಂತೆ ಮಾಡಿದ್ದಾರೆ. ೧೯೭೫ರಲ್ಲಿ ಅಂದಿನ ಉಪರಾಷ್ಟ್ರಪತಿ ಮಾನ್ಯ ಬಿ.ಡಿ. ಜತ್ತಿಯವರು ಮಂಗಳೂರಿನ ಬ್ಯಾಂಕಿನ ಆಡಳಿತ ಕಚೇರಿಯನ್ನು ಉದ್ಘಾಟಿಸಿದ್ದರು. ೧೯೯೨ರಲ್ಲಿ ಆಗಿನ ರಾಷ್ಟ್ರಪತಿ ಸನ್ಮಾನ್ಯ ಆರ್. ವೆಂಕಟರಾಮನ್ ಮಂಗಳೂರಿಗೆ ಆಗಮಿಸಿ ಬ್ಯಾಂಕಿನ ೮೫ನೇ ಜನ್ಮ ದಿನಾಚರಣೆಯಲ್ಲಿ ಭಾಗವಹಿಸಿದರು. ಈಗಿನ ಪ್ರಧಾನ ಮಂತ್ರಿಗಳಾದ ಸನ್ಮಾನ್ಯ ಡಾ. ಮನಮೋಹನಸಿಂಗ್ ಅವರು ೧೯೯೩ ವಿತ್ತ ಮಂತ್ರಿಗಳಾಗಿದ್ದಾಗ ಕಾರ್ಪೊರೇಶನ್ ಬ್ಯಾಂಕಿನ ರಥಬೀದಿ ಶಾಖೆಯ ಹೊಸ ಕಟ್ಟಡ ಕಾರ್ಪೊರೇಶನ್ ಬ್ಯಾಂಕ್ ಹೌಸ್ ಉದ್ಘಾಟಿಸಲು ಮಂಗಳೂರಿಗೆ ಆಗಮಿಸಿದ್ದರು.

ಕಾರ್ಪೊರೇಶನ್ ಬ್ಯಾಂಕಿನ ಸಮಾರಂಭಗಳಲ್ಲಿ ಭಾಗವಹಿಸಿದ ಗಣ್ಯರಲ್ಲಿ ಮುಖ್ಯ ನ್ಯಾಯಮೂರ್ತಿ ಜಸ್ಟಿಸ್ ಇ.ಎಸ್.ವೆಂಕಟರಾಮಯ್ಯ, ಜಸ್ಟಿಸ್ ಎ.ಎಂ. ಅಹಮದಿ, ಭಾರತೀಯ ರಿಸರ್ವ್ ಬ್ಯಾಂಕಿನ ಗವರ್ನರ್ ಡಾ. ಸಿ. ರಂಗರಾಜನ್ ಮಾಜಿ ವಿತ್ತ ರಾಜ್ಯ ಸಚಿವರಾದ ಶ್ರೀ ಬಾಳಾ ಸಾಹೇಬ್ ವಿಖ ಪಾಟೀಲ್, ಮಾಜಿ ವಿತ್ತ ಸಚಿವರಾದ ಶ್ರೀ ಯಶವಂತ ಸಿನ್ಹಾ ಮುಂತಾದವರು ಇದ್ದಾರೆ. ಎಂಬುದನ್ನು ಹೇಳಿಕೊಳ್ಳಲು ಬ್ಯಾಂಕು ಹೆಮ್ಮೆ ಪಡುತ್ತದೆ. ೨೦೦೪ರಲ್ಲಿ ದ.ಕ. ಜಿಲ್ಲೆಯ ಮಂಗಳೂರು ತಾಲೂಕಿನ ಕಿನ್ನಿಗೋಳಿ ಎಂಬಲ್ಲಿ ಕಾರ್ಪೊರೇಶನ್ ಬ್ಯಾಂಕ್ ೧೫೦೪ ಸ್ವಸಹಾಯ ಗುಂಪುಗಳಿಗೆ ಸಾಲ ನೀಡುವ ಯೋಜನೆಯನ್ನು ಹಮ್ಮಿಕೊಂಡು ಅದನ್ನು ಈಗಿನ ಕೇಂದ್ರ ವಿತ್ತ ಸಚಿವರಾದ ಸನ್ಮಾನ್ಯ ಶ್ರೀ ಪಿ. ಚಿದಂಬರಂ ಉದ್ಘಾಟಿಸಿದರು. ೧೨ ಮಾರ್ಚ್ ೨೦೦೫ರಂದು ಕಾರ್ಪೊರೇಶನ್ ಬ್ಯಾಂಕಿನಲ್ಲಿ ಮಹಾಪ್ರಬಂಧಕರಾಗಿ ಸೇವೆ ಸಲ್ಲಿಸಿ ಈಗ ರಿಸರ್ವ್ ಬ್ಯಾಂಕಿನಲ್ಲಿ ಡೆಪ್ಯೂಟಿ ಗವರ್ನರ್ ಆಗಿರುವ ಶ್ರೀ ವಿಠಲದಾಸ್ ಲೀಲಾಧರ್ ಅವರು ಚಾಲನೆ ನೀಡಿದರು.

೨೦೦೫-೦೬ ಕಾರ್ಪೊರೇಶನ್ ಬ್ಯಾಂಕಿನ ಪಾಲಿಗೆ ಅತ್ಯಂತ ಮಹತ್ವದ ವರ್ಷ. ಬ್ಯಾಂಕಿನ ಈಗಿನ ಅಧ್ಯಕ್ಷರು ಹಾಗೂ ಆಡಳಿತ ನಿರ್ದೇಶಕರಾದ ಶ್ರೀ ವಿ.ಕೆ. ಚೋಪ್ರಾ ಅವರ ನಾಯಕತ್ವದಲ್ಲಿ ಬ್ಯಾಂಕು ಅತ್ಯಂತ ಅರ್ಥಪೂರ್ಣವಾಗಿ ಶತಮಾನೋತ್ಸವವನ್ನು ಆಚರಿಸಲು ಸರ್ವ ಸನ್ನದ್ಧವಾಗಿದೆ. ಅವರು ಹೇಳುವಂತೆ ಸಾಂಪ್ರದಾಯಿಕ ಮೌಲ್ಯಗಳು ಮತ್ತು ಪ್ರಯೋಗಶೀಲ ಧೋರಣೆ, ವಾಣಿಜ್ಯ ದೃಷ್ಟಿ ಮತ್ತು ಸಾಮಾಜಿಕ ಕಾಳಜಿ, ತಂತ್ರಜ್ಞಾನ ಮತ್ತು ಆತ್ಮೀಯ ಸೇವೆ – ಇವುಗಳ ನಡುವೆ. ಸರಿಯಾದ ಸಮತೋಲನದಿಂದ ಕಾರ್ಯ ನಿರ್ವಹಿಸುತ್ತಿರುವುದು ಬ್ಯಾಂಕಿನ ಯಶಸ್ಸಿಗೆ ಕಾರಣ.

ಇವುಗಳ ನಡುವೆ ಸರಿಯಾದ ಸಮತೋಲನದಿಂದ ಕಾರ್ಯ ನಿರ್ವಹಿಸುತ್ತಿರುವುದೆ ಬ್ಯಾಂಕಿನ ಯಶಸ್ಸಿಗೆ ಕಾರಣ.

೧೯೫೬ರಲ್ಲಿ ಬ್ಯಾಂಕು ತನ್ನ ಸುವರ್ಣ ಮಹೋತ್ಸವವನ್ನು ಆಚರಿಸಿದಾಗ ತನ್ನ ಹುಟ್ಟೂರಾದ ಉಡುಪಿಯ ಮಾದರಿ ಪ್ರಾಥಮಿಕ ಶಾಲೆಗೆ ೭೧೨೪ ಚ. ಅಡಿ ಜಾಗವನ್ನು ದಾನವಾಗಿ ನೀಡಿ ಅದರಲ್ಲಿ ೪೧೩೭ ಚ.ಅ. ವಿಸ್ತೀರ್ಣದ ಕಟ್ಟಡವನ್ನು ಕಟ್ಟಿಸಿ ಕೊಟ್ಟಿತ್ತು. ನಂತರ ದಿನಗಳಲ್ಲಿಯೂ ಬ್ಯಾಂಕು ಸಮಾಜಕ್ಕೆ ಉಪಯುಕ್ತವಾಗುವಂಥ ಹಲವಾರು ಯೋಜನೆಗಳನ್ನು ಸ್ವತಃ ಕೈಗೊಳ್ಳುವ ಮೂಲಕ ಮತ್ತು ಅಂಥ ಚಟುವಟಿಕೆಗಳಿಗೆ ಉದಾರ ದೇಣಿಗೆ ನೀಡುವ ಮೂಲಕ ತನ್ನ ಸಾಮಾಜಿಕ ಕಾಳಜಿಯನ್ನು ವ್ಯಕ್ತಪಡಿಸುತ್ತಾ ಬಂದಿದೆ.

ಶತಮಾನೋತ್ಸವದ ಅಂಗವಾಗಿ ಕಾರ್ಪೊರೇಶನ್ ಬ್ಯಾಂಕ್ ಮಂಗಳೂರಿನಲ್ಲಿ ೨ ಕೋಟಿ ರೂ.ಗಳ ವೆಚ್ಚದಲ್ಲಿ ಅತ್ಯಾಧುನಿಕ ಮಾದರಿಯ ಬೃಹತ್‌ಗ್ರಂಥಾಲಯವೊಂದನ್ನು ನಿರ್ಮಿಸಿ ಅದನ್ನು ಸಾರ್ವಜನಿಕರ ಉಪಯೋಗಕ್ಕಾಗಿ ಅರ್ಪಿಸುವ ಯೋಜನೆಯನ್ನು ಹಮ್ಮಿಕೊಂಡಿದೆ. ನಾಲ್ಕು ರಾಜ್ಯಗಳಲ್ಲಿ ೧೦೦ ಹಳ್ಳಿಗಳಲ್ಲಿ ಗ್ರಂಥಾಲಯಗಳನ್ನು ಸ್ಥಾಪಿಸುವ ಇನ್ನೊಂದು ಯೋಜನೆಯಂತೆ ಪ್ರಸ್ತುತ ವರ್ಷದಲ್ಲಿ ೨೫ ಹಳ್ಳಿಗಳಲ್ಲಿ ಗ್ರಂಥಾಲಯ ಆರಂಭಗೊಳ್ಳಲಿದೆ. ಶತಮಾನೋತ್ಸವದ ನೆನಪಿನಲ್ಲಿ ೧೦೦ ಮಂದಿ ಪ್ರತಿಭಾವಂತ ಬಡಮಕ್ಕಳಿಗೆ ವಿದ್ಯಾರ್ಥಿ ವೇತನ ನೀಡಲಾಗುತ್ತಿದೆ. ದೇಶದ ಪ್ರಮುಖ ನಗರಗಳಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸಲಾಗುತ್ತಿದೆ. ೧೯೯೭ರಲ್ಲಿ ಪ್ರಕಟವಾದ ಬ್ಯಾಂಕಿನ ಇತಿಹಾಸವನ್ನು ದಾಖಲಿಸುವ ಹೊತ್ತಗೆಯ ವಿನೂತನ ಆವೃತ್ತಿ ಸ್ಥಿರಗೊಳಿಸುತ್ತದೆ ಹಾಗೂ ಸ್ಥಾಪಕಾಧ್ಯಕ್ಷರ ಜೀವನ ಚರಿತ್ರೆಯ ಪುಸ್ತಕ ರೂಪದಲ್ಲಿ ಪ್ರಕಟಿಸಲಾಗುತ್ತಿದೆ.

ಐದು ವರ್ಷಗಳ ಹಿಂದೆ ಅಂದರೆ ೨೦೦೧ರಲ್ಲಿಯೇ ಕಾರ್ಪೊರೇಶನ್ ಬ್ಯಾಂಕ್ ಶತಮಾನೋತ್ಸವ ವರ್ಷಕ್ಕಾಗಿ ತನ್ನ ಕಾಣ್ಕೆ ಏನೆಂಬುದನ್ನು ನಿರ್ಧರಿಸಿತ್ತು. 'ಆರ್ಥಿಕ ಮಾನದಂಡಗಳು' ದಕ್ಷತೆ, ತಂತ್ರಜ್ಞಾನ, ಉತ್ಪನ್ನ ಹಾಗೂ ಸೇವೆಗಳಲ್ಲಿ ಅಂತಾರಾಷ್ಟ್ರೀಯ ಗುಣಮಟ್ಟವನ್ನು ಸಾಧಿಸಿ ಪ್ರಥಮ ಪ್ರಾಶಸ್ತ್ಯದ ಬ್ಯಾಂಕ್ ಅನ್ನಿಸಿಕೊಳ್ಳುವುದು. ಶತಮಾನೋತ್ಸವ ವರ್ಷದ ಸಂಭ್ರಮದಲ್ಲಿ ಕಾರ್ಪೊರೇಶನ್ ಬ್ಯಾಂಕ್ ತಾನು ಕಂಡ ಕಾಣ್ಕೆಯನ್ನು ಸಾಕ್ಷಾತ್ಕಾರಗೊಳಿಸುವಲ್ಲಿ ಯಶಸ್ವಿಯಾಗಿದೆ. ಶಾಖೆಗಳು ಹಾಗೂ ATMಗಳ ಮೂಲಕ ದೇಶಾದ್ಯಂತ ತನ್ನ ಸೇವಾ ವ್ಯಾಪ್ತಿಯನ್ನು ವಿಸ್ತರಿಸಿದ್ದಲ್ಲದೆ, ವಿದೇಶದಲ್ಲೂ ತನ್ನ ಪ್ರಾತಿನಿಧಿಕ ಕಾರ್ಯಲಯಗಳನ್ನು ಆರಂಭಿಸಲು ಸನ್ನದ್ಧವಾಗಿದೆ.

ಲಕ್ಷಾಂತರ ಗ್ರಾಹಕರ ನಿರಂತರ ಬೆಂಬಲ ದಣಿವರಿಯದ ನೌಕರರ ನಿಷ್ಠೆಯ ದುಡಿಮೆ ಆಡಳಿತ ವರ್ಗದ ಹಾಗೂ ಉನ್ನತ ಅಧಿಕಾರಿಗಳ ಮಾರ್ಗದರ್ಶನದಿಂದ ಕಾರ್ಪೊರೇಶನ್ ಬ್ಯಾಂಕ್ ಸಾರ್ವಜನಿಕ ರಂಗದ ಬ್ಯಾಂಕುಗಳಲ್ಲಿ ಉನ್ನತ ಸ್ಥಾನದಲ್ಲಿ ಶೋಭಿಸುತ್ತಿದೆ.

**– ಎಚ್. ಡುಂಡಿರಾಜ್**

* * *